SAPTHAGIRI
(KANNADA)
SPIRITUAL ILLUSTRATED
MONTHLY
Volume:03, Issue: 1
Pages:56
August - 2023,
Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಆಗಸ್ಟ್ 2023
ಬೆಲೆ ರೂ. 20/-




ತಿರುಮಲ ಸ್ವಾಮಿಯವರ ಪವಿತ್ರೋತ್ಸವಗಳು
27-08-2023 ರಿಂದ 29-08-2023 ರ ವರೆಗೆ

# ತಿರುಮಲ ತಿರುಪತಿ ದೇವಸ್ಥಾನಗಳು

## ವಿಜ್ಞಪ್ತಿ

**'ಸಪ್ತಗಿರಿ' ಬಗ್ಗೆ ತೋರಿಸುವ ಅಭಿಮಾನ ಅನನ್ಯ ಸಾಮಾನ್ಯ**

**ತಿ.ತಿ.ದೇ. ಹಾಗೂ ಪಾಠಕರಿಗೆ ಮಧ್ಯ ವಾರಧಿಯಾಗಿ ಇರುವ 'ಸಪ್ತವರ್ಣ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ**

**'ಸಪ್ತಗಿರಿ' ಪತ್ರಿಕೆ ಬೆಲೆಯಲ್ಲಿ ಬದಲಾವಣೆ**

**ನಿಮ್ಮ ಮನೆಗೆ ಸಪ್ತಗಿರೀಶನು ಬಂದ ಅನುಭೂತಿಯನ್ನು ಪಡೆಯಿರಿ.**

**'ಸಪ್ತಗಿರಿ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆಗೆ ಚಂದಾದಾರರಾಗಿ ಕಟ್ಟಿ.**



**ಸ್ವಾಮಿಯವರ ಅಕ್ಷರ ಪ್ರಸಾದವನ್ನು ಪ್ರತಿ ತಿಂಗಳು ಪಡೆದು ಕೊಳ್ಳಿ**



# ಸಪ್ತಗಿರಿ



**ಆಧ್ಯಾತ್ಮಿಕ ಸಚಿತ್ರಮಾಸಪತ್ರಿಕೆ**

**(ತೆಲುಗು, ತಮಿಳು, ಕನ್ನಡ, ಹಿಂದಿ, ಆಂಗ್ಲ, ಸಂಸ್ಕೃತ ಭಾಷೆಗಳು)**

**..... ಚಂದಾ ವಿವರಗಳು.....**

ಬಿಡಿ ಪ್ರತಿ ರೂ. 20/-

ವಾರ್ಷಿಕ ಚಂದಾ : ರೂ. 240/-

ಆಜೀವ ಚಂದಾ : (12 ವರ್ಷಗಳು) ರೂ. 2,400/-

ವಿದೇಶಿ ವಾರ್ಷಿಕ ಚಂದಾ : ರೂ. 1030/-

## ವಿವರಗಳಿಗೆ:

ಪ್ರಧಾನ ಸಂಪಾದಕರು, ತಿ.ತಿ.ದೇ., ಪ್ರೆಸ್ ಕಾಂಪೌಂಡ್ ಕೆ.ಟಿ.ರೋಡ್ಡು,

ತಿರುಪತಿ : 517 507.ಫೋನ್ : 0877 - 2264363 ,2264543

# ಭಗವದ್ಗೀತೆ

ನ ಚೈತದ್ವಿದ್ಮಃ ಕತರನ್ನೋ ಗರೀಯೋ
ಯದ್ವಾ ಜಯೇಮ ಯದಿವಾನೋ ಜಯೇಯುಃ।
ಯಾನೇವ ಹತ್ವಾನ ಜಿಜೀವಿಷಾಮಃ
ತೇऽವಸ್ಥಿತಾಃ ಪ್ರಮುಖೇ ಧಾರ್ತ ರಾಷ್ಟ್ರಾಃ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -6)

ಯಾವುದು ಸರಿಯೋ ಯಾವುದು ತಪ್ಪೋ ಗೊತ್ತಿಲ್ಲ, ನಾವು ಗೆಲ್ಲುವೆವೋ ಅಥವಾ ಅವರೇ ನಮ್ಮನ್ನು ಗೆಲ್ಲುವರೋ ಅದೂ ಗೊತ್ತಿಲ್ಲ, ಯಾರನ್ನು ಕೊಂದು ನಾವು ಬದುಕ ಬಯಸುವುದಿಲ್ಲವೋ ಅಂಥ ಕೌರವರೇ ಎದುರಿಗೆ ನಿಂತಿದ್ದಾರೆ.





ಕೃಷ್ಣ ಕೃಷ್ಣ ಗೋವಿಂದ ಕೃಷ್ಣ
ಗೋವಿಂದ ಗೋವಿಂದ ಗೋಪಾಲ ಕೃಷ್ಣ

ರಾಜಗೋಪಾಲ ರಮಣೀಯ ವೇಷ
ರಾಧಾವಲ್ಲಭ ಗೋಪಾಲ ಕೃಷ್ಣ
ಕಮಲಾವಲ್ಲಭ ಕಮಲಾಯತಾಕ್ಷ
ಕಂಸಮರ್ದನ ಗೋಪಾಲಕೃಷ್ಣ
ಗಜರಾಜ ರಕ್ಷಕ ಗಂಭೀರ ಹೃದಯ
ಗತಿಜಿತ ಗಜರಾಜ ಗೋಪಾಲಕೃಷ್ಣ

ಶ್ರೀ ಕೃಷ್ಣ ಮಾಂ ಪಾಹಿ ಕೇಶವಾನಂತ
ಶ್ರೀ ರುಕ್ಮಿಣೀನಾಥ ಗೋಪಾಲ ಕೃಷ್ಣ
ಭವ್ಯಗುಣಾಲಯ ಭವ ದುಃಖಹರ
ಭದ್ರಾದಿವಾಸ ಗೋಪಾಲಕೃಷ್ಣ
ಕೃಷ್ಣ ಹರೇ ಮುಗ್ಧ ಕೃಷ್ಣ ಹರೇ
ಬಾಲಕೃಷ್ಣ ಹರೇ ರಾಧಾಕೃಷ್ಣ ಹರೇ

-ಶ್ರೀ ಗೋಪಾಲದಾಸರು

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಯುಗಾಂತಸಮಯೋಚಿತಂ ಭಜತಿ ಯೋಗನಿದ್ರಾರಸಂ ವೃಷಕ್ಷಿತಿಭೃದೀಶ್ವರೇ ವಿಹರಣಕ್ರಮಾಜ್ಜಾಗ್ರತಿ**

**ಉದೀರ್ಣಚತುರರ್ಣವೀಕದನವೇದಿನೀಂ ಮೇದಿನೀಂ ಸಮುದ್ಧ್ರೈ ತವತೀ ದಯೇ ತ್ವದಭಿಜುಷ್ಟಯಾ ದಂಷ್ಟ್ರಯಾ ॥83॥**

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ।

ರಾಮೋ ರಾಮಶ್ಚ ಕೃಷ್ಣಃ ಕಲ್ಕೀ ತಥೈವ ಚ ॥

ಎಂಬ ಪುರಾಣಗಳಲ್ಲಿ ಪ್ರಸಿದ್ಧಿಯನ್ನು ಅನುಸರಿಸಿ,ಮತ್ಸ್ಯ, ಕೂರ್ಮಾವತಾರಗಳನ್ನು ಹಿಂದಿನ ಪದ್ಯದಲ್ಲಿ ವರ್ಣಿಸಿ ಈ ಪದ್ಯದಲ್ಲಿ ವರಾಹವತಾರದಲ್ಲಿ ದಯೆಯು ಮಾಡಿದ ಲೋಕೋಪಕಾರವನ್ನು ವರ್ಣಿಸುತ್ತಾರೆ.

ಯುಗವು ಮುಗಿಯುವ ಕಾಲದಲ್ಲಿ-ಅಂದರೆ ಚತುರ್ಮುಖ ಬ್ರಹ್ಮನಿಗೆ ರಾತ್ರಿಯು ಆರಂಭವಾಗುವ ಪ್ರಳಯ ಕಾಲದಲ್ಲಿ, ಸತ್ಯ ಲೋಕದವರೆಗೆ ಎಲ್ಲ ಲೋಕಗಳೂ ನೀರಿನಲ್ಲಿ ಮುಳುಗಿ ಹೋಗುವುವು. ಹಾಗೆ ಎಲ್ಲ ಸಮುದ್ರಗಳೂ ಉಕ್ಕಿ ಬಂದು ಒಂದಾಗುವುವು. ಆ ಕಾಲದಲ್ಲಿ ಭಗವಂತನು ಯೋಗನಿದ್ರೆಯನ್ನು ಅನುಭವಿಸುತ್ತಾನೆ.ಯೋಗವೆಂದರೆ - ಮತ್ತೆ ಪ್ರಪಂಚವನ್ನು ಸೃಷ್ಟಿಸಿ ಜೀವರನ್ನು ಒಳ್ಳೆಯ ದಾರಿಯಲ್ಲಿರಿಸಿ ಕ್ಷೇಮವನ್ನುಂಟು ಮಾಡಬೇಕೆಂಬ ಚಿಂತೆಯೇ ಆಗಿರುತ್ತದೆ. ಪಡೆಯದೇ ಇದ್ದ ವಸ್ತುವನ್ನು ಪಡೆಯುವುದೇ "ಯೋಗ"ವೆಂದು ಶಾಸ್ತ್ರಗಳು ಹೇಳುವುದಿಲ್ಲವೆ? ಹೀಗೆ ಪ್ರಳಯವು ಮುಗಿಯುವವರೆಗೂ ಯೋಗನಿದ್ರೆಯ ಆನಂದವನ್ನು ಅನುಭವಿಸಿ ಮತ್ತೆ ಸೃಷ್ಟಿಯ ಆರಂಭಕಾಲದಲ್ಲಿ ತನ್ನ ಲೀಲೆಯ ಕ್ರಮದಿಂದ-ಅಂದರೆ ಪ್ರಳಯ ಕಾಲದಲ್ಲಿ ಯೋಗನಿದ್ರೆ, ಮತ್ತೆ ಸೃಷ್ಟಿ ಎಂಬ ಸಂಕಲ್ಪದ ಕ್ರಮದಿಂದ,ಭಗವಂತನು ಜಾಗರೂಕನಾಗಿ ಮಲಗಿರುತ್ತಾನೆ. ಪ್ರಳಯಕಾಲದಲ್ಲಿ ಎಲ್ಲ ಸಮುದ್ರಗಳೂ ಉಕ್ಕಿ ಒಂದಾಗು ವುದರಿಂದ ಭೂಮಿಯು ಎಲ್ಲಿಯೂ ಪಾತಾಳದಲ್ಲಿ ಅಡಗಿಹೋಗುವುದು.ಆಗ ಭೂದೇವಿಗೆ ಉಂಟಾದ ಹಿಂಸೆಯನ್ನು ಅರಿತ ದಯಾ ದೇವಿಯು ಭಗವಂತನನ್ನು ವರಾಹವತಾರವನ್ನೆತ್ತುವಂತೆ ಮಾಡಿ ಆ ಅವತಾರಕ್ಕೇ ವಿಶಿಷ್ಟವಾದ ಕೋರೆದಾಡೆಯಲ್ಲಿ ತಾನು ಪ್ರವೇಶಿಸಿ ಸಮುದ್ರದಲ್ಲಿ ಮುಳುಗಿ ಹೋಗಿರುವ ಬ್ರಹ್ಮಾಂಡವೆಂಬ ಭೂಮಿಯನ್ನು ಮೇಲಕ್ಕೆ ಎತ್ತುವಳು. ಪರಮ ದಯೆಯಿಂದ ಭಗವಂತನು ವರಾಹಾವತಾರವನ್ನು ತಾಳಿ ಭೂಮಿಯನ್ನು ಉದ್ಧರಿಸುವನೆಂದು ಭಾವವು. ಭೂಮಿಯನ್ನು ಉದ್ದರಿಸಿ, ಮೊದಲಿನಂತೆಯೇ ಅದನ್ನು ಸ್ಥಾಪಿಸಿ ಪ್ರಾಣಿಗಳನ್ನು ಸಂರಕ್ಷಿಸುವುದೇ ವರಾಹಾವತಾರದಲ್ಲಿ ದಯೆಯಿಂದುಂಟಾದ ಮುಖ್ಯವಾದ ಉಪಕಾರವು.

ಇಲ್ಲಿ "ಜಾಗ್ರತೀ" ಎಂದೂ "ಕದನವೇದಿನೀ" ಎಂದೂ ಪ್ರಥಮಾಂತವಾದ ಪಾಠವೂ ಉಂಟು. ಆಗ ಎರಡು ಪದಗಳೂ ದಯೆಗೆ ವಿಶೇಷವಾಗುವುದರಿಂದ ಭಗವಂತನು ಯೋಗನಿದ್ರೆಯನ್ನು ಅನುಭವಿಸಿದರೂ ದಯಾದೇವಿಯು ಜಾಗರೂಕಳಾಗಿದ್ದು ತಾನೇ ಭೂಮಿಯ ಶ್ರಮವನ್ನು ಅರಿತು ಉದ್ಧರಿಸುವಳೆಂದು ತಿಳಿಯಬಹುದು.

తిరుమలె తిరుపతి దేవస్థానగళు


# ಸಪ್ತಗಿರಿ

## ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ


ಶ್ರೀ ಶೋಭಕೃತ್ ನಾಮಸಂವತ್ಸರ ಅಧಿಕ ಶ್ರಾವಣ - ನಿಜ ಶ್ರಾವಣ ಮಾಸ ಸಂಚಿಕೆ

ಸಂಪುಟ : 03 ಆಗಸ್ಟ್ - 2023 ಸಂಚಿಕೆ : 01




ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ. ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

# ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಆಡಿಕೃತ್ತಿಕಕುಮಾರಸುಬ್ರಮಣ್ಯಸ್ವಾಮಿದೇವಾಲಯ | -ಶ್ರೀಮತಿ. ಕೆ.ವಿ. ಪದ್ಮಾವತಿ | 07 |
| ವರಮಹಾಲಕ್ಷ್ಮಿ ವ್ರತ | -ಡಾ॥ ಎ. ಕುಮುದ | 09 |
| ನಾಡಿಗೆ ದೊಡ್ಡ ಹಬ್ಬ ನಾಗರಪಂಚಮಿ | - ಹನುಮಂತ ಮ. ದೇಶಕುಲಕುರ್ಣಿ | 11 |
| ನಿಜ ಶ್ರಾವಣ ಮಾಸ | - ಶ್ರೀಮತಿ. ಪಾರಿಜಾತ ಬಿ.ಎಸ್. | 13 |
| ಪುಸ್ತಕ ಪರಿಚಯ - ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳು ಸಾಂಸ್ಕೃತಿಕ ಪರಂಪರೆಗೊಂದು ಕೈಗನ್ನಡಿ | - ಪ್ರಣವ | 14 |
| ಸಿಂಧುಶಯನನೆ ಬಾರೊ ಇಂದಿರಾರಾಧ್ಯನೆ ಬಾರೊ | - ಡಾ॥ ಸುಭಾಸ.ಭೀ. ಕಾಖಂಡಕಿ | 15 |
| ಆಯುರ್ವೇದದ ಆರೋಗ್ಯ ಸೂತ್ರ | - ಡಾ॥ ಎಸ್.ಬಿ.ಎ. ಸಂಧ್ಯಾ | 17 |
| ಜಾಗೃತಿ ಪ್ರಾಣದೇವರ ಕೋರವಾರ ಕ್ಷೇತ್ರ | - ಶ್ರೀರಂಗ ಪುರಾಣಿಕ | 19 |
| ಸಂತಕವಿ ಗೋಸ್ವಾಮಿ ತುಳಸಿದಾಸರು | - ಕೆ.ಎಸ್. ರಾಮಮೂರ್ತಿ | 21 |
| ಆನೇಕಲ್ಲಿನ ಶ್ರೀ ಚನ್ನಕೇಶವ ದೇವಾಲಯ ಮತ್ತುತಿಮ್ಮರಾಯಸ್ವಾಮಿ ದೇವಾಲಯ | -ಕೆಂಗೇರಿ ಚಕ್ರಪಾಣಿ | 22 |
| ಹರಿದಾಸಿಯರು ಕಂಡಂತೆ ಶ್ರೀರಾಘವೇಂದ್ರ ತೀರ್ಥರು | -ಡಾ॥ ಭಾರತೀ ರವೀಂದ್ರ | 24 |
| ನಿತ್ಯ ಹಬ್ಬಗಳ ತೋರಣ ಶ್ರಾವಣ ಮಾಸ | -ಪ್ರತ್ಯಗ್ರ | 31 |
| ಉಪಾಕರ್ಮದ ಮಹತ್ವ | -ಓಂ ಪ್ರಕಾಶ್ ಭಟ್ | 33 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 34 |
| ವಾಮನ ಸ್ಮರಣೆಯ ಓಣಂ | -ಡಾ॥ ಲೀಲಾ ಬಸವರಾಜು | 36 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 38 |
| ತಿರುಕ್ಕುಡಂದೈ (ಕುಂಭಕೋಣಂ) | -ಸೂರ್ಯವಂಶಿ | 40 |
| ಆರೋಗ್ಯ ಪ್ರದಾಯಿನಿ ಬಾದಾಮಿ | - ಡಿ.ಎಸ್. ಬದ್ರಿನಾಥ್ | 42 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 43 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | -ಶ್ರೀಮತಿ. ಎನ್. ಪಾರ್ವತಿ | 44 |
| ಸಂಸ್ಕೃತ ಕಲಿಯೋಣ | - ವಿ. ಪ್ರದೀಪ್ ಕುಮಾರ್ | 45 |
| ನೀತಿ ಕಥೆ -ಹೀಗಿರಲಿ ನಮ್ಮ - ನಿಮ್ಮೆಲ್ಲರ ಗೆಳತನ | - ಎ.ಆರ್. ರಘುರಾಮ | 48 |
| ರಸಪ್ರಶ್ನೆಗಳು | | 50 |
| ಚಿತ್ರ ಕಥೆ - ಬಕಾಸುರವಧೆ | -ಶ್ರೀನಿವಾಸ ದೀಕ್ಷಿತರು | 52 |


ಮುಖಚಿತ್ರ -ಶ್ರೀ ಮಲೆಯಪ್ಪಸ್ವಾಮಿಯವರ ಪವಿತ್ರೋತ್ಸವಗಳು, ತಿರುಮಲೆ
ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರು, ತಿರುಚಾನೂರು


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಂಪಾದಕೀಯ

# ಸನಾತನ ಧರ್ಮ ಮಾರ್ಗದಲ್ಲಿ ಪ್ರಯಣಿಸೋಣ

ವೇದಗಳು, ಉಪನಿಷತ್ತುಗಳು, ಪುರಾಣಗಳು, ಮಂತ್ರಶಾಸ್ತ್ರಗಳು ಸ್ತೋತ್ರಾದಿವಾಙ್ಞಯಸರ್ವಸ್ವ,ಇವೆಲ್ಲವೂ ಸನಾತನ ಧರ್ಮಕ್ಕೆ ಆಧಾರ ಸ್ತಂಭಗಳಂತಹವು ಅವುಗಳಲ್ಲಿನ ಶಾಶ್ವತವಾದ ಸಾರವನ್ನು ಸವಿಯುತ್ತಾ. ಸ್ಮರಿಸುತ್ತಾ ಮುಂದಕ್ಕೆ ಹೋಗುವುದೇ ಜೀವನದ ಸಾಫಲ್ಯತೆ. ಇವುಗಳು ಜೀವನಕ್ಕೆ ಅತೀತವಾದುವು ಎಂದು ತಳ್ಳಿಹಾಕಲಾರದೇ, ಇವು ಜೀವನವನ್ನು ಸರಿಯಾಗಿ ವರ್ಣಿಸುವಂತಾಹ ಅಕ್ಷರ ಸತ್ಯಗಳೆಂದು ಆದರಿಸಿದರೆ ನಮ್ಮ ಬದುಕು ಸುಗಮವಾಗಿ ನಡೆಯುತ್ತದೆ.ಎಲ್ಲಾ ಕಾಲದಲ್ಲೂ ಅನಾದಿಕಾಲದಿಂದಲೂ ಆದರಿಸಲ್ಪಡುತ್ತಿರುವ ಧರ್ಮ ಸನಾತನಧರ್ಮ ಮಾತ್ರಾ ! ''ಏಕಂ ಸತ್ ವಿಪ್ರಾ ಬಹುಧಾವಸಂತಿ'' ಎಂದು ಋಗ್ವೇದದಲ್ಲಿ ಹೇಳಿದಂತೆ ಬೇರೆ ಬೇರೆ, ಮಾನಸ ಭೂಮಿಕೆಯಲ್ಲಿರುವ ಸನಾತನ ಧರ್ಮದಲ್ಲಿನ ಅನೇಕ ಪ್ರಕ್ರಿಯೆಗಳು, ಸಾಧನೆಗಳು ಸಾಧಕರ ಸೌಕರ್ಯಾರ್ತವಾಗಿ ತೋರಿಸಲ್ಪಟ್ಟಿವೆ. ವಿವಿಧ ಶಕ್ತಿಗಳಿಗೆ ಪ್ರತೀಕವಾದ ಅನೇಕ ದೇವತೆಗಳು, ಅವರ ಪೂಜಾವಿಧಾನಗಳು ವಿವಿಧ ವ್ರತಗಳು, ಅವುಗಳನ್ನು ಆಚರಿಸಬೇಕಾದ ಪದ್ಧತಿಗಳೆಲ್ಲವನ್ನು ಸನಾತನಧರ್ಮವೆಂದು ಹೇಳುತ್ತಿರುವ ಹಲವಾರು ಮಾರ್ಗಗಳು.

ನಿತ್ಯ ಜೀವನದಲ್ಲಿ ನಿರಂತರವಾದ ಧರ್ಮಾಚರಣೆಯಿಂದ ನಿಶ್ಚಲವಾದ ನಿರ್ಮಲವಾದ, ಸುಖಜೀವನ ಸಿದ್ಧಿಸುವುದೇ ಅಲ್ಲದೇ, ಆ ಧರ್ಮವೇ ರಕ್ಷಾಕವಚವಾಗಿ ಕಾಪಾಡುತ್ತವೆ. ಪುರಾಣೇತಿಹಾಸದಲ್ಲೂ, ಶಾಸ್ತ್ರವಾಙ್ಮಯದಲ್ಲೂ ಇರುವ ಅನೇಕ ಅಪುರೂಪವಾದ ವಿಷಯಗಳು, ಧರ್ಮಗಳು ಮತ್ತು ನಿತ್ಯ ಜೀವನದಲ್ಲಿ ಆಚರಣೆಗೆಂದೇ ನಿರ್ದೇಶಿಸಲ್ಪಟ್ಟಿವೆ. ಪರಮೇಶ್ವರನು ತಾನು ಸೃಷ್ಟಿಸಿದ ಚರಾಚರಗಳೆಲ್ಲವೂ ಒಂದು ನಿಯಮಿತವಾದ, ನಿಯಮಬದ್ಧವಾದ ಪರಿಧಿಯಲ್ಲಿ ಪ್ರವರ್ತಿಸುವಂತೆ ಕಟ್ಟಳೆ ಮಾಡಿದ ಈ ರೀತಿ ಜಗತ್ ವ್ಯವಹಾರಗಳನ್ನು ಒಂದು ಕ್ರಮದಲ್ಲಿ ನಡೆಯುವಂತೆ ಮಾಡಿದ ಪರಬ್ರಹ್ಮಮಾನವನಬುದ್ಧಿಗೆ ಮಾತ್ರಾಪೂರ್ತಿಯಾದ ಸ್ವಾತಂತ್ರವನ್ನು ನೀಡಿದ. ಮಾನವನು ತನ್ನ ಬುದ್ಧಿಬಲದಿಂದ ಸನ್ಮಾರ್ಗವನ್ನು ಅನುಸರಿಸುತ್ತಾ ಭಗವಂತನು ನೀಡಿದ ಸ್ವತಂತ್ರವನ್ನು ಸದ್ವಿನಿಯೋಗ ಮಾಡಿಕೊಳ್ಳುವುದಕ್ಕೆ ಧರ್ಮಾಧರ್ಮಗಳನ್ನು ಬೋಧಿಸುವಂತಹಾ ವೇದ ರೂಪವಾದ ಶಾಸ್ತ್ರವನ್ನೂ ಭಗವಂತನು ಪ್ರಸಾದಿಸಿದ್ದಾನೆ. ನಾವು ಸನಾತನ ಧರ್ಮಕ್ಕೆ ಸೇರಿದವರು, ಧರ್ಮವೆನ್ನುವುದು ಕಳೆದುಹೋದ. ಈಗ ನಡೆಯುತ್ತಿರುವ, ಮುಂಬರುವ ಕಾಲಗಳಿಗೆ, ಎಲ್ಲಾದೇಶಗಳಿಗೆ, ಎಲ್ಲಾ ಪ್ರಾಂತಗಳಿಗೆ ಅನ್ವಯಿಸುತ್ತಿದೆ. ಆದರೆ ಆಚಾರಗಳು ಮಾತ್ರಾ ದೇಶ , ಕಾಲ, ಪ್ರಾಂತಗಳಿಗೆ ಸೀಮಿತವಾಗಿರುತ್ತದೆ. ಅಧರ್ಮವನ್ನು ಅನುಸರಿಸದೇ ಇರುವುದೇ ನಿಜವಾದ ಧರ್ಮವೆನಿಸಿಕೊಳ್ಳುತ್ತದೆ. ವೇದಗಳು ಸಾಮಾನ್ಯರಿಗೂ ಕೈಗೆಟ್ಟುಕುವಂತೆ ಎಲ್ಲರಿಗೂ ಅರ್ಥವಾಗುವಂತೆ ಇಲ್ಲದಿರುವುದರಿಂದ ದೇಶಕಾಲಾದಿಗಳಿಗೆ ಅನುಗುಣವಾಗಿ ವೇದಕ್ಕೆ ವಿರುದ್ಧವಾಗಿರದ ಕೆಲವು ಆಚಾರಗಳನ್ನು ಮಹರ್ಷಿಗಳು ತಮ್ಮ ಸ್ಮೃತಿಗಳಲ್ಲಿ ನೀಡಿದ್ದಾರೆ. ಈ ನಿಟ್ಟಿನಲ್ಲಿ ತಿರುಮಲೆಯ ಸ್ವಾಮಿಗೆ ಸಂಬಂಧಿಸಿದ ಹಲವಾರು ಆಚಾರಗಳು, ಸಂಪ್ರದಾಯಗಳು, ಮತ ವಿಶಿಷ್ಟತೆ ಮೊದಲಾದವುಗಳ ಬಗೆಗೆ ವಿಶೇಷವಾಗಿ ಶ್ರಮವಹಿಸಿದವರಲ್ಲಿ ಶ್ರೀಮದ್ ಶ್ರೀರಾಮಾನುಜಾಚಾರ್ಯರು, ಶ್ರೀಮದ್ ಶಂಕರಾಚಾರ್ಯರು ಅಗ್ರಗಣ್ಯರೆಂದು ಕೀರ್ತಿಸಲ್ಪಡುತ್ತಿದ್ದಾರೆ.

ಆದರೆ ಈಗಿನ ಕಾಲದಲ್ಲಿ ಒಟ್ಟು ಕುಟುಂಬದ ವ್ಯವಸ್ಥೆಯು ನಶಿಸುತ್ತಿರುವುದು, ಉದ್ಯೋಗಗಳಿಗಾಗಿ ಮಕ್ಕಳು ವಿದೇಶಗಳಿಗೆ, ಇತರ ರಾಜ್ಯಗಳಿಗೆ ವಲಸೆ ಹೋಗುತ್ತಿರುವುದು, ಪಾಶ್ಚಾತ್ಯನಾಗರೀಕತೆ ವಿಸ್ತರಿಸುತ್ತಿರುವುದು ಹಿರಿಯರು ಹೇಳುವುದು, ಮಾಡುವ ಕೆಲಸಗಳು ಅರ್ಥವಿಲ್ಲದವು, ಛಾಂದಸತೆ ಎನ್ನುವ ಭಾವನೆ ಈ ತಲೆ ಮಾರಿನವರಲ್ಲಿ ಹೆಚ್ಚಾಗುತ್ತಿದೆ. ಆದ್ದರಿಂದ ನಮ್ಮ ಸನಾತನ ಸದಾಚಾರಗಳೆಲ್ಲವೂ ಕಣ್ಮರೆಯಾಗುತ್ತಿವೆ. ಆದ್ದರಿಂದ ನಾವು ಏನು ಮಾಡುತ್ತಿದ್ದೇವೆ, ಏನು ಮಾಡಬೇಕು ಎನ್ನುವುದು ಗ್ರಹಿಸುವಂತಾಹ ವಿಚಕ್ಷಣೆಯ ಅವಶ್ಯಕತೆ ಇದೆ.

ಈ ದಾರಿಯಲ್ಲೇ ಸನಾತನ ಧರ್ಮಪ್ರಚಾರದ ಅಂಗವಾಗಿ ತಿರುಮಲೆ ತಿರುಪತಿ ದೇವಸ್ಥಾನದವರ ಹಿಂದೂ ಧರ್ಮಪ್ರಚಾರ ಪರಿಷತ್ತು ಅವರಿಂದ ಸದಾಚಾರಗಳ ಹೆಸರಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕ್ರೊಳ್ಳುತ್ತಿದ್ದಾರೆ. ಅದಕ್ಕೆ ಉದಾಹರಣೆಗಾಗಿ ದೇಶವ್ಯಾಪ್ತವಾಗಿ ಅನೇಕ ಚಿಕ್ಕ ದೊಡ್ಡ ದೇವಾಲಯಗಳು, ಭಜನಮಂದಿರಗಳನ್ನು ನಿರ್ಮಿಸಿರುವುದೇ ಆಗಿದೆ. ಇವೆಲ್ಲವನ್ನೂ ಹಿಂದೂಗಳು ಅದರಲ್ಲೂ ಪ್ರತ್ಯೇಕವಾಗಿ ಯುವ ಪೀಳಿಗೆಯವರು ಸಂಪ್ರದಾಯಗಳ ಬಗೆಗೆ ಅವುಗಳಿಗೆ ಇರುವಂತಹಾ ಬೆಲೆಯನ್ನು ಸಾರ್ಥಕತೆಯನ್ನು ಗ್ರಹಿಸುತ್ತಾರೆಂದು ಸಾಧ್ಯವಾದಷ್ಟೂ ದೇಶಕಾಲ ಪರಿಸ್ಥಿತಿಗಳಿಗೆ ಸರಿಯಾಗಿ ಅವುಗಳನ್ನು ಆಚರಿಸುವುದೇ ಅಲ್ಲದೇ ಮುಂದಿನ ತಲೆಮಾರಿನವರಿಗೂ ಮಾರ್ಗನಿರ್ದೇಶಕರಾಗಿ ಇರುತ್ತಾರೆಂಬ ಮಹದಾಸೆಯೊಂದಿಗೆ ಉದ್ದೇಶದಿಂದ ಮುಂದಕ್ಕೆ ನಡೆಯುತ್ತಿದೆ. ಇದರಿಂದ ನಾವೆಲ್ಲರೂ ಸನಾತನ ಧರ್ಮವನ್ನು ಆಚರಿಸುತ್ತಾ ನೈತಿಕಧರ್ಮಕ್ಕೆ ಒಳಗಾಗಿ ಸನಾತನ ಧರ್ಮದಾರಿಯಲ್ಲೇ ಪ್ರಯಾಣ ಮಾಡಿ ನಮ್ಮ ಜೀವನವನ್ನು ಸುಸ್ಥಿರಗೊಳಿಸಿಕೊಳ್ಳೋಣ.

**ಧರ್ಮೋರಕ್ಷತಿ ರಕ್ಷಿತಃ**



# ಆಡಿಕೃತ್ತಿಕ ಕುಮಾರ ಸುಬ್ರಮಣ್ಯಸ್ವಾಮಿ ದೇವಾಲಯ ಭಕ್ತಿ - ಶ್ರದ್ಧೆಯ ತಾಣ

- ಶ್ರೀಮತಿ. ಕೆ.ವಿ. ಪದ್ಮಾವತಿ

ಬೆಂಗಳೂರು ದಕ್ಷಿಣ ಭಾಗದ ಹನುಮಂತನಗರದ ಶ್ರೀ ಕುಮಾರಸ್ವಾಮಿ ದೇವಾಲಯವು ಭಕ್ತ ಕೋಟಿಯನ್ನು ಆಕ ರ್ಷಿಸುತ್ತಾ ಪುಣ್ಯಸ್ಥಳವಾಗಿದೆ.ಈ ದೇವಾಲಯದ ಚರಿತ್ರೆ 16 ನೇ ಶತಮಾನದಷ್ಟು ಹಿಂದಿನದು. ಆಗ ಇಲ್ಲಿ ಶ್ರೀ ಮೃತ್ಯುಂಜೇಶ್ವರ ಸ್ವಾಮಿಯ ಲಿಂಗವು ಪ್ರತಿಷ್ಠಾಪನೆಯಾದುದಾಗಿ ತಿಳಿದು ಬರುತ್ತದೆ. ಬೆಂಗಳೂರು ನಗರದ ನಿರ್ಮಾತೃ ಮಾಗಡಿ ಕೆಂಪೇಗೌಡರು ಬೆಳೆಯುತ್ತಿರುವ ನಗರದ ಎಲ್ಲೆಯನ್ನು ಗುರುತಿಸಲು ಈ ಲಿಂಗವನ್ನು ಪ್ರತಿಷ್ಠಾಪಿಸಿದರೆಂದು ಪ್ರತೀತಿ ಇದೆ.

1901 ನೇ ಇಸವಿಯಲ್ಲಿ ಟಿ. ನರಹರಿರಾಯರು ದೇವಾಲಯದ ಮುಂಭಾಗವನ್ನು ಕಟ್ಟಿಸಿದರು. ಆದರೆ ಆಗ ದೇವಾಲಯದ ಸುತ್ತ ಭಾರಿ ಬಂಡೆಗಳಿಂದ ಮತ್ತು ಪೊದೆಗಳಿಂದ ಕೂಡಿದ ಭಯಂಕರ ಕಾಡಿನಂತಿತ್ತು.ಈಶ್ವರನ ಭಕ್ತರಾದ ಮಹಾಮಹೋಪಾಧ್ಯಾಯ ಶಿವಶಂಕರ ಶಾಸ್ತ್ರಿಗಳು ಎಂಬುವರು ಮದರಾಸಿನಿಂದ ಬಂದು ದೇವರ ಸೇವೆಯಲ್ಲಿ ಇಲ್ಲಿಯೇ ತಂಗಿದರು. 1923 ನೇ ಇಸವಿಯಲ್ಲಿ ಬೆಟ್ಟದ ಬುಡದಲ್ಲಿ ಸಿಂಹ ವಾಹನನಾದ ಪಂಚಮುಖೀ ಗಣಪತಿಯನ್ನು ಪ್ರತಿಷ್ಠಾಪಿಸಿದರು. 1924ರಲ್ಲಿ ಮೈಸೂರು ಮಹಾರಾಜನಾಗಿದ್ದ ಕೃಷ್ಣರಾಜ ಒಡೆಯರ್‌ರವರು 126 ಎಕರೆ ಜಮೀನನ್ನು ಈ ದೇವಾಲಯಕ್ಕೆ ಇನಾಮಾಗಿ ನೀಡಿದರು.

ಈ ನಡುವೆ ಬೆಟ್ಟದ ಬಂಡೆಯ ಮೇಲಿರುವ ಆದಿಶೇಷನ ದೇವಾಲಯ ಪ್ರಸಿದ್ಧಿ ಪಡೆದಿದೆ. ಸುಬ್ರಮಣ್ಯ ಶಾಸ್ತ್ರೀಯವರು 1956 ನೇ ಇಸವಿಯಲ್ಲಿ ಶ್ರೀ ಕುಮಾರಸ್ವಾಮಿಯ ನವಲೋಹ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪಿಸಿದರು. ದಕ್ಷಿಣದಲ್ಲಿಯೇ ಇದು ಬಹು ಸುಂದರವಾದ ಕಾರ್ತಿಕೇಯ ವಿಗ್ರಹ.

ಆಷಾಢಮಾಸದ ಕೃತ್ತಿಕಾ ನಕ್ಷತ್ರದಂದು ಇಲ್ಲಿ ನಡೆಯುವ ಆಡಿ ಕೃತ್ತಿಕೆ ಮಹೋತ್ಸವವು ಅತ್ಯಂತ ವೈಶಿಷ್ಟ್ಯ ಪೂರ್ಣ ಉತ್ಸವ,ಈ ಮಹೋತ್ಸವ ಕಾಲದಲ್ಲಿ ಕಾವಡಿ ತಂದು ಭಕ್ತಿ ಶ್ರದ್ಧೆಯಿಂದ ಶ್ರೀಕುಮಾರಸ್ವಾಮಿಯನ್ನು ಅಸಂಖ್ಯ ಭಕ್ತರು ಪೂಜಿಸುತ್ತಾರೆ.

**ಕಾವಡಿ ಉದ್ದೇಶ :**

ಕಾವಡಿ ಎಂದರೆ ಹೆಗಲ ಮೇಲೆ ಹೊತ್ತು ತರುವ ಬಿದಿರಿನ ದೊಣ್ಣೆ, ಸಾಮಾನ್ಯವಾಗಿ ನಮಗೆ ಕಂಗೊಳಿಸುವ ಸುಬ್ರಮಣ್ಯ ಕ್ಷೇತ್ರಗಳು ಬೆಟ್ಟಗುಡ್ಡಗಳ ಪರಿಸರದಿಂದ ಕೂಡಿದ್ದು ಬೆಟ್ಟಗಳ ಮೇಲೆ ಕುಮಾರಸ್ವಾಮಿ ದೇವಾಲಯವಿರುತ್ತದೆ.

ಪ್ರಾಚೀನ ಕಾಲದಲ್ಲಿ ಭಕ್ತಾದಿಗಳು ತೀರ್ಥಯಾತ್ರೆಗೆ ಹೋಗುವಾಗ ತಮಗೆ ಪಾಥೇಯ ಸಾಮಾಗ್ರಿಗಳನ್ನು ಒಂದು ಬಿದಿರಿನ ಬುಟ್ಟಿಯಲ್ಲೂ ಮತ್ತೊಂದರಲ್ಲಿ ಪೂಜಾ ಸಾಮಾಗ್ರಿಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ಒಂದು ಬಿದಿರಿನ ದೊಣ್ಣೆಯ ಎರಡೂ ಬದಿಗಳಿಗೂ ಒಂದೊಂದನ್ನು ಕಟ್ಟಿ ಹೆಗಲ ಮೇಲೆ ಹೊತ್ತು ಪ್ರಯಾಣ ಮಾಡುತ್ತಿದ್ದರು.

ಒಂದು ತಲೆಮಾರಿನ ವರ್ತನೆ ಮುಂದಿನ ತಲೆಮಾರಿಗೆ ಸಂಪ್ರದಾಯವಾಗುವುದು ಸಾಮಾನ್ಯ ಲಕ್ಷಣ ಹಾಗೆಯೇ ಒಂದು ಕಾಲಕ್ಕೆ ಸೌಕರ್ಯಾತ್ಮಕವಾದ ಕಾವಡಿ ನಂತರ ಒಂದು ಧಾರ್ಮಿಕ ಆಚರಣೆಯಾಗಿ ಮೂಡಿಬಂತು.

ಕಾವಡಿ ಹೊರುವ ಸಂಪ್ರದಾಯ ಮೊದಲು ಪ್ರಾರಂಭವಾದದ್ದು ತಮಿಳುನಾಡಿನ ರಾಜನೊಬ್ಬನಿಂದ ಎಂಬುದು ತಿರುತ್ತಣ್ಣಿ ಕ್ಷೇತ್ರ ಮಹಿಮೆಯಿಂದ ತಿಳಿದು ಬರುತ್ತದೆ.

ಆತ ತಾನು ಕಾರ್ಯ ಸಿದ್ಧಿಸಿದರೆ ಸಾಮಾನ್ಯ ಜನರಂತೆ ತಾನೂ ಕಾವಡಿ ಹೊತ್ತು ದೇಹ ದಂಡಿಸಿ ಕಾಲ್ನಡಿಗೆಯಲ್ಲಿಯೇ ಬಂದು ಸ್ವಾಮಿಯ ದರ್ಶನ ಪಡೆಯುವುದಾಗಿ ಹರಕೆ ಹೊತ್ತನು. ಆತನ ಕಾರ್ಯಕೈಗೂಡಿದ್ದರಿಂದ ಆತ ಅಂದಿನಿಂದ ಅಜೀವ ಪರ್ಯಂತವಾಗಿ ಪ್ರತಿ ವರ್ಷವೂ ತಪ್ಪದೇ ಆಡಿಕೃತ್ತಿಕೆಯೆಂದು ಕಾವಡಿ ಸಲ್ಲಿಸುತ್ತಾ ಬಂದನು. ಆತ ನಡೆದದ್ದೇ ಮಾರ್ಗವೆಂಬಂತೆ ರಾಜನನ್ನು ಪ್ರಜೆಗಳೂ ಅನುಸರಿಸಿ, ತಾವುಗಳೂ ಕಾವಡಿ ಹೊರಲು ಪ್ರಾರಂಭಿಸಿದರು. ಇದನ್ನು ಆಚರಿಸುವ ಭಕ್ತರು ವಿಶೇಷವಾಗಿ ತಮಿಳರು ಹಾಗೂ ಕನ್ನಡಿಗರೂ ಆಚರಿಸುತ್ತಾರೆ.



ಕಾವಡಿ ಹೊರುವ ದಿನ ಬೆಳಿಗ್ಗೆ ಎಲ್ಲರೂ ಮಂಗಳ ಸ್ನಾನ ಮಾಡಿ, ಮನೆಯಲ್ಲಿ ದೇವರ ಮುಂದೆ ಬಾಳೆ ಎಲೆಯನ್ನು ಹಾಕಿ ಮಾಡಿರುವ ಪದಾರ್ಥಗಳನ್ನು ಬಡಿಸಿ ದೇವರಿಗೆ ಅರ್ಪಿಸಿ ಕಾವಡಿ ಹೊತ್ತು ಹೊರಡುತ್ತಾರೆ. ಇದಕ್ಕೆ 'ತಳಿಗೆ ಸೇವೆ' ಎಂದು ಹೆಸರು. ಇವರು ಸ್ವಾಮಿಯ ಸೇವೆ ಮುಗಿಸಿ ಬರುವ ವೇಳೆಗೆ ದೇವರು ಇದನ್ನು ಸ್ವೀಕರಿಸಿರುತ್ತಾನೆ ಎಂಬ ನಂಬಿಕೆಯೇ ಇದಕ್ಕೆ ಕಾರಣ.

ಕಾವಡಿ ಹೊರುವ ವ್ಯಕ್ತಿ ಶುಚಿರ್ಭೂತನಾಗಿ ಹಣೆಯಲ್ಲಿ ಭಸ್ಮ ಗಂಧಾದಿಗಳನ್ನು ಮತ್ತು ಅರಿಶಿನದ ಬಟ್ಟೆಯನ್ನು ಉಡುವುದು ಒಂದು ನಿಯಮ. ಆಗ ಜನ ಸಾಮಾನ್ಯರಿಗೆ ಅವನು ದೈವಸಮಾನ. ಅವನೊಡನೆ ಇತರರು ಷಣ್ಮುಖನ ಸ್ತೋತ್ರ ಮಾಡುತ್ತಾ ಹಿಂದೆ ಸಾಗುತ್ತಾರೆ.

ಕಾವಡಿ ಹೊರುವುದರ ಜತೆಗೆ ಕೆಲವರು ಸೂಜಿಗೆ ನಿಂಬೆ ಹಣ್ಣು ಚುಚ್ಚಿ, ಅದನ್ನು ತಮ್ಮ ಶರೀರಕ್ಕೆ ಚುಚ್ಚಿಕೊಳ್ಳುತ್ತಾರೆ. ಅಂತೆಯೇ ಭಕ್ತರು ಅಗ್ನಿಕೊಂಡ ಹಾಯುವುದು, ಇತ್ಯಾದಿ ಸಂಪ್ರದಾಯಗಳು ಆಚರಣೆಯಲ್ಲಿವೆ. ತನಗೆ ಈ ಶರೀರದ ವ್ಯಾಮೋಹವಿಲ್ಲವೆಂಬುದನ್ನು ತೋರಿಸಿ ಕೊಟ್ಟು ಮುಕ್ತಿಯನ್ನು ಅಪೇಕ್ಷಿಸುವ ಜೀವಿ ಇವನು ಎಂದು ಇದರ ಹಿನ್ನೆಲೆ.

ಪುಷ್ಪಕಾವಡಿ, ಪಾಲ್‌ಕಾವಡಿ, ಪನ್ನೀರ್ ಕಾವಡಿ, ಮಚ್ಚೆ ಕಾವಡಿ ಇವೇ ಮೊದಲಾದ 15 ಕ್ಕೂ ಹೆಚ್ಚಿನ ವಿವಿಧ ಕಾವಡಿಗಳು ಕಂಡು ಬರುತ್ತವೆ. ಇದೊಂದು ನಯನ ಮನೋಹರ ದೃಶ್ಯವಾಗಿದ್ದು ಭಕ್ತರು ಕಾವಡಿಗಳನ್ನು ಹೊತ್ತು ಬೆಂಗಳೂರಿನ ಮೂಲೆ ಮೂಲೆಗಳಿಂದ ಬಂದು ಸೇವೆ ಸಲ್ಲಿಸುತ್ತಾರೆ.

## ಶ್ರೀ ವರಾಹಸ್ವಾಮಿ ದೇವಾಲಯ




ಈ ಸಪ್ತಗಿರಿಗಳಲ್ಲಿ ಮೊಟ್ಟಮೊದಲು ನೆಲೆಸಿರುವ ದೈವ ಶ್ರೀವರಾಹಸ್ವಾಮಿ ಆದ್ದರಿಂದಲೇ ತಿರುಮಲೆಯನ್ನು ಆದಿ ವರಾಹ ಕ್ಷೇತ್ರವೆಂದು ಕರೆಯುತ್ತಾರೆ. ಶ್ರೀವರಾಹ ಸ್ವಾಮಿಯನ್ನು ದರ್ಶಿಸಿದ ನಂತರವೇ ಭಕ್ತರು ಶ್ರೀವೇಂಕಟೇಶ್ವರನನ್ನು ದರ್ಶಿಸುವುದು ಈ ಕ್ಷೇತ್ರದ ಸಂಪ್ರದಾಯವಾಗಿದೆ.

ಸ್ವಾಮಿ ಪುಷ್ಕರಿಣಿಯ ವಾಯುವ್ಯ ಮೂಲೆಯಲ್ಲಿ ಪೂರ್ವಾಭಿಮುಖವಾಗಿ ಶ್ರೀವರಾಹಸ್ವಾಮಿಯು ಭೂದೇವಿಯೊಂದಿಗೆ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ.

ಇನ್ನು ಕಲಿಯುಗದ ಆರಂಭದಲ್ಲಿ ಶ್ರೀನಿವಾಸನು ವೈಕುಂಠದಿಂದ ನೇರವಾಗಿ ಇಲ್ಲಿಗೆ ಬಂದು ತಾನು ವಾಸಿಸುವುದಕ್ಕಾಗಿ ನೂರು ಅಡಿಗಳ ಸ್ಥಳವನ್ನು ದಾನವನ್ನಾಗಿ ನೀಡಬೇಕೆಂದು ಶ್ರೀವರಾಹಸ್ವಾಮಿಯನ್ನು ಕೇಳಿದರಂತೆ, ಅದಕ್ಕೆ ಪ್ರತಿಯಾಗಿ, ಪ್ರಥಮ ದರ್ಶನ, ಪ್ರಥಮ ಪೂಜೆ, ಪ್ರಥಮ ನೈವೇದ್ಯ ಎಂಬ ಒಪ್ಪಂದದಿಂದ ದಾನ ಪತ್ರವನ್ನು ಶ್ರೀವರಾಹಸ್ವಾಮಿಗೆ ಬರೆದು ಕೊಟ್ಟು, ನೂರು ಅಡಿಗಳ ಸ್ಥಳವನ್ನು ಶ್ರೀವೇಂಕಟೇಶ್ವರನು ದಾನವಾಗಿ ಪಡೆದನಂತೆ, ಅಂದಿನ ನಿಯಮದ ಪ್ರಕಾರವೇ ಇಂದಿಗೂ ಶ್ರೀ ತಿರುಮಲೆಯಲ್ಲಿ ಶ್ರೀಆದಿವರಾಹಸ್ವಾಮಿಗೆ ಮೊದಲ ಪೂಜೆ, ಮೊದಲ ನೈವೇದ್ಯಗಳು ನಡೆಯುತ್ತಿವೆ.

# ವರಮಹಾಲಕ್ಷ್ಮಿ ವ್ರತ



- ಡಾ॥ ಎ. ಕುಮುದ
97319 03752

ಹಬ್ಬ ಎಂದರೆ ಮನೆಯ ಗೃಹಿಣಿಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಅದರಲ್ಲೂ ಗೌರಿಹಬ್ಬ, ಹಾಗೂ ವರ ಮಹಾ ಲಕ್ಷ್ಮೀ ಹಬ್ಬದ ಸಡಗರವಂತೂ ಬಹು ವಿಶೇಷ. ಈ ಹಬ್ಬಗಳಲ್ಲಿ ಮಾರು ಕಟ್ಟೆಗಳಲ್ಲಂತೂ ಅರಿಶಿನ, ಕುಂಕುಮ, ಬಗೆ ಬಗೆ ಹೂವುಗಳ ರಾಶಿ, ಬಾಗಿನದ ಮೊರ ಹಾಗೂ ಅದರ ಪದಾರ್ಥಗಳಿಂದ ಹಬ್ಬದ ಕಳೆ ತುಂಬಿ ತುಳುಕುತ್ತಿರುತ್ತದೆ. ಅದನ್ನು ನೋಡುವುದೇ ಕಂಗಳಿಗೆ ದೊಡ್ಡ ಹಬ್ಬ, ಮನಸ್ಸಿಗೂ ಹರ್ಷವಾಗುತ್ತದೆ. ಈಗ ನಾವು ವರಮಹಾಲಕ್ಷ್ಮೀ ಹಬ್ಬದ ಬಗ್ಗೆ ತಿಳಿಯೋಣ. ಈ ಹಬ್ಬವನ್ನು ಆಚರಿಸಲು ಯಾರು ಹೇಳಿದರು? ಯಾರಿಗೆ ಹೇಳಿದರು? ಅದನ್ನು ಆಚರಿಸುವ ಕ್ರಮ ಎಲ್ಲವನ್ನೂ ತಿಳಿಯೋಣ.

ಮೊದಲಿಗೆ ಪುರಂದರದಾಸರ ಒಂದು ಕೃತಿ ನೋಡೋಣ

ಬಂದಾಳು ನಮ್ಮ ಮನೆಗೇ ಶ್ರೀಮಹಾಲಕ್ಷ್ಮೀ
ಸಂದೇಹವಿಲ್ಲದಲೆ ॥ಪ॥
ಮಾಸ ಶ್ರಾವಣ ಶುದ್ಧ ಶುಕ್ರವಾರ
ಪೌರ್ಣಿಮೆ ಮುನ್ನಾ ದಿವಸ
ಭೂಸುರರೆಲ್ಲ ಕೂಡಿ ಸಾಸಿರನಾಮ ಪಾಡಿ
ವಾಸವಾಗಿರಲಿಕ್ಕೆ ವಾಸುದೇವನ ಸಹಿತ ॥೧॥

ಪುರಂದರದಾಸರು ಮಹಾಲಕ್ಷ್ಮಿಯು ಬರುವ ದಿನವನ್ನು ಸ್ಪಷ್ಟೀಕರಿಸಿದ್ದಾರೆ.

"ಶ್ರಾವಣೇ ಮಾಸೇ ಶುಕ್ಲೇ ಚ ಪೌರ್ಣಮ್ಯಾಂ ಭಾರ್ಗವಾಸರೆ" ಎಂದು ಶಾಸ್ತ್ರ ಹೇಳುತ್ತದೆ.

ಪರಮೇಶ್ವರನು ಪಾರ್ವತಿಗೆ ವರಮಹಾಲಕ್ಷ್ಮೀ ವ್ರತಾಚರಣೆ ಬಗ್ಗೆ ಹೇಳಿದ ಪರಿ.

ದಿವ್ಯ ರಮಣೀಯವೂ ಪವಿತ್ರವೂ ಆದ ಕೈಲಾಸ ಪರ್ವತದ ಶಿಖರದಲ್ಲಿ ಪಾರ್ವತಿಯೊಡನೆ ಆಸೀನನಾಗಿದ್ದ ಮಹಾದೇವನನ್ನು ನಾರದರು, ಪರಾಶರರು, ಅಗಸ್ತ್ಯರು , ವಾಲ್ಮೀಕಿಗಳು, ಮುಂತಾದ ತಪಸ್ವಿಗಳು ದರ್ಶನ ಮಾಡಿ ಧನ್ಯರಾದೆವೆಂದುಕೊಂಡರು.ಅದು ಅನೇಕ ಸುಗಂಧಭರಿತ ಪುಷ್ಪಗಳನ್ನು ನೀಡುವ ವೃಕ್ಷಗಳಿಂದಲೂ ಕುಬೇರ ವರುಣಾದಿ ಅಷ್ಟದಿ ಕ್ಪಾಲಕರಿಂದ ರಕ್ಷಿಸಲ್ಪಟ್ಟ ದಿವ್ಯಕ್ಷೇತ್ರವೆನಿಸಿತ್ತು. ಇಂತಹ ಶಿಖರದಲ್ಲಿ ಪಾರ್ವತಿಯು ಪತಿಯನ್ನು "ಹೇ ಸ್ವಾಮಿ ! ಸಕಲ ಲೋಕಗಳ ಹಿತ ಚಿಂತಕನೂ, ರಕ್ಷಕನೂ ಆಗಿರುವ ನೀವು ನಮಗೆ ರಹಸ್ಯವೂ ಮಂಗಳಕರವೂ ಆದ ಒಂದು ವ್ರತವನ್ನು ತಿಳಿಸಿ ಎಂದಳು. ಆಗ ಸದಾಶಿವನು "ವ್ರತಗಳಲ್ಲೆಲ್ಲಾ ಶ್ರೇಷ್ಠವಾದ ವ್ರತವೊಂದಿದೆ. ಅದನ್ನು ಶ್ರಾವಣ ಮಾಸದ ಶುಕ್ಲ ಪಕ್ಷದಲ್ಲಿ ಎರಡನೆಯ ಶುಕ್ರವಾರ ಅಥವಾ ಪೌರ್ಣಮಿಗೆ ಮುನ್ನ ಶುಕ್ರವಾರದಂದು ಆಚರಿಸಬೇಕು. ಇದರಿಂದ ಸೌಭಾಗ್ಯ, ಮಂಗಳಕಾರ್ಯಗಳನ್ನು ಬಯಸುವ ಸ್ತ್ರೀಯರು ಆಚರಿಸಿದರೆ ಉತ್ತಮ ಹಾಗೂ ನಿಶ್ಚಿತ ಫಲ ದೊರೆಯುವುದು ಎಂದನು.

ಈ ವ್ರತವನ್ನು ಮೊದಲು ಯಾರು ಆಚರಿಸಿ ಸಂತೋಷವನ್ನು ಹೊಂದಿದರು ಎಂದು ಪಾರ್ವತಿಯು ಕೇಳಲಾಗಿ ಈಶ್ವರನು.ಬಂಗಾರದ ಪ್ರಕಾರಗಳಿಂದ ಕೂಡಿ ಸಕಲಾಭರಣಗಳಿಂದ ಲಂಕೃತವಾದ ಕುಂಡಿನ ಎಂಬ ಪಟ್ಟಣವೊಂದಿದೆ. ಅಲ್ಲಿ ಚಾರುಮತಿಯೆಂಬ ಬ್ರಾಹ್ಮಣ ಸ್ತ್ರೀ ಯೊಬ್ಬಳಿದ್ದಳು. ಆಕೆ ಪತಿಭಕ್ತಿ ಪಾರಾಯಣಳು ಹಾಗೂ ಅತ್ತೆ ಮಾವಂದಿರ ಶುಶ್ರೂಷೆ ಮಾಡುವುದರಲ್ಲಿ ನಿರತಳಾಗಿರುತ್ತಿದ್ದಳು, ಅಲ್ಲದೆ ಶಾಸ್ತ್ರಜ್ಞಳಾಗಿಯೂ ಇದ್ದಳು.

ನಿರ್ಮಲ ಮನಸ್ಸುಳ್ಳವಳಾಗಿದ್ದಳು. ಚಾರುಮತಿಗೆ ಲಕ್ಷ್ಮೀ ದೇವಿಯು ಸ್ವಪ್ನದಲ್ಲಿ ಪ್ರಸನ್ನಳಾಗಿ 'ಎಲೈ ಮಂಗಳಕರೆ ನಿನಗೆ ಶುಭವನ್ನುಂಟು ಮಾಡಲು ವರಲಕ್ಷ್ಮಿಯೆಂಬ ನಾನು ಬಂದಿರುವೆನು. ಶ್ರಾವಣ ಮಾಸದಲ್ಲಿ ಪೌರ್ಣಮಿಗೆ ಮುಂಚೆ ಬರುವ ಶುಕ್ರವಾರ ನನ್ನನ್ನು ಆರಾಧಿಸು. ನಿನ್ನ ಇಷ್ಟಾರ್ಥಗಳು ನೆರವೇರುತ್ತದೆ' ಎನ್ನಲು ಚಾರುಮತಿಯು ಸ್ವಪ್ನದಲ್ಲಿಯೇ ಆ ದೇವಿಯನ್ನು ಕುರಿತು ನೀನು ಜಗನ್ಮಾತೆಯು, ಪುಣ್ಯ ಸ್ವರೂಪಿಯು ಶರಣರನ್ನು ಪಾಲಿಸುವಳು. ಮೂರು ಲೋಕಗಳಲ್ಲೂ ಸ್ತುತಿಸಲ್ಪಡುವಳು. ವಿಷ್ಣುವಿನ ವಕ್ಷೋನಿವಾಸಿನಿ.ನಿನ್ನ ಕಟಾಕ್ಷಕ್ಕೆ ಪಾತ್ರರಾದವರೇ ಧನ್ಯರು. ಹಿಂದಿನ ಜನ್ಮದಲ್ಲಿ ನಾನು ಅನೇಕ ಪುಣ್ಯ ಕಾರ್ಯ ಮಾಡಿರುವುದರಿಂದಲೇ ನಿನ್ನ ದರ್ಶನ ಭಾಗ್ಯ ಇಂದು ನನಗೆ ಲಭಿಸಿದೆ ಎಂದಳು.ಆಗ ವರಲಕ್ಷ್ಮಿಯು ಚಾರುಮತಿಗೆ ವರಗಳನ್ನಿತ್ತು ಹರಸಿ ಅಂತ ರ್ಧಾನಳಾದಳು.

ಸ್ವಪ್ನದಿಂದ ಎಚ್ಚೆತ್ತ ಚಾರುಮತಿಯು ಆನಂದದಿಂದ ಮತ್ತೆ ನಿದ್ರಿಸದೆ ಸೂರ್ಯೋದಯಕ್ಕೆ ಮುಂಚೆಯೇ ಎದ್ದು ಸ್ನಾನವನ್ನು ಮುಗಿಸಿ ತನ್ನ ಸ್ವಪ್ನ ವೃತ್ತಾಂತವನ್ನು ತನ್ನ ಬಂಧುಗಳಿಗೆಲ್ಲ ಸಂತೋಷದಿಂದ ಹೇಳಿಕೊಂಡಳು.







ಅವರೆಲ್ಲರೂ ಚಾರುಮತಿಯ ಸ್ವಪ್ನ ಶುಭಕರವಾದುದೆಂದು ತಿಳಿದು ಎಲ್ಲರೂ ಭಕ್ತಿಯಿಂದ ವರಮಹಾಲಕ್ಷ್ಮೀ ವ್ರತವನ್ನು ಆಚರಿಸಲು ಸಿದ್ಧರಾದರು.

ಶ್ರಾವಣ ಶುದ್ಧ ಶುಕ್ರವಾರ ಎಂದು ಬರುವುದೋ ಎಂದು ಕಾತರದಿಂದ ನಿರೀಕ್ಷಿಸುತ್ತಿದ್ದರು. ಆ ಶುಭ ದಿನವು ಬಂದಿತು. ಆಗ ಸ್ತ್ರೀಯರೆಲ್ಲರೂ ಆತ್ಯುತ್ಸಾಹದಿಂದ ನಿರ್ಮಲಮನಸ್ಕರಾಗಿ ಶುದ್ಧ ವಸ್ತ್ರಗಳಿಂದ ಅಲಂಕರಿಸಿಕೊಂಡರು, ನಂತರ ಹೊಸದಾದ ಅಕ್ಕಿಯಿಂದಲೂ ಆಲದ ಬಳ್ಳಿಯಿಂದಲೂ ಕಲಶದಲ್ಲಿ ವರಮಹಾಲಕ್ಷ್ಮೀಯನ್ನು ಆವಾಹನೆ ಮಾಡಿ ಚಾರುಮತಿಯೊಡನೆ ಭಕ್ತಿಯಿಂದ ವ್ರತವನ್ನು ಆಚರಿಸಿದರು.

ಪದ್ಮಾಸನೆ ಪದ್ಮಕರೇ ಸರ್ವಲೋಕೈಕ ಪೂಜಿತೇ
ನಾರಾಯಣಪ್ರಿಯೇ ದೇವಿ ಸುಪ್ರೀತಾ ಭವ ಸರ್ವದಾ

ಎಂದು ಪ್ರಾರ್ಥಿಸಿದರು. ಷೋಡಶೋಪಚಾರಗಳಿಂದ ಪೂಜಿಸಿದ ನಂತರ ಹನ್ನೆರಡು ಗಂಟುಗಳಿಂದ ಕೂಡಿದ ದಾರವನ್ನು ಪೂಜಿಸಿದರು. ತುಪ್ಪದಿಂದ ಮಾಡಿದ ಭಕ್ಷ್ಯಗಳನ್ನು ಲಕ್ಷ್ಮೀದೇವಿಗೆ ನಿವೇದಿಸಿದರು. ತುಪ್ಪದ ದೀಪಗಳನ್ನು ಬೆಳಗಿಸಿ ಆರತಿ ಮಾಡಿದರು. ಪೂಜಿಸಿದ ದಾರವನ್ನು ಬಲಗೈಗೆ ಭಕ್ತಿಯಿಂದ ಕಟ್ಟಿಕೊಂಡರು. ಬ್ರಾಹ್ಮಣರಿಗೆ ವಾಯನ ದಾನವನ್ನು ದಕ್ಷಿಣೆ ಸಹಿತ ಕೊಟ್ಟರು. ಮುತ್ತೈದೆಗೆ ಮೊರದ ಬಾಗಿನವನ್ನು ಸೀರೆ ಕುಪ್ಪಸ ಸಹಿತ ಅರಿಶಿನ ಕುಂಕುಮವನ್ನು ಕೊಟ್ಟು ಆಶೀರ್ವಾದ ಪಡೆದರು. ನಂತರ ಪ್ರಸಾದವನ್ನು ಭುಂಜಿಸಿದರು. ವ್ರತಗಳಲ್ಲೆಲ್ಲಾ ಈ ವ್ರತವು ಬಹಳ ಉತ್ತಮವೂ ಫಲಪ್ರದವೂ ಆಗಿದೆ ಎಂದು ಪ್ರತೀತಿಯಿದೆ.

ಶ್ರೀ ಲಕ್ಷುಮಿದೇವಿ ವರಲಕ್ಷ್ಮಿದೇವಿ ॥ಪ॥
ಸೌಭಗ್ಯವೀಯೆ ಸದಯೆ ಸಾಮ್ರಾಜ್ಯವೀಯೆ ಜನನಿ
ಸಕಲ ಲೋಕಕೆ ಸಾಕ್ಷಿಯಾಗಿರುವೆ ತಾಯೆ ॥೧॥
ಶ್ರಾವಣ ಶುಕ್ರವಾರ ದಿವಸದಲಿ ಸಕಲಾಭೀಷ್ಟವೀಯೆ
ಶರಣಾಗತರನು ಕರುಣದಿ ಕಾಯಲು ಬಾಬಾ ॥೨॥
ಕೊಲ್ಹಾಪುರದಲಿ ನೆಲೆಸಿ ಸಲ್ಲೀಲೆಯಿಂದಲಿ ಇರುವಾ
ಪರಮಪುರುಷ ಶ್ರೀ ಪುರಂದರವಿಠಲನ ರಾಣಿ ॥೩॥

## ರಸಪ್ರಶ್ನೆಗಳು

**ಸಪ್ತಗಿರಿ ಕ್ವಿಜ್ ಜೂನ್ 2023 ತಿಂಗಳ ರಸಪ್ರಶ್ನೆಯ ಉತ್ತರಗಳು**

11

1.ಮೊದಲ ಏಕಾದಶಿ
2.ಸತ್ಯವಾನ
3.ಕ್ಷಯ ಸಂವತ್ಸರ ಜ್ಯೇಷ್ಠ ತ್ರಯೋದಶಿ
4.ಮಣ್ಣಿನಿಂದ
5.14 ದಿನ
6. ಕೃಷ್ಣಪಕ್ಷದಲ್ಲಿ
7. ರಾಮಜಪ
8. ನಂಜುಂಡೇಶ್ವರ ದೇವಾಲಯ
9. ವಿಶ್ವ ಸಂಗೀತ
10.1975 ರಂದು
11.ಜೂನ್ 21 ರಂದು
12.ರಂಗವಿಠಲ
13.ಮಂಜುಲವಲ್ಲಿ
14. ಏಕಾದಶಿ
15.ಕೈಲಾಸಕ್ಕೆ



# ನಾಡಿಗೆ ದೊಡ್ಡ ಹಬ್ಬ ನಾಗರಪಂಚಮಿ

- ಹನುಮಂತ ಮ. ದೇಶಕುಲಕರ್ಣಿ

94803 64915



ನಾಡಿಗೆ ದೊಡ್ಡ ಹಬ್ಬವಾದ ನಾಗರಪಂಚಮಿಯ ಶ್ರಾವಣ ಮಾಸದಲ್ಲಿ ಬರುವ ದೊಡ್ಡ ಹಬ್ಬ. ಪಂಚಮಿಯ ದಿನ ನಾಗರಕಲ್ಲಿಗೆ, ಹಾವಿನ ಹುತ್ತಕ್ಕೆ ಅಥವಾ ಮನೆಗೇ ತಂದ ಹುತ್ತದ ಮಣ್ಣಿಗೆ ಇಲ್ಲವೆ ರಂಗೋಲಿಯಿಂದ ಬರೆದ, ಅಕ್ಕಿ ಹಿಟ್ಟಿನಿಂದ ಮಾಡಿದ ನಾಗರ ಹಾವಿನ ಚೈತ್ರಕ್ಕೆ ಶ್ರದ್ಧಾಭಕ್ತಿಗಳಿಂದ ಹಾಲೆರೆಯುವುದು ಹಿಂದಿನಿಂದ ನಡೆದು ಬಂದ ಸಂಪ್ರದಾಯ. ಶ್ರಾವಣ ಮಾಸದಲ್ಲಿ ಅದೂ ಐದನೇ ದಿನವೇ ಏಕೆ ಹಾಲೆರೆಯರಬೇಕು? ಇದನ್ನು ಸಹೋದರ, ಸಹೋದರಿಯರ ಹಬ್ಬ ಎಂದು ಏಕೆ ಕರೆಯುತ್ತಾರೆ? ಅಂದು ತುಪ್ಪ ಅಥವಾ ಎಣ್ಣೆಯಿಂದ ಕರಿದ ತಿಂಡಿ ತಿನಿಸು ಏಕೆ ಮಾಡುವುದಿಲ್ಲ ಎಂಬ ಪ್ರಶ್ನೆಗಳೂ ಉದ್ಭವಿಸುತ್ತವೆ.

ಚಂದ್ರನು ಪೂರ್ಣಿಮಾ ದಿನ ಶ್ರಾವಣ ನಕ್ಷತ್ರದಲ್ಲಿ ಇರುವ ಮಾಸವೇ ಶ್ರಾವಣ ಚಂದ್ರ ಮನಃಕಾರಕ ಶ್ರಾವಣದಲ್ಲಿ ಚಂದ್ರನ ಪ್ರಭಾವ ಹೆಚ್ಚು. ಚಂದ್ರನು ಶ್ರಾವಣ ತಿಂಗಳ ಮೊದಲ ದಿನವಾದ ಪಾಡ್ಯದಿಂದ ಪ್ರತಿ ದಿನವೂ 12 ಡಿಗ್ರಿಯಂತೆ ಸಂಚರಿಸುತ್ತಾನೆ. ಪಂಚಮಿಯ ದಿನದ ಹೊತ್ತಿಗೆ 60 ಡಿಗ್ರಿಗೆ ಬರುತ್ತಾನೆ. ಅಂದರೆ ಚಂದ್ರ ಆ ಹೊತ್ತಿಗೆ ಒಂದು ಕೋನದಲ್ಲಿರುತ್ತಾನೆ. ಚಂದ್ರನು ತ್ರಿಕೋನಕ್ಕೆ ಬಂದಾಗ ಭೂವರ್ಗ ಹಾಗೂ ಜಲವರ್ಗದ ಮೇಲೆ ಅವನ ಪ್ರಭಾವ ಹೆಚ್ಚಾಗಿರುತ್ತದೆ ಎನ್ನುವುದು ಪಂಚಾಂಗಕರ್ತರ ಲೆಕ್ಕಾಚಾರ. ಚಂದ್ರಪ್ರಭಾವ ಹೆಚ್ಚಿರುವ ಕಾಲದಲ್ಲಿ ಸಾತ್ವಿಕ ಆಹಾರ ಸೇವಿಸುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ ಎನ್ನುವುದು ಅನುಭವದ ಮಾತು ಶ್ರಾವಣ ಶುದ್ಧ ಪಂಚಮಿಯ ದಿನ ಉದ್ದಿನ ಕಡುಬು ಹಾಗೂ ಸಿಹಿ ಕಡುಬು, ತುಂಬಿಟ್ಟು ಮೊದಲಾದ ಸಾತ್ವಿಕ ಆಹಾರಗಳನ್ನು ಮಾಡುತ್ತಾರೆ. ಅಂದು ಸಾತ್ವಿಕ ಆಹಾರ ಸೇವಿಸಿ ಪಾರಮಾರ್ಥಿಕ ಚಿಂತನೆ ಮಾಡುವುದರಿಂದ ಮನಸ್ಸಿಗೆ ಉಲ್ಲಾಸ ದೊರಕುತ್ತದೆ.

ಹುತ್ತಕ್ಕೆ ಅಥವಾ ಹುತ್ತದ ಮಣ್ಣಿಗೆ ಹಾಲೆರೆಯುವುದೇಕೆ? ಶ್ರಾವಣ ಮಾಸದ ಪಂಚಮಿಯ ದಿನ ಹುತ್ತಕ್ಕೆ ಹಾಲೆರೆಯುವ ಬಗ್ಗೆ ಎರಡು ಪ್ರಮುಖ ಕಾರಣಗಳನ್ನು ನಮ್ಮ ಹಿರಿಯರು ನೀಡುತ್ತಾರೆ. ಹುತ್ತಕ್ಕೆ ಹಾಲೆರೆಯುವುದು ಕೃತಜ್ಞತೆಯ ಸಂಕೇತವೆಂಬುದು ಮೊದಲ ಕಾರಣವಾದರೆ, ಹುತ್ತಕ್ಕೆ ಹಾಲೆರೆಯುವುದರಿಂದ ಸಂತಾನೋತ್ಪತ್ತಿಗೆ ನೆರವಾಗುತ್ತದಂತೆ.

ಸಾಮಾನ್ಯವಾಗಿ ಜ್ಯೇಷ್ಠ - ಆಷಾಢದ ನಡುವೆ ಮಳೆಯಾಗುತ್ತದೆ. ಈ ಕಾಲದಲ್ಲಿ ರೈತರು ಬಿತ್ತನೆಯಲ್ಲಿ ತೊಡುಗುತ್ತಾರೆ. ಶ್ರಾವಣದ ಆರಂಭದ ಹೊತ್ತಿಗೆ ಬಿತ್ತಿದ ಬೀಜಗಳು ಪೈರಾಗಿ ಬೆಳೆದಿರುತ್ತವೆ. ಬೆಳೆದ ಪೈರನ್ನು ರೈತನ ಶತ್ರುಗಳ ಪಟ್ಟಿಯಲ್ಲಿ ಸೇರಿರುವ ಇಲಿಗಳು ತಿಂದು, ಅವನಿಗೆ ಅಪಾರ ಹಾನಿ ಉಂಟು ಮಾಡುತ್ತವೆ. ಇಲಿಗಳನ್ನು ತಿನ್ನುವ ಮೂಲಕ ಹಾವು ರೈತನ ಮಿತ್ರನಾಗಿದೆ. ಈ ಋಣವನ್ನು ರೈತ ಹುತ್ತಕ್ಕೆ ಹಾಲು ಎರೆಯುವ ಮೂಲಕ ತೀರಿಸುತ್ತಾನೆ. ಶ್ರಾವಣದಲ್ಲಿ ನಾಗರಪಂಚಮಿಯ ದಿನ ಹುತ್ತಕ್ಕೆ ಹಾಲೆರೆಯುವುದು ಹಿಂದಿನಿಂದ ನಡೆದ ಬಂದ ಪದ್ಧತಿ. ಹುತ್ತಕ್ಕೆ ಹಾಲೆರೆಯುವ ಬಗ್ಗೆ ಕೆಲವು ಪಂಡಿತರು ನೀಡುವ ವೈಜ್ಞಾನಿಕ ಇಂತಿದೆ. ನಂಬುವುದು ಬಿಡುವುದು ನಿಮಗೆ ಬಿಟ್ಟಿದ್ದು. ನಮಗೆಲ್ಲಾ ತಿಳಿದಿರುವಂತೆ ಹಾವುಗಳು ಎಂದೂ ಹುತ್ತ ಕಟ್ಟುವುದಿಲ್ಲ. ಗೆದ್ದಲುಗಳು ಕಟ್ಟುವ ಹುತ್ತದಲ್ಲಿ ಹಾವು ವಾಸಿಸುತ್ತದೆ. ಗೆದ್ದಲುಗಳು ತಮ್ಮ ಬಾಯಿಯಿಂದ ಒಸರುವ ರಸದ ನೆರವು ಪಡೆದು, ಭೂಮಿಯ ಒಳಗಿನಿಂದ ಮಣ್ಣನ್ನು ಹೊರೆತೆಗೆದು ಹುತ್ತವನ್ನು ನಿರ್ಮಿಸುತ್ತವೆ. ಬಹು ನವಿರಾದ, ನಯವಾದ ಮಣ್ಣಿನಿಂದ ಗೆದ್ದಲು ಕಟ್ಟಿದ ಹುತ್ತ, ಮಳೆ, ಗಾಳಿಗಳಿಗೂ ಜಗ್ಗುವುದಿಲ್ಲ. ಹುತ್ತದ ಒಳಗೆ ಕೂಡ ಗೆದ್ದಲುಗಳು ನವಿರಾದ ಮಣ್ಣಿನಿಂದ ನೆಲವನ್ನು ಸಮತಟ್ಟು ಮಾಡಿರುತ್ತವೆ. ಇದನ್ನು ಎಲ್ಲಾದರೂ ಹುತ್ತ ಅಗೆದಾಗ ನೀವೂ ಕಾಣಬಹುದು. ಹುತ್ತದೊಳಗೆ ನೆಲ ಮೆತ್ತನೆಯ ಹಾಸಿಗೆಯಂತಿರುತ್ತದೆ. ಅಲ್ಲಿ ಒಂದು ಚಿಕ್ಕ ಕಲ್ಲು ಕೂಡ ಇರುವುದಿಲ್ಲ.

ಸಾಮಾನ್ಯವಾಗಿ ನಾಗರ ಎಂಬ ಒಂದು ಚರ್ಮವ್ಯಾಧಿ ಬಂದಾಗ ಜನರು ಹುತ್ತಕ್ಕೆ ಹಾಲೆರೆದು ಆ ಹುತ್ತದ ಮಣ್ಣನ್ನು ಮೈಗೆಲ್ಲಾ ಹಚ್ಚಿಕೊಳ್ಳುತ್ತಾರೆ. ಅಂದರೆ ಹುತ್ತದ ಮಣ್ಣಿನಲ್ಲಿ ಔಷಧೀಯ ಗುಣವಿದೆ ಎಂಬುದನ್ನು ಇದು ಸಾಬೀತು ಪಡಿಸುತ್ತದೆ ಎಂಬುದು ಪಂಡಿತರು ತಮ್ಮ ವಾದಕ್ಕೆ ನೀಡುವ ಪುಷ್ಠಿ, ಅಣ್ಣತಮ್ಮಂದಿರ ಹಬ್ಬ ನಾಗರಪಂಚಮಿ ಅಣ್ಣ - ತಂಗಿಯರ ಹಬ್ಬ. ಅಂದು ಸೋದರ ಸೋದರಿಯರು ಹೊಟ್ಟೆ ತಣ್ಣಗಿರಲಿ, ಬೆನ್ನು ತಣ್ಣಗಿರಿಲಿ ಎಂದು ಹೇಳಿ ಹುತ್ತಕ್ಕೆ ಎರೆದ ಹಾಲನ್ನು ಸಹೋದರರ ಹೊಕ್ಕಳಿಗೂ, ಬೆನ್ನಿಗೂ ಹಚ್ಚಿ ಒಳ್ಳೆಯದಾಗಲಿ ಎಂದು ಹಾರೈಸುತ್ತಾರೆ. ಅಶ್ವತ್ಥಕಟ್ಟೆಗಳ ಕೆಳಗೆ ಪ್ರತಿಷ್ಠಾಪಿಸಿದ



ನಾಗರ ಕಲ್ಲುಗಳಿಗೆ ಪಂಚಮಿಯ ದಿನ ಮುತ್ತೈದೆಯರು ಮಡಿಯಲ್ಲಿ ಹಾಲೆರೆದು ಪೂಜಿಸುತ್ತಾರೆ. ಸುಬ್ರಹ್ಮಣ್ಯೇಶ್ವರನ ದೇವಾಲಯಗಳಲ್ಲೂ ನಾಗರ ಪಂಚಮಿಯ ದಿನ ವಿಶೇಷ ಪೂಜೆಗಳು ನಡೆಯುತ್ತವೆ. ಶ್ರಾವಣ ಶುದ್ಧ ಪಂಚಮಿಯಂದು ನಾಗರಕಲ್ಲಿಗೆ ಹಾಲೆರೆಯುವ ಮೂಲಕ ತಾಯಿಯ ಹಾಲ ಋಣ ತೀರಿಸಬಹುದು ಎಂಬ ನಂಬಿಕೆಯೂ ಇದೆ.

ಕೆಲವು ಕೆಡ ದಿಟ ನಾಗರನಿಗೇ ಹಾಲೆರೆವ ರೂಢಿಯೂ ಇದೆ.ಅಣ್ಣತಮ್ಮಂದಿರ ಹಬ್ಬ ಎನ್ನುವುದೇಕೆ. ಹಿಂದೆಲ್ಲ ಒಂದೂರಿನಿಂದ ಮತ್ತೊಂದೂರಿಗೆ ಹೋಗಲು ಈಗಿನಂತೆ ವಾಹನ ಸೌಕರ್ಯ ಇರುತ್ತಿರಲಿಲ್ಲ. ಆಗ ಅಣ್ಣ ತಮ್ಮಂದಿರು ಅಕ್ಕತಂಗಿಯರು ಒಬ್ಬರನ್ನೊಬ್ಬರು ನೋಡುವುದೇ ಕಷ್ಟವಾಗಿತ್ತು. ಕನಿಷ್ಠ ವರ್ಷಕ್ಕೊಮ್ಮೆಯಾದರೂ ಅಣ್ಣ - ತಂಗಿ, ಅಕ್ಕ - ತಮ್ಮಂದಿರು ಸಂಸಲಿ ಬಾಂಧವ್ಯ ಹಾಗೇ ಚಿರವಾಗಿರಲಿ ಎಂದು ಹಿರಿಯರು ಈ ಹಬ್ಬವನ್ನು ಸಹೋದರ-ಸಹೋದರಿಯರ ಹಬ್ಬ ಎಂದು ಕರೆದರು. ಬಿತ್ತನೆ ಕಾರ್ಯ ಮುಗಿಸಿ, ವರ್ಷದ ಮೊದಲ ಫಸಲಿನ ನಿರೀಕ್ಷೆಯಲ್ಲಿರುವ ಸೋದರರು, ಸಹೋದರಿಯರನ್ನು ಕರೆಸಿ, ಉಡಿ ತುಂಬಿ ಕಳುಹಿಸಲಿ ಎಂಬುದೂ ಈ ಹಬ್ಬದ ಆಶಯವಾಗಿದೆ. ಮನುಷ್ಯನ ಚಿಂತನೆಯ ಕೇಂದ್ರವೇ ಮೆದುಳು. ಮೆದುಳು ಕೂಡ ಸರ್ಪದ ಆಕಾರದಲ್ಲೇ ಇದೆ. ಹೀಗಾಗಿ ಇದಕ್ಕೆ ಕುಂಡಲಿನಿ ಎನ್ನುವುದು. ಮನಃ ಕಾರಕನಾದ ಚಂದ್ರನ ಪ್ರಭಾವವಿರುವ ಮಾಸದಲ್ಲಿ ಕುಂಡಲಿಯನ್ನು ಸಾತ್ವಿಕ ರೀತಿಯಲ್ಲಿ ಉದ್ರೇಕಿಸುವುದೇ ಈ ಸರ್ಪಪೂಜೆಯ ಪರಮಾರ್ಥವಾಗಿದೆ.

ಓಂ ನಮೋ ವೇಂಕಟೇಶಾಯ

## ಕ್ರೈಮ್ ಪೋಲೀಸ್ ಎಚ್ಚರಿಕೆ - ಕಳ್ಳರಿದ್ದಾರೆ ಜಾಗ್ರತೆ

1. ತಿರುಮಲೆ ಪುಣ್ಯಕ್ಷೇತ್ರ. ಭಕ್ತರು ಇದನ್ನು ಗಮನಿಸಿ ನಡೆದುಕೊಳ್ಳಬೇಕು.
2. ಯಾತ್ರಿಕರು ತಿ.ತಿ.ದೇ.ಉಪ- ವಿಚಾರಣಾಧಿಕಾರಿ ಕಾರ್ಯಾಲಯದಿಂದ ತೆಗೆದುಕೊಂಡ ಬೀಗದ ಕೈ ಸರಿಯಾಗಿ ನೋಡಿ ಕೊಳ್ಳಬೇಕು. ಎರಡು ಬೀಗದ ಕೈ ಮೇಲೆ ಒಂದೇ ನಂಬರ್ ಇದೆಯೋ ಇಲ್ಲವೋ ನೋಡಿಕೊಳ್ಳಬೇಕು. ನಂತರವೇ ಬೀಗದ ಕೈ ತೆಗೆದು ಕೊಳ್ಳಬೇಕು. ಹಾಗೇನಾದರೂ ಬಾಗಿಲು ತೆರೆದುಕೊಂಡ ಪಕ್ಷದಲ್ಲಿ ಈ ವಿಷಯವನ್ನು ಸಂಬಂಧಿಸಿದ ತಿ.ತಿ.ದೇ.,ಉಪರಣಾಧಿಕಾರಿ ಕಾರ್ಯಾಲಯದಲ್ಲಿ ಮತ್ತು ಕೆಳಗೆ ತಿಳಿಸಿದ ಪೋಲಿಸ್ ರವರ ಪೋನ್ ನಂಬರ್‌ಗೆ ತಿಳಿಸತಕ್ಕದ್ದು.
3. ಒಂದು ವೇಳೆ ಯಾತ್ರಿಕರು ಕಾಟೇಜಿನ ಒಳಗಡೆ ಇದ್ದರೇ. ಹೊರಗಡೆ ಇರುವ ಕಬ್ಬಿಣದ ಗೇಟಿಗೆ ಬೀಗವನ್ನು ಹಾಕಿ ಒಳಗಡೆ ಇರುವ ಮರದ ಬಾಗಿಲಿಗೆ ಚಿಲುಕ ಹಾಕಿ ವಿಶ್ರಾಂತಿ ತೆಗೆದು ಕೊಳ್ಳಬೇಕು.ಪರಿಚಯ ಇಲ್ಲದ ವ್ಯಕ್ತಿಗಳ ಮುಖಾಂತರ ತಿ.ತಿ.ದೇ. ಅವರ ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಳ್ಳಬಾರದು. ಅವರ ಮಾತಿಗೆ ಮರುಳಾಗಿ ಮೋಸಹೋಗಬಾರದು, ಕೊಠಡಿಗೋಸ್ಕರ ತಿ.ತಿ.ದೇ, ಯವರನ್ನು ಸಂಪರ್ಕಿಸಬೇಕು.
4. ಬೆಲೆಬಾಳುವ ವಸ್ತುಗಳನ್ನು ರೂಮಿನಲ್ಲಿ ಇಡಬಾರದು. ಅವುಗಳನ್ನು ತಿ.ತಿ. ದೇವಸ್ಥಾನಗಳ ಲಾಕರ್‌ಗಳಲ್ಲಿ ಭದ್ರಪಡಿಸಿ,ತಕ್ಕ ರಸೀದಿಯನ್ನು ಪಡೆಯಬೇಕು.
5. ಚಿಕ್ಕ ಮಕ್ಕಳನ್ನು ಅಥವಾ ವೃದ್ಧರನ್ನು ತಮ್ಮ ಲಗ್ಗೇಜಿ ಬಳಿ ಕಾವಲಿಗೆ ಇಟ್ಟು ಹೋಗಬಾರದು. ಪರಿಚಯವಿಲ್ಲದವರು ಕೊಡುವ ನೀರು, ಟೀ, ಕಾಫೀ ಕೂಲ್ ಡ್ರಿಂಕ್ಸ್ ಮುಂತಾದ ತಿಂಡಿಗಳನ್ನು ತೆಗೆದುಕೊಳ್ಳಲೇ ಬಾರದು.
6. ಸೆಲ್‌ಫೋನ್ ಚಾರ್ಜಿಂಗ್‌ನಲ್ಲಿ ಇಟ್ಟು ದೂರ ಹೋಗಬಾರದು, ಅಲ್ಲಿಯೇ ಇರಬೇಕು. ಉಚಿತ ಬಸ್ಸುಗಳಲ್ಲಿ ಹತ್ತುವಾಗ, ಇಳಿಯುವಾಗಿ ತಮ್ಮ ಪರ್ಸು, ಹ್ಯಾಂಡ್ ಬ್ಯಾಗ್, ಆಭರಣಗಳನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು.
7. ಸ್ನಾನದ ರೂಮುಗಳಿಗೆ ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಂಡು ಹೋಗಬಾರದು. ತಮ್ಮ ಜೊತೆ ಬಂದ ಬಂಧುಗಳ ಹತ್ತಿರ ಅಥವಾ ತಿ.ತಿ.ದೇವಸ್ಥಾನಗಳ ಲಾಕರ್‌ಗಳಲ್ಲಿ ಭದ್ರ ಪಡಿಸಬೇಕು. ಲಾಡು ಟೋಕನ್, ಲಾಡು ಪ್ರಸಾದ ಕೌಂಟರ್ ಹಾಗೂ ಕ್ಯೂ ಸರದಿಯ ಸಾಲಿನಲ್ಲಿ ಪರ್ಸು, ಬ್ಯಾಗು, ಆಭರಣಗಳನ್ನು ಜಾಗ್ರತೆಯಾಗಿ ಇಟ್ಟುಕೊಳ್ಳಬೇಕು.
8. ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಬಸ್ಸು ಹತ್ತುವಾಗ ಆಭರಣಗಳನ್ನು ಭದ್ರವಾಗಿ ನೋಡಿಕೊಳ್ಳಬೇಕು.ಪುಷ್ಕರಣಿಯಲ್ಲಿ ಸ್ಥಾನಕ್ಕೆ ಹೋಗುವಾಗ ತಮ್ಮ ಲಗ್ಗೇಜ್ ಹತ್ತಿರ ಖಚಿತವಾಗಿ ತಮ್ಮವರನ್ನು ಕಾವಲಿಗೆ ಇಡಬೇಕು.
9. ಆಲಯದ ಒಳಗೆ ಬೆಳ್ಳಿಯ ಬಾಗಿಲ ಹತ್ತಿರ, ಗರ್ಭಗುಡಿಯಲ್ಲಿ, ದರ್ಶನ ಸಮಯದಲ್ಲಿ, ತೀರ್ಥ ತೆಗೆದುಕೊಳ್ಳುವ ಸ್ಥಳದಲ್ಲಿ, ಹುಂಡೀ ಹತ್ತಿರ ಹೆಚ್ಚಿನ ಜನದಿಂದ ನುಗ್ಗಾಟವಾಗುವಾಗ ಅಲ್ಲಿ ನಿಮ್ಮ ಪರ್ಸು, ಹ್ಯಾಂಡ್‌ಬ್ಯಾಗ್, ಹಣವನ್ನು ಕಳೆದುಕೊಳ್ಳುವ ಸಂಭವ ವುಂಟು, ಅವುಗಳನ್ನು ಭದ್ರವಾಗಿ ಇಟ್ಟುಕೊಳ್ಳಬೇಕು.

**ಗಮನಿಸಿ :** ಅನುಮಾನ ವಸ್ತುಗಳು, ವ್ಯಕ್ತಿಗಳನ್ನು ಕಂಡ ಕೂಡಲೇ ಕ್ರೈಮ್ ಪೋಲೀಸರಿಗೆ ಈ ಕೆಳಗಿನ ಫೋನ್‌ನಂಬರ್‌ಗಳಿಗೆ ಫೋನ್ ಮಾಡಬೇಕೆಂದು ಕೋರುತ್ತೇವೆ.

| | | |
|---|---|---|
| **ಕ್ರೈಮ್ ಡಿ.ಎಸ್.ಪಿ.** | : | 94910 86022 |
| **ಪೋಲೀಸ್ ಸ್ಟೇಷನ್** | : | 0877 - 2289029, 0877- 2263423 |
| **ಎಸ್.ಐ. I** | : | 9440796770 |
| **ಎಸ್.ಐ. II** | : | 73968 72309 |
| **ಎಸ್.ಐ.** | : | 97044 85303 |
| **ಎಸ್.ಐ.** | : | 81790 44987 |

# ನಿಜ ಶ್ರಾವಣ ಮಾಸ

- ಶ್ರೀಮತಿ. ಪಾರಿಜಾತ ಬಿ.ಎಸ್.
90083 56898

ಹಬ್ಬಗಳೆಂದರೆ ಸಂಭ್ರಮ ಸಡಗರ ಮನಸ್ಸಿಗೆ ಖುಷಿ ಹೊಸ ವಸ್ತ್ರ, ವಿಶೇಷ ಭಕ್ಷ್ಯ ಭೋಜನ, ಅಲಂಕಾರ, ಪೂಜೆ, ಹವನ, ಹೋಮ, ಆಚರಣೆಗಳು ಮನಸ್ಸಿಗೆ ಸಂತೋಷದ ಜೊತೆಗೆ ಹೊಸ ಹುರುಪನ್ನು ತುಂಬುತ್ತದೆ.ಆದರೆ ಹಬ್ಬ ಹರಿದಿನಗಳು ಕೇವಲ ಸಂಭ್ರಮ ಮಾತ್ರವಲ್ಲದೆ ಧಾರ್ಮಿಕವಾಗಿ,ಸಾಮಾಜಿಕವಾಗಿ, ಪೌರಾಣಿಕವಾಗಿ ಆಯಾ ಪ್ರಾಕೃತಿಕ ಸನ್ನಿವೇಶಗಳಿಗೆ ತಕ್ಕಂತೆ ಹಬ್ಬಗಳು ರಚಿತವಾಗಿವೆ.ಮಾನವನ ಜೀವನದೊಂದಿಗೆ ಅವಿನಾಭಾವ ಹೊಂದಿ ಅದೊಂದು ಬಿಡಿಸಲಾಗದ ಭಾಗವಾಗಿರುವುದು ಪ್ರಪಂಚದ ಏಕೈಕ ದೇಶ ಭಾರತದಲ್ಲೇ ಎಂದರೆ ತಪ್ಪಾಗದು. ತನ್ನ ಸಾಮಾಜಿಕ ಜೀವನದೊಂದಿಗೆ ಸಾಂಸ್ಕೃತಿಕ ಉತ್ಸವವಾಗಿ ಹಬ್ಬಗಳನ್ನು ಒಂದಿಲ್ಲೊಂದು ಹಿನ್ನೆಲೆಯಲ್ಲಿ ಆಚರಿಸುವುದು ಬಹು ಹಿಂದಿನಿಂದಲೂ ಬಂದ ರೂಢಿ.ಹಿಂದೂ ಕ್ಯಾಲೆಂಡರ್ ಪ್ರಕಾರ ಆಷಾಢ ಮಾಸದ ನಂತರ ಬರುವ ಶ್ರಾವಣ ಮಾಸದಿಂದ ಕಾರ್ತಿಕದವರೆಗೂ ವಿಶೇಷ ವಿವಿಧ ರೀತಿಯ ಹಬ್ಬಗಳು ಪ್ರತಿ ನಿತ್ಯವೂ ಜೀವನಕ್ಕೆ ಉತ್ಸಾಹವನ್ನು ತುಂಬುತ್ತವೆ. ಮಾರ್ಗಶಿರದಿಂದ ಫಲ್ಗುಣದವರೆಗೂ ಚೈತ್ರದಿಂದ ಜೇಷ್ಠದವರೆಗೂ ಜೀವನದ ಜಂಜಾಟದಿಂದ ಸ್ವಲ್ಪ ಶ್ರಮದ ಸಮಯದಲ್ಲಿ ಪ್ರಕೃತಿ, ನದಿ, ಅಗ್ನಿ, ವಾಯು, ವರುಣ, ಬೆಟ್ಟಗುಡ್ಡ ಇತ್ಯಾದಿಗಳೊಂದಿಗಿನ ಒಡನಾಟ, ಪೂಜೆ, ಆರಾಧನೆ ಹೀಗೆ ವಿಶಿಷ್ಟ ಹಾಗೂ ವೈವಿಧ್ಯಮಯವಾದ ಸಾಂಸ್ಕೃತಿಕ ಆಚರಣೆಗಳು ರೂಢಿಯಲ್ಲಿವೆ.

ಹಿಂದೂ ಕ್ಯಾಲೆಂಡರ್ ಪ್ರಕಾರ ಶ್ರಾವಣ ಮಾಸವು ಅತ್ಯಂತ ಮಂಗಳಕರವಾದುದೆಂದು ಹೇಳಲಾಗುತ್ತದೆ. ಈ ಮಾಸದಲ್ಲಿ ಭಗವಂತನನ್ನು ವಿವಿಧ ರೂಪದಲ್ಲಿ ಆರಾಧಿಸಲಾಗುತ್ತದೆ. ತಾಯಿ ಪಾರ್ವತಿ, ಲಕ್ಷ್ಮಿ, ಪರಮೇಶ್ವರ ಹಾಗೂ ವಿಷ್ಣುವನ್ನು ವಿಶೇಷವಾಗಿ ಆರಾ ಧಿಸಲಾಗುತ್ತದೆ. ಈ ವರ್ಷ ಶ್ರಾವಣದಲ್ಲಿ ಅಧಿಕ ಶ್ರಾವಣ ಮತ್ತು ನಿಜ ಶ್ರಾವಣವೆಂದು ಎರಡು ರೀತಿಯ ಶ್ರಾವಣಮಾಸಗಳನ್ನು ಆಚರಿಸಲಾಗುತ್ತದೆ. ಪ್ರತೀ ಮೂರು ವರ್ಷಗಳಿಗೊಮ್ಮೆ ಅಧಿಕ ಮಾಸ ಆಚರಿಸಲಾಗುತ್ತದೆ. ಅಧಿಕವೆಂದರೆ ಹೆಚ್ಚುವರಿ, ಮಾಸವೆಂದರೆ ತಿಂಗಳು ಅಧಿಕ ಮಾಸವನ್ನು "ಪುರುಷೋತ್ತಮ ಮಾಸ " ವೆಂದು ಕರೆಯಲಾಗುತ್ತದೆ. ಅಧಿಕ ಮಾಸವು ಸೌರಮಾನ ಕ್ಯಾಲೆಂಡರ್‌ಗೆ ಸೇರಿಸಲಾದ ಹೆಚ್ಚುವರಿ ಚಂದ್ರಮಾಸವಾಗಿದೆ. ಅಧಿಕ ಮಾಸವು ವರ್ಷದ ಎಲ್ಲಾ ಮಾಸಗಳಲ್ಲೂ ಕಂಡು ಬರುತ್ತದೆ. ಆದರೆ ಕಾರ್ತಿಕ ಮಾಸದಲ್ಲಿ ಅಧಿಕವು ಬರುವುದು ಕಡಿಮೆ. ಹಾಗೇ ಪುಷ್ಯ ಮಾಘದಲ್ಲಿ ಅಧಿಕವಿರುವುದಿಲ್ಲ. ಅಧಿಕದ ನಂತರ ನಿಜ ಮಾಸವನ್ನು ಆಚರಿಸಲಾಗುತ್ತದೆ.

ಈ ವರ್ಷ ಆಗಸ್ಟ್ ೧೭ ರಿಂದ ಸೆಪ್ಟೆಂಬರ್ ೧೫ ರ ವರೆಗೆ ನಿಜ ಶ್ರಾವಣ ಮಾಸವಿದ್ದು ಈ ಮಾಸದಾದ್ಯಂತ ಮಂಗಳಕರವಾದ ವಿವಿಧ ಧಾರ್ಮಿಕ ಕಾರ್ಯಗಳು ನಡೆಸಲಾಗುತ್ತದೆ. ಆಷಾಢದ ನಂತರ ಈ ಮಾಸದಲ್ಲಿ (ಅಧಿಪತಿ) ವಿಶೇಷ ಸ್ಥಾನವನ್ನು ಶ್ರವಣ ನಕ್ಷತ್ರ ಪಡೆದಿರುವುದರಿಂದ ಈ ಮಾಸಕ್ಕೆ ಶ್ರಾವಣ ಮಾಸವೆಂದು ಕರೆಯಲಾಗುತ್ತದೆ. ಜುಲೈ ಮಧ್ಯಭಾಗದಿಂದ ಆಗಸ್ಟ್ ಮಧ್ಯದವರೆಗೂ ಅಧಿಕ ಮಾಸವಾಗಿದ್ದು, ನಂತರದ ಶುಕ್ಲಪಕ್ಷ ಕೃಷ್ಣ ಪಕ್ಷಗಳ ನಿಜಶ್ರಾವಣ ಮಾಸವನ್ನು ವಿವಿಧ ರೀತಿಯ ಧಾರ್ಮಿಕ ಆಚರಣೆಗಳೊಂದಿಗೆ ಸಾಮಾಜಿಕ ಸಾಂಸ್ಕೃತಿಕವಾಗಿ ಐಕ್ಯತೆಯನ್ನು ಕಾಪಾಡುವ ಕಾರ್ಯಗಳನ್ನು ನಡೆಸಲಾಗುತ್ತದೆ.

ಈ ಮಾಸದಲ್ಲಿ ವರಮಹಾಲಕ್ಷ್ಮಿ ವ್ರತ. ಮಂಗಳಗೌರಿ ಪೂಜೆ, ನಾಗಪಂಚಮಿ, ಕೃಷ್ಣಾಷ್ಟಮಿ, ಶ್ರಾವಣ ಸೋಮವಾರ, ಶ್ರಾವಣ ಶನಿವಾರ, ಶ್ರಾವಣ ಶುಕ್ರವಾರ, ರಕ್ಷಾ ಬಂಧನ್ ಇತ್ಯಾದಿ ಮಂಗಳಕರ ಕಾರ್ಯಗಳನ್ನು ನಡೆಸಲಾಗುತ್ತದೆ. ಹಾಗೆಯೇ ಪರಶಿವನನ್ನು ವಿಶೇಷವಾಗಿ ಆರಾಧಿಸಲಾಗುತ್ತದೆ. ಅದಕ್ಕೆ ಒಂದು ಕಾರಣವನ್ನು ಹೇಳಲಾಗುತ್ತದೆ. ಹಿಂದೆ ಇದೇ ಶ್ರಾವಣ ಮಾಸದಲ್ಲಿ ನಡೆದ ಸಮುದ್ರ ಮಂಥನದ ಕಾರ್ಯದಲ್ಲಿ ಸುಮೇರು ಪರ್ವತವನ್ನು ಕಡಗೋಲಾಗಿಸಿ, ಶಿವನ ಕಂಠದಲ್ಲಿನ ವಾಸುಕಿಯನ್ನು ಹಗ್ಗವಾಗಿಸಿ, ಮಂಥನ ಕಾರ್ಯ ನಡೆಸಲಾಯಿತು. ಈ ಸಂದರ್ಭದಲ್ಲಿ ಶುಭಕರವಾದ ವಿಶೇಷ ವಸ್ತುಗಳು,ದೇವಾನುದೇವತೆಗಳು, ವಿಷಯಗಳು ಉತ್ಪತ್ತಿಯಾದವು. ಆದರೆ ಕೊನೆಯಲ್ಲಿ ಇವೆಲ್ಲವನ್ನು ನಾಶ ಮಾಡಬಲ್ಲ ಕಾರ್ಕೋಟ ವಿಷವು ಉತ್ಪತ್ತಿಯಾಗಲು ಅದನ್ನು ತಡೆ ಯಲು ಪರಶಿವನ ಮೊರೆ ಹೋಗಲಾಯಿತಂತೆ.ಆಗ ಪರಶಿವನು ಬಂದ ವಿಷವನ್ನು ಅಪೋಷಣೆ ತೆಗೆದುಕೊಂಡನಂತೆ. ಅಂತೆಯೇ ನೀಲ ವರ್ಣನಾಗಲು, ಪಾರ್ವತಿಯು ಶಿವನು ವಿಷವನ್ನು ನುಂಗದಂತೆ ಕಂಠದಲ್ಲಿ ತಡೆದ ಕಾರಣ ವಿಷ ಕಂಠದಲ್ಲಿ ನಿಂತು ವಿಷಕಂಠವೆನಿಸಿದನು. ಹೀಗೆ ಶಿವನು ಜಗತ್ತನ್ನು ಕಾಪಾಡಿದ ಈ ಮಾಸವು ಅತ್ಯಂತ ಪವಿತ್ರವೆಂದು ಶಿವನಿಗೆ ಈ ಮಾಸಾದ್ಯಂತ ಶಿವಾಲಯಗಳಲ್ಲಿ ರುದ್ರಾಭಿಷೇಕ,ಮಹಾಮೃತ್ಯುಂಜಯ ಹೋಮ, ಬಿಲ್ವಾರ್ಚನೆ, ರುದ್ರಾಷ್ಟಕ, ಶ್ರಾವಣ ಸೋಮವಾರದ ವ್ರತ ಇತ್ಯಾದಿಯಾಗಿ ಶಿವನ ಆರಾಧನೆಯನ್ನು ಕೈಗೊಳ್ಳಲಾಗುತ್ತದೆ.ಶ್ರೀ ವಿಷ್ಣುವಿನ ಪೂಜೆಯಾಗಿ ಕಲ್ಕಿ ಜಯಂತಿ ದಾಮೋಧರ ದ್ವಾದಶಿ, ಗೋಕಲಾಷ್ಟಮಿ ಜರುಗಿದರೆ, ದೇವಿಯ ಆರಾಧನೆ, ಸಕಲ ಸಂಪತ್ತಿಗೆ ತಾಯಿ ಲಕ್ಷ್ಮಿಯ ಪೂಜೆ ನಡೆಯುತ್ತದೆ. ಉತ್ತರ ಭಾರತದ ಅನೇಕ ಪ್ರದೇಶಗಳಲ್ಲಿ ಸಾವನ್ ಮಹೀನ ಎಂಬ ಹೆಸರಿನಲ್ಲಿ ಶ್ರಾವಣ ಮಾಸದ ಆಚರಣೆ ವಿಶೇಷವಾಗಿರುತ್ತದೆ. ಮಧ್ಯ ಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಪಂಜಾಬ್, ರಾಜಾಸ್ಥಾನಗಳಲ್ಲಿ ಹಾಗೂ ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ ಇತ್ಯಾದಿ ಪ್ರದೇಶಗಳಲ್ಲಿ ಶುಕ್ಲ ಪಕ್ಷ ಹಾಗೂ ಕೃಷ್ಣಪಕ್ಷದ ಶ್ರಾವಣವನ್ನು ಆಚರಿಸಲಾಗುತ್ತದೆ. ಪ್ರತಿ ಅಧಿಕ ಮಾಸದಲ್ಲೂ ವಿಶೇಷ ಪೂಜೆ,ಅಪೋಪ ದಾನವನ್ನು ನೀಡಲಾಗುತ್ತದೆ. ಬೆಲ್ಲ, ತುಪ್ಪದೊಂದಿಗೆ ೩೩ ಅಪೂಪವನ್ನು ಕಂಚಿನ ಪಾತ್ರೆಗಳಲ್ಲಿರಿಸಿ ದಾನ ನೀಡಲಾಗುತ್ತದೆ.

ಭಾರತದಲ್ಲಿ ಮಾತ್ರವಲ್ಲದೆ ನೇಪಾಳದಂತಹ ನೆರೆ ರಾಷ್ಟ್ರಗಳಲ್ಲೂ ಈ ಶ್ರಾವಣ ಮಾಸವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಭಾರತದ ಕೆಲವೊಂದು ಭಾಗದಲ್ಲಿ ಅಧಿಕ ಮಾಸವು ಧಾರ್ಮಿಕ ಕಾರ್ಯಗಳಿಗೆ ಪ್ರಶಸ್ತವಾದರೆ, ಕೆಲವೊಂದು ಭಾಗದಲ್ಲಿ ಶುಭಕಾರ್ಯಗಳಿಗೆ ನಿಶಿದ್ಧ ನಿಜ ಶ್ರಾವಣವು ವಿವಾಹ,ನಾಮಕರಣ, ಗೃಹಪ್ರವೇಶದಂತಹ ದೊಡ್ಡ ಮಟ್ಟದ ಶುಭ ಸಮಾರಂಭಗಳಿಗೆ ವಿಶೇಷವಾದ ಸುಮುಹೂರ್ತವನ್ನು ಒದಗಿಸುತ್ತದೆ.

ಪುಸ್ತಕ ಪರಿಚಯ

# ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳು - ಸಾಂಸ್ಕೃತಿಕ ಪರಂಪರೆಗೊಂದು ಕೈಗನ್ನಡಿ

- ಪ್ರಣವ




**ಕೃತಿ:**
**ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳು**
**ಲೇಖಕ:**
**ಡಾ|| ಕೆ.ಜಿ. ಲಕ್ಷ್ಮೀನಾರಾಯಣಪ್ಪ (ಕೆ.ಗು.ಲ) ಡಿ.ಲಿಟ್**
**ಪ್ರಕಾಶನ:**
**ಉದಯ ಪ್ರಕಾಶನ. ಬೆಂಗಳೂರು**
**ಪ್ರತಿಗಳಿಗೆ ಸಂಪರ್ಕಿಸಿ:**
**98457 57544**
**ಪುಟ : 400**
**ಬೆಲೆ : ರೂ. 500/-**

ಡಾ|| ಲಕ್ಷ್ಮೀನಾರಾಯಣಪ್ಪ ಕೆ.ಜಿ. ಅವರು ಬರೆದಿರುವ 'ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳು' ಕೃತಿಯನ್ನು ಗಮನಿಸಿದರೆ ನಮ್ಮ ಅಧ್ಯಯನಕ್ಕೂ, ಜೀವನ ನಿರ್ವಹಣೆಗೂ, ಹವ್ಯಾಸಕ್ಕೂ ನಂಟಿರದೆ, ವೃತ್ತಿಯಿಂದ ತೆರಿಗೆ ಅಧಿಕಾರಿಯಾಗಿ ಆದರೆ ಆತ್ಮತೃಪ್ತಿಗೆ ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳು ಒಂದು ಅಧ್ಯಯನ ಎಂಬ ಅಪೂರ್ವವಾದಂತಹ ಗ್ರಂಥರಚನೆ ಮಾಡಿ, ತುಮಕೂರು ವಿಶ್ವವಿದ್ಯಾನಿಲಯದಿಂದ ಡಿ.ಲಿಟ್ ಗಾಗಿ ಪ್ರಬಂಧವನ್ನು ಮಂಡಿಸಿ ಡಾಕ್ಟರೇಟ್ ಪದವಿಯನ್ನು ಗಳಿಸಿರುತ್ತಾರೆ. ಕರ್ನಾಟಕ ರಾಜ್ಯದ ಹನ್ನೆರಡು ಲಕ್ಷ ಪದ್ಮಶಾಲಿ ಜನಾಂಗದವರಲ್ಲಿ ಮೊಟ್ಟ ಮೊದಲನೆಯ ಸಂಶೋಧಕರಾಗಿ ಹಾಗೂ ಆರವತ್ತು ಲಕ್ಷ ನೇಕಾರ ಸಮುದಾಯಗಳಲ್ಲಿ ನಾಲ್ಕನೆಯ ಸಂಶೋಧಕರಾಗಿ, 'ಡಿ.ಲಿಟ್ ಪದವಿ' ಯಂತಹ ಗೌರವ ಪಡೆದಿರುವುದು ಜನಾಂಗದವರ ಹೆಮ್ಮೆಯೇ ಆಗಿದೆ.

ಕರ್ನಾಟಕದ ರಾಜಧಾನಿ ಬೆಂಗಳೂರಿನ ಹೆಬ್ಬಾಗಿಲಿನಂತಿರುವ ತುಮಕೂರು ಜಿಲ್ಲೆ ಹತ್ತು ತಾಲ್ಲೂಕಗಳನ್ನೊಳಗೊಂಡಿದ್ದು, ತೆಂಗಿನ ಬೇಸಾಯ ಯಥೇಚ್ಛವಾಗಿರುವ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯನ್ನು "ಕಲ್ಪತರುನಾಡು" ಎಂದು ಕರೆಯಲಾಗುತ್ತಿದೆ. ತುಮಕೂರು ಪ್ರದೇಶವು ಕರ್ನಾಟಕದ ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದು ಕಂಡು ಬರುತ್ತದೆ.

ತುಮಕೂರು ಜಿಲ್ಲೆಯ ಪವಿತ್ರ ಪುಣ್ಯ ಕ್ಷೇತ್ರಗಳಾದ ಸಿದ್ಧಗಂಗೆ, ಮಧುಗಿರಿ, ಶಿರಾ, ದೇವರಾಯನದುರ್ಗ ಗುಬ್ಬಿ, ಮಾಗೋಡು, ಕೆರೆಗೋಡು ಪಾವಗಡ, ತುರುವೇಕೆರೆ, ಎಡೆಯೂರು, ಶಿಬಿ, ಕೊರಟಗೆರೆ, ತುಮಕೂರು ಮೊದಲಾದ ಪ್ರದೇಶಳು ಕೆಲವರಿಗೆ ಯಾತ್ರಾ ಕ್ಷೇತ್ರವಾಗಿದೆ.

ಜಿಲ್ಲೆಯ ತಾಲೂಕುಗಳಲ್ಲಿರುವ ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರದೇ ಖ್ಯಾತ ವಾಸ್ತುಶಿಲ್ಪ ಕೇಂದ್ರಗಳಾಗಿದ್ದು, ಈ ದೇವಾಲಯಗಳಲ್ಲಿನ ಮೂರ್ತಿಗಳು, ಶಿಲ್ಪಗಳು ಮತ್ತು ಈ ಪ್ರದೇಶದಲ್ಲಿ ದೊರೆತ ಶಾಸನಗಳು ಅಧ್ಯಯನದ ದೃಷ್ಟಿಯಿಂದ ಅತಿ ಮಹತ್ವದ ಸ್ಥಾನವನ್ನು ಪಡೆದಿವೆ.

ಇಲ್ಲಿಯ ದೇವಾಲಯಗಳು ಕೆಲವು ಕಡೆ ಸುಸ್ಥಿತಿಯಲ್ಲಿವೆ. ಇನ್ನೂ ಕೆಲವು ದೇವಾಲಯಗಳು ಕಾಲನ ತುಳಿತಕ್ಕೆ ಸಿಕ್ಕು ಅವನತಿಯ ಹಾದಿಯನ್ನು ಹಿಡಿದಿವೆ. ಇಲ್ಲಿನ ದೇವಾಲಯಗಳ ವಾಸ್ತು ಮತ್ತು ಮೂರ್ತಿಶಿಲ್ಪ ಕುರಿತಂತೆ ಹೆಚ್ಚು ಅಧ್ಯಯನ ನಡೆದಿಲ್ಲ ಪ್ರಸ್ತುತ ಡಾ.ಕೆ.ಜಿ. ಲಕ್ಷ್ಮೀನಾರಾಯಣಪ್ಪನವರು ವ್ಯವಸ್ಥಿತ ಅಧ್ಯಯನ ನಡೆಸಿ ಆ ಕೊರತೆಯನ್ನು ನೀಗಿಸಿದ್ದಾರೆ ಎಂದು ಮುನ್ನುಡಿಯಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷ ದೇವರ ಕೊಂಡಾರೆಡ್ಡಿ ಸ್ಮರಿಸುತ್ತಾರೆ.

ದೇವಾಲಯಗಳು ಸಾಂಸ್ಕೃತಿಕವಾದ ಅನನ್ಯತೆಯನ್ನು ಸಾರುತ್ತವೆ. ಗತಕಾಲದ ವೈಭೋಗ ಗಳ ನೆನಪುಗಳನ್ನು ಕೊಡುವುದರ ಜೊತೆಗೆ ಸಮಕಾಲೀನ ಭಕ್ತರ ಆಧ್ಯಾತ್ಮಿಕ ಪ್ರಜ್ಞೆಯನ್ನು ಜನಮಾನಸದಲ್ಲಿ ದೈವಭಕ್ತಿಯು ಉಕ್ಕಿಸಿದೆ. ಈ ನಿಟ್ಟಿನಲ್ಲಿ ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳ ಕುರಿತಾಗಿ ಅಧ್ಯಯನ ಮಾಡಿ ಇಲ್ಲಿನ ದೇವಾಲಯ ಮತ್ತು ಶಾಸನಗಳ ವೈಶಿಷ್ಠತೆ ಏನು? ಸಮಾಜೋ - ಧಾರ್ಮಿಕ ಹಾಗೂ ಆರ್ಥಿಕ - ರಾಜಕೀಯ ರಂಗದಲ್ಲಿ ಅವು ನಿರ್ವಹಿಸಿರುವ ಪಾತ್ರವೇನು? ಎಂದು ತಾರ್ಕಿಕವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಯನ ಅನುಕೂಲಕ್ಕಾಗಿ ಪ್ರಸಕ್ತ ವಿಷಯವನ್ನು ಏಳು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ಒಟ್ಟಿನಲ್ಲಿ ತುಮಕೂರು ಜಿಲ್ಲೆಯ ದೇವಾಲಯ ಮತ್ತು ಶಾಸನಗಳ ಕುರಿತು ಇಲ್ಲಿಯವರೆಗೆ ನಡೆದಿರುವ ವಿರಳವಾದ ಅಧ್ಯಯನಗಳ ಹಿನ್ನೆಲೆಯಲ್ಲಿ ಈ ಜಿಲ್ಲೆಯಲ್ಲಿ ಹೊರಡಿಸಲ್ಪಟ್ಟ ಶಾಸನಗಳ ಹಾಗೂ ದೇವಾಲಯಗಳ ಮಹತ್ವದ ಕುರಿತು ಮೊದಲ ಬಾರಿಗೆ ಒಂದೆಡೆ ಸಮಗ್ರವಾಗಿ ಮಾಹಿತಿ ಲಭ್ಯವಾಗುವ ರೀತಿ ಕಟ್ಟಿಕೊಡಲಾಗಿದೆ. ಇವೆಲ್ಲಕ್ಕಿಂತ ಸಾಮಾನ್ಯ ಓದುಗನಿಗಾಗಿ ದೇವಾಲಯದ ಭಾಗಗಳನ್ನು ಕುರಿತಂತೆ ವಿವರವಾಗಿ ಬರೆದು ಈ ಗ್ರಂಥದಲ್ಲಿ ಸೇರಿಸಿದ್ದಾರೆ. ಹೀಗಾಗಿ ಈ ಕೃತಿ ಪಂಡಿತ ಹಾಗೂ ಪಾಮರರಿಗೆ ಮಾರ್ಗದರ್ಶಕ ಕೃತಿಯಾಗುವುದರಲ್ಲಿ ಸಂಶಯವಿಲ್ಲ.



ಧಾರಾವಾಹಿ

ಶ್ರೀ ಪ್ರಸನ್ನವೆಂಕಟ ದಾಸಾರ್ಯ ವಿರಚಿತ

# "ಸಿಂಧು ಶಯನನೆ ಬಾರೊ ಇಂದಿರಾರಾಧ್ಯನೆ ಬಾರೊ"

## ಆತ್ಮನಿವೇದನೆ ಕೀರ್ತನೆಯ ಒಳನೋಟ

- ಡಾ॥ ಸುಭಾಸ.ಭೀ. ಕಾಖಂಡಕಿ

7975442458

ಸಿಂಧು ಶಯನನೆ ಬಾರೊ ಇಂದಿರಾರಾಧ್ಯನೆ ಬಾರೊ
ಮಂದಜಜನಯ್ಯನೆ ಬಾರೋ ಇಂದೆನ್ನ ಮನಮನೆಗೆ ॥ಪ॥

ದಾಸರು ಸಿಂಧುಶಯನನೆ - ಅಂದರೆ ಸಾಗರದಲ್ಲಿ ಮಲಗಿರುವ ವಿಷ್ಣುವೇ, ಇಂದಿರಾರಾಧ್ಯ-ಲಕ್ಷ್ಮೀಯಿಂದ ಆರಾಧಿಸಲ್ಪಡುವವನೇ ಮಂದಜಜನಯ್ಯನೆ-ಮನ್ಮಥನ ತಂದೆಯೇ ಬಾರೋ ಇಂದೆನ್ನ ಮನ ಮನೆಗೆ-ನನ್ನ ಮನಸ್ಸಿನಲ್ಲಿ ಸ್ಥಿರವಾಗಿರಲು ಬಾರೋ ಭಕ್ತರ ಪಾಲಕನಾದ ವೆಂಕಟರಮಣ ಬಾರೊ"ಎಂದು ಅನನ್ಯ ಭಕ್ತಿಯಿಂದ ಭಗವಂತನನ್ನು ಕರೆದಿದ್ದಾರೆ. ಈ ಕೀರ್ತನೆಯಲ್ಲಿ ದಶಾವತಾರದ ಅವತಾರಗಳಲ್ಲಿ ಭಗವಂತನನ್ನು ಕರೆದಿದ್ದಾರೆ.

**ನುಡಿ - 1 ರಲ್ಲಿ**

ಮತ್ಸ್ಯಾವತಾರ, ಕೂರ್ಮಾತಾರ ಹಾಗೂ ವರಾಹಾವತಾರದಲ್ಲಿ ಕರೆದಿದ್ದಾರೆ

ರಾತ್ರಿ ನಾಮನರಿಯೆ ಬಾ ಗೋತ್ರಧಾರ ಬಾರೋಹೇಮ
ನೇತ್ರನ ಸದೆದು ಧರತ್ರಿ ತಂದೆ ಪೋತ್ರಿ ರೂಪಬಾರೋ ॥1॥

ರಾತ್ರಿ ನಾಮನರಿಯೆ ಎಂಬುವಲ್ಲಿ - ರಾತ್ರಿ ಕಾಲದಲ್ಲೂ ಹಗಲಿನಂತೆ ಕಣ್ಣು ತೆರೆದು ತಿರುಗಾಡುವ ಮತ್ಸಾವತಾರಿಯಾದ ಭಗವಂತನೇ ! 'ಬಾಗೋತ್ರಧಾರ '- ಬೆನ್ನ ಮೇಲೆ ಮಂಧರ ಪರ್ವತವನ್ನು ಹೊತ್ತ ಕೂರ್ಮಾವತಾರಿ ಬಾರೋ ! ಹೇಮನೇತ್ರನ - ಹಿರಣ್ಯಾಕ್ಷನನ್ನು ಕೊಂದು ಧರತ್ರಿಯನ್ನು ತಂದ (ಪೋತ್ರಿ) ವರಾಹರೂಪನಾದ ಭಗವಂತನೆ ಬಾರೋ ಎಂದು ದಾಸರು ಭಗವಂತನನ್ನು ಕರೆದಿದ್ದಾರೆ.

**ನುಡಿ - 2 ರಲ್ಲಿ**

ದಾಸರು ಇಲ್ಲಿ ಭಗವಂತನನ್ನು ನರಸಿಂಹ ವಾಮನ, ಪರಶುರಾಮ, ಮತ್ತು ರಾಮನ ಅವತಾರಗಳಲ್ಲಿ ಕರೆದಿದ್ದಾರೆ.

ಹರಿಮೊಗದವ ಬಾರೋ ಹರಿಯನುಜನೆ ಬಾರೊ
ಕರಜರ ಸವರಿದ ಹರಿ ಕುಲೋತ್ತಮರನ್ನ ಬಾರೊ ॥2॥

ಸಿಂಹಕ್ಕೂ ಹರಿ ಎಂದು ಹೆಸರು.ಹರಿ ಮೊಗದವ ಬಾರೋ ಎಂದು ನರಸಿಂಹ ಅವತಾರದಲ್ಲಿ ಹರಿಯನುಜನೇ- ಅಂದರೇ ವಾಮನಾವತಾರದಲ್ಲಿ ಬಲಿಯ ನಿಗ್ರಹ ಮಾಡಿದ ಮೇಲೆ ವಾಮನನೆ ಉಪೇಂದ್ರನಾಗಿ ಇಂದ್ರನಿಗೆ ಅನುಜನಾಗುತ್ತಾನೆ. ಆದ್ದರಿಂದ ಹರಿಯನುಜನನೇ ಅಂದರೆ ವಾಮನಾವತಾರದಲ್ಲಿಯ ಶ್ರೀಹರಿಯೇ, ಕರಜರಸವರಿದ ಅನ್ನುವಲ್ಲಿ ಕರಜ ಕೈಯಿಂದ ಹುಟ್ಟಿದ ಅಂದರೆ ಶ್ರೀ ಹರಿಯ ಬಾಹುಗಳಿಂದ ಹುಟ್ಟಿದ, ಕ್ಷತ್ರಿಯನ್ನು ಸಂಹಾರ ಮಾಡಿದ ಪರಶುರಾಮನ ಅವತಾರದ ಭಗವಂತನೇ ಬಾರೋ "ಹರಿಕುಲೋತ್ತಮರನ್ನ ' ಹರಿ ಅಂದರೆ ಸೂರ್ಯ, ಸೂರ್ಯನವಂಶದಲ್ಲಿ ರತ್ನದಂತಿರುವ ಶ್ರೀರಾಮನೇ ಬಾರೋ ಎಂದು ದಾಸರು ಶ್ರೀಹರಿಯನ್ನು ಅನನ್ಯ ಭಕ್ತಿಯಿಂದ ಕರೆದಿದ್ದಾರೆ.

ಇನ್ನು ಕೊನೆ ನುಡಿಯಲ್ಲಿ - ಕೃಷ್ಣಾವತಾರ, ಬೌದ್ಧಾತಾರ ಮತ್ತು ಕಲ್ಕಿ ಅವತಾರಗಳಲ್ಲಿ ಭಗವಂತನನ್ನು ಕರೆದಿದ್ದಾರೆ.

ಚೆನ್ನಾಗಿ ಮೆರೆದೆ ಬಾ ಚೆನ್ನವಾಸ ಜರಿದೆ ಬಾ
ಉನ್ನತ ಹಯವೇರಿ ಪ್ರಸನ್ನ ವೆಂಕಟಾದ್ರಿವಾಸ ಬಾರೋ ॥3॥

ದಾಸರು ಇಲ್ಲಿ "ಚೆನ್ನಾಗಿ ಮೆರೆದೆ-ಎನ್ನುವಲ್ಲಿ ಉನ್ನತ ಸ್ಥಾನ ದಿಂದ ಮೆರೆದೆ ಎಂದು ಕೃಷ್ಣಾ ವತಾರದಲ್ಲಿ ಬಾರೋ, ಎಂದಿ ದ್ದಾರೆ. ಚೆನ್ನ ವಾಸ ಜಲಿದೆ ಬಾ"-ಎಂಬು ವಲ್ಲಿ ಬೌದ್ಧಾವ ತಾರದಲ್ಲಿ ಅರ ಮನೆ ತೊರೆದ ಬುದ್ಧನನ್ನು ಬಾರೊ ಎಂದು ಕರೆದು, "ಉನ್ನತ ಹಯವೇರಿ" - ಎನ್ನುವಲ್ಲಿ ಕಲ್ಕಿ ರೂಪದ ಭಗವಂತನೇ ಬಾರೋ ಇಂಥ ದಶಾವತಾರ ರೂಪ ತಾಳಿದಂಥ ವೆಂಕಟಗಿರಿಯಲ್ಲಿ ನೆಲೆಸಿದ ಶ್ರೀ ಪ್ರಸನ್ನ ವೆಂಕಟನೇ ಬಾರೋ " ಎಂದು ದಾಸರು ಈ ಮೂರು ನುಡಿಯಲ್ಲಿ ಭಗವಂತನ ಹತ್ತು ರೂಪ ಗಳನ್ನು ಸ್ಮರಿಸುತ್ತ ನನ್ನ ಮನ ಮಂದಿರಕ್ಕೆ ಬಂದು ಸ್ಥಿರವಾಗಿ ನೆಲೆಸು ಎಂದು ಅನನ್ಯ ಭಕ್ತಿಯಿಂದ ಕರೆದು ನಾವು ಸಹ ಅವರಂತೆ ಶ್ರೀಹರಿ ಯಲ್ಲಿ ಅನನ್ಯ ಭಕ್ತಿ ಮಾಡಿ ನಮ್ಮ ಮನ ಮಂದಿರದಲ್ಲಿ ಭಗವಂತನು ಸ್ಥಿರ ವಾಗಿ ನೆಲೆಸುವಂತೆ ಸಾಧನೆ ಮಾಡಲು ಉಪದೇಶಿಸಿದ್ದಾರೆ ದಾಸರು.





## (ಆಕಾಶ ಗಂಗೆ)

## ಅಂಜನಾದ್ರಿ - ಹನುಮಂತನ ಜನ್ಮಸ್ಥಳ

ತಿರುಮಲೆಯಲ್ಲಿನ ಪುಣ್ಯ ತೀರ್ಥಗಳಲ್ಲಿ ಆಕಾಶಗಂಗೆಯು ಅತ್ಯಂತ ಪ್ರಸಿದ್ಧವಾದುದು. ಶ್ರೀನಿವಾಸನ ದೇಗುಲದ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿ ಇದು ಸ್ಥಿರವಾಗಿದೆ. ಭಕ್ತರು ಮೆಟ್ಟಿಲುಗಳ ಮೂಲಕ ಆಕಾಶ ಗಂಗೆ ತೀರ್ಥವನ್ನು ತಲುಪಬಹುದು. ಇಲ್ಲಿ ಅಂಜನಾದೇವಿ ತಪಸ್ಸನ್ನಾ ಚರಿಸಿ,ಆಂಜನೇಯನನ್ನು ಪುತ್ರನನ್ನಾಗಿ ಪಡೆದಳೆಂದು ಪುರಾಣ ತಿಳಿಸುತ್ತದೆ. ಶ್ರೀವೇಂಕಟೇಶ್ವರನನ್ನು ಅಭಿಷೇಕದ ಮೂಲಕ ಸೇವೆ ಮಾಡಿದ ವೈಷ್ಣವ ಭಕ್ತಾಗ್ರಣಿಯಾದ ತಿರುಮಲನಂಬಿ ಪ್ರತಿ ನಿತ್ಯವೂ ಎಷ್ಟೇ ಕಷ್ಟಗಳನ್ನು ಅನುಭವಿಸಿ, ಪಾಪವಿನಾಶಿ ತೀರ್ಥದಿಂದ ಜಲವನ್ನು ಹೊತ್ತು ತರುತ್ತಿದ್ದರಂತೆ.ತನ್ನ ಪ್ರಿಯಭಕ್ತನ ಶ್ರಮ ಕಡಿಮೆ ಮಾಡಬೇಕೆಂಬ ಉದ್ದೇಶದಿಂದ, ಬೇಡರ ಹುಡುಗನ ರೂಪದಲ್ಲಿ ಬಂದು ತಿರುಮಲನಂಬಿಯನ್ನು ಪರೀಕ್ಷಿಸಿದಾಗ ಸಾಕ್ಷಾತ್ತು ಶ್ರೀವೇಂಕಟೇಶ್ವರ ಸ್ವಾಮಿಯೇ ಸೃಷ್ಟಿಸಿದ ಪವಿತ್ರ ಜಲಧಾರೆ ಈ ಆಕಾಶಗಂಗೆ. ಇದರ ಸಮೀಪದಲ್ಲಿ ಶ್ರೀಬಾಲಾಂಜನೇಯ, ಶ್ರೀಅಂಜನಾದೇವಿಯ ಆಲಯ ಗಳಿವೆ. ಇಲ್ಲಿಗೆ ತಿರುಮಲೆಯಿಂದ ಬಸ್ಸಿನ ಸೌಕರ್ಯವಿದೆ.



# ದಿನಚರ್ಯೆ - ಆಯುರ್ವೇದದ ಆರೋಗ್ಯ ಸೂತ್ರ

ಡಾ॥ ಎಸ್.ಬಿ.ಎ.ಸಂಧ್ಯಾ
94495 05577

**ದಂತ ಧಾವನ 2**

**ವಿವೇಕ:** ಅದೇನೋ ಡಾಕ್ಟರೆ ಮೊನ್ನೆ ನಮ್ಮ ಹಳ್ಳಿನ ಡಾಕ್ಟರ್, ಹೇಳಿದರು ಹಲ್ಲು ಪುಡಿಯನ್ನು ಉಪಯೋಗಿಸಿದರೆ ಒಸಡು ಹಾಳಾಗುತ್ತದೆ. ಅಂತಾ!!

**ವೈದ್ಯ :** ಒರಟಾದ ಹಲ್ಲು ಪುಡಿಯನ್ನು ರಭಸವಾಗಿ ಹಲ್ಲು ಒಸಡುಗಳಿಗೆ ಉಜ್ಜಿದರೆ ಹಾಳಾಗುತ್ತದೆ. ಇಲ್ಲಿ ವಸ್ತ್ರಗಾಲಿತ ಚೂರ್ಣ ಅಂದರೆ ಸೂಕ್ಷ್ಮ (ಫೈನ್) ಚೂರ್ಣದಿಂದ ಮೃದುವಾಗಿ ಹಲ್ಲು, ಒಸಡುಗಳನ್ನು ಉಜ್ಜಲು ಅವುಗಳು ಬೆಳ್ಳಗೆ ಯಾವ ಹುಳುಕೂ ಇಲ್ಲದೇ ಸದೃಢವಾಗಿರುತ್ತದೆ, ಒಸಡುಗಳು ಕೀವು, ರಕ್ತ ಸೋರುವಿಕೆ ಇಲ್ಲದೆ ಆರೋಗ್ಯವಾಗಿರುತ್ತದೆ.

**ವೈದ್ಯ :** ಇನ್ನೊಂದು ವಿಶೇಷತೆ ಏನು ಗೊತ್ತಾ !! ಈ ಕಹಿ, ಖಾರ ಒಗಚು ರಸವುಳ್ಳ ಗಿಡ ಮೂಲಿಕೆಗಳೆಲ್ಲವೂ ಬ್ಯಾಕ್ಟೀರಿಯ ಮತ್ತು ವೈರಸ್‌ಗಳನ್ನು ಕೊಲ್ಲುವ ಗುಣವನ್ನು ಹೊಂದಿದೆ. ಹಾಗಾಗಿ ಹಲ್ಲುಗಳ ನಡುವೆ ಇರುವ ಆಹಾರ ಕಣಗಳನ್ನು ಶುಚಿಗೊಳಿಸುವುದರೊಂದಿಗೆ ಕ್ರಿಮಿಹರವಾಗಿಯೂ ಕೆಲಸ ಮಾಡಿ, ಹಲ್ಲು ನಾಲಿಗೆ ಒಸಡುಗಳು ಇನಫೆಕ್ಷನ್ ಮುಕ್ತವಾಗಿರುವಂತೆ ನೋಡಿಕೊಳ್ಳುತ್ತದೆ. ಬಾಯಿಯ ದುರ್ಗಂಧವನ್ನು ದೂರ ಮಾಡುವುದರೊಂದಿಗೆ ಬಾಯಿ ರುಚಿಯನ್ನೂ ಹೆಚ್ಚಿಸುತ್ತದೆ.

**ವಿವೇಕ :** ಅದೇನೋ ಗೊತ್ತಿಲ್ಲಾ ಡಾಕ್ಟರೆ ನಾನು ಹಲ್ಲನ್ನು ಉಜ್ಜಿದ್ದರೂ, ನನ್ನ ಬಾಯಿ ಏಕೆ ವಾಸನೆ ಬರುತ್ತದೆ?

**ವೈದ್ಯ :** ನಾಲಿಗೆಯು ಬಾಯಿಯು ಒಂದು ಅಂಗವೇ ಆಗಿದೆ. ಹಲ್ಲು ಒಸಡುಗಳನ್ನು ಸ್ವಚ್ಛಗೊಳಿಸುವುದರೊಂದಿಗೆ, ನಾಲಿಗೆಯನ್ನೂ ಸ್ವಚ್ಛಗೊಳಿಸಬೇಕು. ಇದಕ್ಕೆ ಜಿಹ್ವಾ ನಿರ್ಲೇಖ ಎನ್ನುತ್ತಾರೆ. ಜಿಹ್ವಾ ಎಂದರೆ ನಾಲಿಗೆ, ನಿರ್ಲೇಖ ಎಂದರೆ ಕೆರೆಯುವುದು ಎಂದು ಅರ್ಥ.

**ವಿವೇಕ :** ಅದೇ ಟಂಗ್ ಕ್ಲೀನರ್‌ನಲ್ಲಿ ನಾಲಿಗೆಯನ್ನು ಕ್ಲೀನ್ ಮಾಡುವುದು ತಾನೆ?

**ವೈದ್ಯ:** ಹೌದು, ಆಯುರ್ವೇದ ಶಾಸ್ತ್ರದಲ್ಲಿ ಬೆಳ್ಳಿ, ಬಂಗಾರ, ತಾಮ್ರದ ಜಿಹ್ವಾ ನಿರ್ಲೇಖನಿಗಳನ್ನು ಬಳಸಲು ತಿಳಿಸಿದ್ದಾರೆ.

**ವಿವೇಕ:** ಬೆಳ್ಳಿ, ಬಂಗಾರ ಎಷ್ಟೊಂದು ದುಬಾರಿ ಇರುವ ಕಾಲದಲ್ಲಿ ಹೀಗೆಲ್ಲಾ ತಮಾಷೆ ಮಾಡಬೇಡಿ....

**ವೈದ್ಯ :** ಬೆಳ್ಳಿ ಬಂಗಾರ ಬೇಡ ಬಿಡಪ್ಪಾ ತಾಮ್ರದ್ದು ಬಳಸ ಬಹುದಲ್ಪಾ, ಇಲ್ಲವೆ ಮೊದಲೇ ಹೇಳಿದಂತಹ ಗಿಡಗಳ ಎಳಸಾದ ಕಡ್ಡಿಗಳನ್ನು ಬಳಸಬಹುದು,ಆದರೆ ಪ್ಲಾಸ್ಟಿಕ್‌ದು ಮಾತ್ರ ಬೇಡ, ಮತ್ತೆ ಇನ್ನೊಂದು ವಿಷಯ ಗಮನದಲ್ಲಿರಬೇಕು,ಇವು ಚೂಪಾಗಿರ ಬಾರದು ಮತ್ತು ಬಗ್ಗಿರಬೇಕು ಮತ್ತೆ ನಾಲಿಗೆಯನ್ನು ಹಿಂದಿನಿಂದ ಮುಂದಕ್ಕೆ ಸ್ವಚ್ಛ ಮಾಡಬೇಕು.

**ವಿವೇಕ :**ದಿನಕ್ಕೆ ಎಷ್ಟು ಬಾರಿ ಹಲ್ಲನ್ನು ಉಜ್ಜಬೇಕು?

**ವೈದ್ಯ:** ಬೆಳಗ್ಗೆ ಎದ್ದ ಕೂಡಲೆ, ರಾತ್ರಿ ಮಲಗುವ ಮುನ್ನ ಮತ್ತು ಪ್ರತಿ ಬಾರಿ ಆಹಾರ ಸೇವಿಸಿದ ಮೇಲೆ.



**ಜ್ವರ, ವಾಂತಿ, ಕೆಮ್ಮ, ಅಜೀರ್ಣ, ಉಬ್ಬಸ ಮುಂತಾದ ತೊಂದರೆ ಇರುವಾಗ, ದಂತಧಾವನ ವರ್ಜ್ಯ (ಮಾಡಬಾರದು) ಎಂದು ನಮ್ಮ ಆಯುರ್ವೇದ ಗ್ರಂಥಗಳಲ್ಲಿ ತಿಳಿಸಲಾಗಿದೆ. ಇಲ್ಲಿ ವರ್ಜ್ಯ ಎಂದರೆ ಬಲವಂತವಾಗಿ ಜೋರಾಗಿ ಮಾಡಿದರೆ ರೋಗ ಉಲ್ಬಣವಾಗುವಂತೆ ಮಾಡಬಾರದು ಎಂದು ಅರ್ಥ. ಮೃದುವಾಗಿ ಹಲ್ಲು, ನಾಲಿಗೆ, ಒಸಡುಗಳನ್ನು ಉಜ್ಜಬೇಕು ಎಂದು ತಿಳಿಯಬೇಕು.**





**ವಿವೇಕ:** ಬೆಳಗ್ಗೆ ರಾತ್ರಿ ಓಕೆ, ಆದರೆ ತಿಂದಾಗಲೆಲ್ಲಾ ಹಲ್ಲನ್ನು ಉಜ್ಜಬೇಕು ಅಂದರೆ ಪ್ರಾಕ್ಟಿಕಲ್ ಅಲ್ಲಾ ಅಲ್ಲವಾ ಡಾಕ್ಟರೆ.

**ವೈದ್ಯ:** ತಿಂದ ಮೇಲೆ ಯಾವಾಗಲೆಲ್ಲಾ ಸಾಧ್ಯವೋ ಆಗ ಹಲ್ಲನ್ನು ಉಜ್ಜಬಹುದು. ಇಲ್ಲವಾದಲ್ಲಿ ಏನನ್ನಾದರೂ ಕುಡಿದ ನಂತರ ಮತ್ತು ತಿಂದ ನಂತರ ಚೆನ್ನಾಗಿ ಬಳಿಯ ನೀರಿನಲ್ಲಿ ಬಾಯಿಯನ್ನು ಮುಕ್ಕಳಿಸಬೇಕು.

**ವೈದ್ಯ:** ಏನೋ ವಿವೇಕ ಇಷ್ಟೆಲ್ಲಾ ಪ್ರಶ್ನೆ ಕೇಳಿದವನು ಒಂದು ಮುಖ್ಯವಾದ ಪ್ರಶ್ನೆಯನ್ನು ಬಿಟ್ಟು ಬಿಟ್ಟೆಯಲ್ಲಾ?

**ವಿವೇಕ:** ಯಾವ ಪ್ರಶ್ನೆ ಅದು ?

**ವೈದ್ಯ:** ಹಲ್ಲನ್ನು ಯಾವಾಗ ಉಜ್ಜಬಾರದು?

**ವಿವೇಕ:** ಅಲ್ಲಾ ನೀವೇ ಈಗ ತಾನೆ ಎಲ್ಲರೂ ಮೂರು ಮೂರು ಸಲ ಹಲ್ಲನ್ನು ಉಜ್ಜಬೇಕೆಂದು ಹೇಳಿ. ಈಗ ಈ ತರಹ ಪ್ರಶ್ನೆಯನ್ನು ಕೇಳುತ್ತಿರುವಿರಲ್ಲ?

**ವೈದ್ಯ:** ಜ್ವರ, ವಾಂತಿ, ಕೆಮ್ಮ, ಅಜೀರ್ಣ, ಉಬ್ಬಸ ಮುಂತಾದ ತೊಂದರೆ ಇರುವಾಗ, ದಂತಧಾವನ ವರ್ಜ್ಯ (ಮಾಡಬಾರದು) ಎಂದು ನಮ್ಮ ಆಯುರ್ವೇದ ಗ್ರಂಥಗಳಲ್ಲಿ ತಿಳಿಸಲಾಗಿದೆ. ಇಲ್ಲಿ ವರ್ಜ್ಯ ಎಂದರೆ ಬಲವಂತವಾಗಿ ಜೋರಾಗಿ ಮಾಡಿದರೆ ರೋಗ ಉಲ್ಬಣವಾಗುವಂತೆ ಮಾಡಬಾರದು ಎಂದು ಅರ್ಥ. ಮೃದುವಾಗಿ ಹಲ್ಲು, ನಾಲಿಗೆ, ಒಸಡುಗಳನ್ನು ಉಜ್ಜಬೇಕು ಎಂದು ತಿಳಿಯಬೇಕು.

**ವಿವೇಕ:** ಒಂದು ಪೇಸ್ಟಿನಿಂದ ಶುರುವಾದ ಮಾತಿನಿಂದ ಇಷ್ಟೆಲ್ಲಾ ತಿಳಿಯಿತು.

**ವೈದ್ಯ:** ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವಿದೆ. ಜಾಹೀರಾತುಗಳನ್ನು ನೋಡಿ ಪದೇ ಪದೇ ಬೇರೆ ಬೇರೆ ಕಂಪನಿಯ ಪೇಸ್ಟು, ಬ್ರಶ್‌ಗಳನ್ನು ಬದಲಾಯಿಸುತ್ತಿರಬಾರದು. ಬಾಯಿಗೆ ಒಗ್ಗಿರುವ ಒಂದೇ ಕಂಪನಿಯ ಪದಾರ್ಥಗಳನ್ನು ಬಳಸುವುದು ಸೂಕ್ತ. ಬ್ರಶ್‌ಗಳನ್ನು ಗಾಳಿ ಆಡುವ ಜಾಗದಲ್ಲಿಡಬೇಕು. ತೇವಾಂಶವಿದ್ದರೆ ಬ್ರಿಸ್ಟಲ್‌ಗಳ ಮೇಲೆ ಫಂಗಸ್ (ಬೂಜು) ಕಟ್ಟುತ್ತದೆ. ೩-೪ ತಿಂಗಳಿಗೊಮ್ಮೆ ಬ್ರಶ್‌ಗಳನ್ನು ಬದಲಿಸಬೇಕು. ಎಲ್ಲಾಕ್ಕೂ ಮಿಗಿಲಾಗಿ ಟೂತ್ ಬ್ರಶ್ ಮತ್ತು ಟಂಗ್ ಕ್ಲೀನರ್‌ಗಳನ್ನು ಬೇರೆಯವರೊಂದಿಗೆ ಎಂದಿಗೂ ಹಂಚಿಕೊಳ್ಳಬಾರದು.

**ವಿವೇಕ:** ಒಂದು ಸಣ್ಣ ವಿಷಯವನ್ನು ಇಷ್ಟೊಂದು ವಿಸ್ತಾರವಾಗಿ ತಿಳಿಸುತ್ತೀರಲ್ಲಾ ಡಾಕ್ಟರೆ, ನಿಮಗೊಂದು ನಮಸ್ಕಾರ.

**ವೈದ್ಯ:** ಬಾಯಿಯು ನಮ್ಮ ದೇಹದ ಅತೀ ಮುಖ್ಯವಾದ ಭಾಗವಾಗಿದೆ ಅದಕ್ಕಲ್ಲವೇ,

ಮನೆಯ ಲಕ್ಷಣ ಅಂಗಳ ಹೇಳಿತು

ದೇಹದ ಆರೋಗ್ಯ ಬಾಯಿ ಹೇಳಿತು

ಅಂತ ಹೇಳೋದು.

**(ಸಶೇಷ)**



# ಜಾಗೃತಿ ಪ್ರಾಣದೇವರ ಕೋರವಾರ ಕ್ಷೇತ್ರ



- ಶ್ರೀರಂಗ ಪುರಾಣಿಕ
9663872037

ಶ್ರೀ ಕ್ಷೇತ್ರ ಕೋರವಾರ, ವಿಜಯಪುರ ಜಿಲ್ಲೆಯ ಪ್ರಸಿದ್ಧ ಕ್ಷೇತ್ರಗಳಲ್ಲೊಂದಾದ ಅಲ್ಲದೆ, ಇದು ಜಾಗೃತಿ ಪ್ರಾಣ ದೇವರಾದ ಕೋರವಾರೇಶನ ಸನ್ನಿಧಾನದ ಸ್ಥಳ."ಕೋರವಾರೇಶ" ಎಂದರೇ ಆಂಜನೇಯ ಸ್ವಾಮಿ.ಕೋರವಾರ ಕ್ಷೇತ್ರ ಮತ್ತು ಕೋರವಾರೇಶ (ಪ್ರಾಣದೇವರ) ಪ್ರತಿಷ್ಠಾಪನೆಯ ಹಿನ್ನೆಲೆಯ ಕುರಿತು ತಿಳಿದುಕೊಳ್ಳೋಣ.

## ಸೋದೆ ವಾದಿರಾಜರಿಂದ ಪ್ರತಿಷ್ಠಾಪನೆ

ಕೋರವಾರ ಪ್ರಾಣದೇವರ ಪ್ರತಿಷ್ಠಾಪಿಸಿದವರು, ಮಾಧ್ವಯತಿಗಳಲ್ಲಿ ಅಗ್ರಗಣ್ಯರಾದ "ಸೋದೆಯ ವಾದಿರಾಜ ಯತಿ ವರ್ಯರು", ಅವರು ಪ್ರತಿಷ್ಠಾಪಿಸಿದ ಪ್ರಾಣದೇವರ ಕ್ಷೇತ್ರಗಳಲ್ಲಿ ಕೋರವಾರ ಕ್ಷೇತ್ರವು ಒಂದು.ಉತ್ತರ ಸಂಚಾರ ದಲ್ಲಿದ್ದ ವಾದಿರಾಜರು ಕೋರವಾರ ಗ್ರಾಮಕ್ಕೆ ಬಂದಾಗ, ಅಪರೋಕ್ಷ ಜ್ಞಾನಿಗಳಾದ,ತಪಸ್ವಿಗಳಾದ ಅವರಿಗೆ ಇಲ್ಲಿ ಹನುಮನ ಸಾನಿಧ್ಯವಿರುವುದು ಲಂಕಾವಿಜಯದ ನಂತರ ಪ್ರಭು ಶ್ರೀರಾಮದೇವರು,ಸೀತಾದೇವಿ,ಲಕ್ಷ್ಮಣ ಸಹಿತ ಅಯೋಧ್ಯೆಗೆ ಮರಳುವಾಗ ಇಲ್ಲಿ ತಂಗಿದ್ದರೆಂದು, ಹಾಗೆ, ಇದೇ ಸ್ಥಳವು ಹಿಂದೆ ಅಗಸ್ತ್ಯ ಋಷಿಗಳ ತಪೋಭೂಮಿಯಾಗಿತ್ತೆಂದು ತಿಳಿಯಿತು. ಅಂದು ರಾತ್ರಿ ಗ್ರಾಮದಲ್ಲಿ ತಂಗಿದ್ದ ವಾದಿರಾಜ ಯತಿವರ್ಯರಿಗೆ ಒಂದು ದೃಷ್ಟಾಂತವಾಯ್ತು. ಕನಸಿನಲ್ಲಿ ಕಾಣಿಸಿಕೊಂಡ ಪ್ರಾಣದೇವರು ಗ್ರಾಮದ ಹೊರವಲಯದ ಹೊಲದಲ್ಲಿ ದೈವಿತೀರ್ಥವಿದ್ದು ಅದರ ಅಂಚಿನ ದಿನ್ನೆಯಲ್ಲಿನಾನಿದ್ದೇನೆ, ನನ್ನ ಮೂರ್ತಿಯನ್ನು ಹೊರತೆಗೆದು, ಕೋರವಾರದ ಯಜ್ಞ ವೇದಿಕೆಯಲ್ಲಿ ಪ್ರತಿಷ್ಠಾಪಿಸಬೇಕು. ಗರ್ಭಗುಡಿ ಕಟ್ಟಡಕ್ಕೆ ಕೃಷ್ಣಾನದಿಯ ಸೆಲೆವಿರುವ ದೇವರ ಹೊಂಡದಿಂದ ನೀರನ್ನು ಬಳಸಬೇಕು ಎಂದು ಆದೇಶವಿತ್ತರು ಪ್ರಾಣ ದೇವರ ಸ್ವಪ್ನದೇಶದಂತೆ ವಾದಿರಾಜ ಯತಿಗಳು ಕೋರವಾರೇಶನನ್ನು ಪ್ರತಿಷ್ಠಾಪಿಸಿದರು.

ಹನುಮನ ಮೂರ್ತಿ ಐದು ಅಡಿಗಳಷ್ಟು ಎತ್ತರವಿದ್ದು ವೀರಾವೇಶ ಭಂಗಿಯಲ್ಲಿ ಕಂಡು ಬರುವುದು. ಒಟ್ಟು ನಿಲುವಿನಲ್ಲಿ ಪ್ರಸನ್ನತೆಯಿದೆ. ಪ್ರಾಣದೇವರ ಜೊತೆಗೆ ರುದ್ರದೇವರು ಸಹವಿದ್ದು ಇದು ಇಬ್ಬರ ಸಾನಿಧ್ಯದ ಕ್ಷೇತ್ರ.

## ಭೀಮ ನೈವೇದ್ಯ

ಸಾಮಾನ್ಯವಾಗಿ ನೈವೇದ್ಯ ಎಂದರೇ, ಮಾಡಿದ ಅಡುಗೆಯಲ್ಲಿ ಸ್ವಲ್ಪ ದೇವರಿಗೆ ಸಮರ್ಪಿಸಿ ಪ್ರಸಾದವಾಗಿ ಸ್ವೀಕರಿಸುತ್ತಾರೆ. ಆದರೆ ಕೋರವಾರ ಕ್ಷೇತ್ರದಲ್ಲಿ ಹಾಗಲ್ಲ, ಭೀಮ ನೈವೇದ್ಯ ಬಹಳ ವಿಶೇಷವಾದದ್ದು. ಮಾಡಿದ ಅಡುಗೆಯನ್ನು ನೈವೇದ್ಯವಾಗಿ ಇಡಲಾಗುತ್ತದೆ. ತದನಂತರ ಪ್ರಸಾದವಾಗಿ, ಅನ್ನ ಸಂತರ್ಪಣೆ ಮಾಡಲಾಗುತ್ತದೆ. ಹೆಸರೇ ಹೇಳುವಂತೆ, ಹನುಮ ದೇವರ ಅವತಾರಗಳಾದ, ಹನುಮ, ಭೀಮ, ಮಧ್ವ ಅವತಾರಗಳಲ್ಲಿ, ಭೀಮ ನೈವೇದ್ಯವು ಭೀಮಾವತಾರವನ್ನು ನೆನಪಿಸುತ್ತದೆ. ಇಲ್ಲಿನ ಭೀಮ ನೈವೇದ್ಯದ ಮತ್ತೊಂದು ಮಹತ್ವವೆಂದರೆ, ಇಲ್ಲಿ ಪ್ರಾಣ ದೇವರಿಗೆ ನೈವೇದ್ಯ ಸಮರ್ಪಣೆಯಾಗುವುದು ಮಧ್ಯಾಹ್ನ ಒಂದು ಗಂಟೆ ಅಥವಾ ಎರಡು ಗಂಟೆಯ ನಂತರವೇ. ಎಷ್ಟೆ ಪ್ರಯತ್ನಿಸಿದರು ಅದಕ್ಕಿಂತಲೂ ಪೂರ್ವದಲ್ಲಿ ಸಾಧ್ಯವಾಗುವುದಿಲ್ಲ. ಒಮ್ಮೆ ಈ ಕುರಿತು ಕೇಳಿದ ತಿಳಿದಿದ್ದ, ಮಾಧ್ವಪೀಠದ ಯತಿಗಳೊಬ್ಬರು ಪರೀಕ್ಷಿಸಲು ನಿಂತರು.ನೈವೇದ್ಯವನ್ನು ಬೇಗ ಮಾಡಬೇಕು ಎಂದು ನಿಶ್ಚಯಿಸಿಕೊಂಡು, ಕೋರವಾರ ಕ್ಷೇತ್ರ ಆಗಮಿಸಬೇಕಾದರೆ ದಾರಿಯಲ್ಲಿ ಅವರ ಕಾರು ಕೆಟ್ಟಿತ್ತು, ಅವರು ಬರುವ ವೇಳೆಗೆ ಮಧ್ಯಾಹವೇ ಆಗಿ ಹೋಗಿತ್ತು.ಆ ಯತಿಗಳು ಕೋರವಾರೇಶನ ಮಹಿಮೆಗೆ ಭಕ್ತಿಯಿಂದ ಶರಣಾದರು.ಕೋರವಾರೇಶನ ಮಹಿಮೆ ಕುರಿತು, ಹೀಗೆ ಹಲವಾರು ಘಟನೆಗಳು ಸಾಕ್ಷಿ ನೀಡುತ್ತವೆ.

#### ವರ್ಷದಿಂದ ವರ್ಷಕ್ಕೆ ಸವೆಯುವ ಪಾದುಕೆ

ಕೋರವಾರೇಶ ಪ್ರತಿದಿನ ಸಂಚರಿಸುತ್ತಾನೆ ಎಂದು ಹೇಳಲಾಗುತ್ತದೆ. ಅದಕ್ಕೆ ಪೂರಕವೆಂಬಂತೆ ಮೂರು ವರ್ಷಗಳಿಗೊಮ್ಮೆ ಪಾದುಕೆಗಳು (ಜೋಡುಗಳೆಂದು ಕರೆಯುತ್ತಾರೆ) ಸವೆಯುತ್ತವೆ. ಪ್ರತಿ ವರ್ಷವೂ ಹೊಸ ಪಾದುಕೆಗಳನ್ನು ಭಕ್ತರು ಸಮರ್ಪಿಸುತ್ತಾರೆ. ಪಾದುಕೆಯನ್ನು ಭಕ್ತಿಯಿಂದ ತಲೆಗೆ ಮುಟ್ಟಿಕೊಂಡರೆ ಕಷ್ಟಗಳು ಕಳೆಯುತ್ತವೆ ಮತ್ತು ರೋಗ ಇರುವ ಭಾಗ ಅಥವಾ ತೊಂದರೆ ಇರುವ ಭಾಗಗಳಲ್ಲಿ ಇಟ್ಟುಕೊಂಡರೆ ರೋಗಗಳು, ಖಾಯಿಲೆಗಳು ವಾಸಿಯಾಗುತ್ತದೆ ಎಂಬ ನಂಬಿಕೆಯಿದೆ.

#### ಉತ್ಸವಗಳು, ಜಾತ್ರಾಮಹೋತ್ಸವ, ರಥೋತ್ಸವ ಮತ್ತು ವಿಶೇಷ ದಿನಗಳು

ವಿಶೇಷ ದಿನಗಳಲ್ಲಿ ಉತ್ಸವಗಳಲ್ಲಿ ಗಂಧದಿಂದ, ರಜತ ಆಭರಣಗಳಿಂದ ಕೋರವಾರೇಶನನ್ನು ಅಲಂಕರಿಸಲಾಗುತ್ತದೆ. ಆ ದಿನಗಳಲ್ಲಿ ಅಲಂಕಾರಿತ ಕೋರವಾರದ ಪ್ರಾಣದೇವರ ದರ್ಶನ ಪಡೆದರೆ ಧನ್ಯತಾಭಾವ ಮೂಡುತ್ತದೆ. ಪ್ರತಿವರ್ಷ ಯುಗಾದಿ ಪ್ರತಿಪದೆಯಂದು ಆರಂಭವಾಗುವ ಉತ್ಸವವು. ದವನದ ಹುಣ್ಣಿಮೆಯವರೆಗೂ, ಹದಿನೈದು, ದಿನಗಳ ಕಾಲ, ಅತ್ಯಂತ ವಿಜೃಂಭಣೆಯಿಂದ ವೈಭೋಗಪೂರಿತವಾಗಿ ನಡೆಯುತ್ತದೆ. ಉತ್ಸವ ದಿನಗಳಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತದೆ. ರಾಮನವಮಿ ಮರುದಿನ ಅದ್ಧೂರಿಯಾಗಿ ರಥೋತ್ಸವ ನಡೆಯುತ್ತದೆ. ಎಂಬತ್ತು ಅಡಿಯ ತೇರನ್ನು (ರಥ) ಪಾದ ಗಟ್ಟಿಯವರೆಗೂ ಒಯ್ದು ತರಲಾಗುತ್ತದೆ. ಈ ಸಂದರ್ಭದಲ್ಲಿ ಲಕ್ಷಾಂತರ ಭಕ್ತ ಸಮೂಹ ಪಾಲ್ಗೊಳ್ಳುತ್ತಾರೆ. ಉತ್ಸವ ದಿನಗಳಲ್ಲದೆ ನೂಲ ಹುಣ್ಣಿಮೆ, ಹನುಮದ್ವ್ರತ್, ಕಾರ್ತೀಕ ಮಾಸ, ಧನುರ್ಮಾಸ, ಮಧ್ವಜಯಂತಿ, ರಾಯರ ಆರಾಧನೆ ಹಾಗೂ ಇನ್ನಿತರ ವಿಶೇಷ ದಿನಗಳಲ್ಲಿ ವಿಶೇಷ ಪೂಜೆ ಅಲಂಕಾರ ಹಾಗೂ ಪ್ರಸಾದದ ವ್ಯವಸ್ಥೆ ಇರುತ್ತದೆ. ಭಕ್ತಾದಿಗಳ ಅನುಕೂಲಕ್ಕಾಗಿ ಸ್ವಲ್ಪ ಮಟ್ಟಿಗೆ ವಸತಿ ವ್ಯವಸ್ಥೆಯೂ ಮಾಡಲಾಗಿದೆ.

#### ಹೋಗುವ ಮಾರ್ಗ :

ವಿಜಯಪುರಿಗೆ ಬಸ್ಸು ಮತ್ತು ಟ್ರೈನ್ ವಾಹನಗಳ ಅನುಕೂಲಗಳಿದ್ದು, ದೇವರ ಹಿಪ್ಪರಗಿ ಮಾರ್ಗವಾಗಿ ಕೋರವಾರ ತಲುಪಬಹುದು. ವಿಜಯಪುರ ಹಾಗೂ ಸಿಂದಗಿಯಿಂದ ನೇರವಾಗಿ ಕೋರವಾರಗೆ ಸರ್ಕಾರಿ ಬಸ್ಸುಗಳಿವೆ. ಖಾಸಗಿ ವಾಹನಗಳ ಸೌಕರ್ಯವೂ ಇದೆ.

#### ಚಕ್ರತೀರ್ಥ



ತಿರುಮಲೆಯಲ್ಲಿನ ಶಿಲಾತೋರಣದ ಪಕ್ಕದಲ್ಲಿ ಈ ತೀರ್ಥವಿದೆ. ಹಿಂದೆ, ಪದ್ಮನಾಭನೆಂಬ ಭಕ್ತನು ಒಬ್ಬ ರಾಕ್ಷಸನಿಂದ ಪ್ರಜೆಗಳನ್ನು ಕಾಪಾಡಬೇಕೆಂದು ಶ್ರೀ ಹರಿಯನ್ನು ಕುರಿತು 12 ಶರ್ಷಗಳ ಕಾಲ ಘೋರವಾದ ತಪಸ್ಸು ಮಾಡಿದನಂತೆ. ಅವನ ತಪಸ್ಸಿಗೆ ಮೆಚ್ಚಿದ ಶ್ರೀ ವೇಂಕಟೇಶ್ವರನು ತನ್ನ ಸುದರ್ಶನ ಚಕ್ರದಿಂದ ಆ ರಾಕ್ಷಸನನ್ನು ಸಂಹರಿಸಿದನಂತೆ ಇಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿಯು ಸುದರ್ಶನ ಚಕ್ರದೊಂದಿಗೆ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯವರನ್ನೂ ಸಹ ದರ್ಶಿಸಬಹುದು.

# ಸಂತಕವಿ ಗೋಸ್ವಾಮಿ ತುಳಸಿದಾಸರು

ಕೆ.ಎಸ್. ರಾಮಮೂರ್ತಿ
94497 50618



ಜನ ಮಾನಸದ ಕವಿ, ಸಂತ ತುಳಸಿ ದಾಸರು ರಚಿಸಿದ ಶ್ರೀ ರಾಮಚರಿತ ಮಾನಸ ಕೃತಿ ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿದ್ದು. ಶ್ರೀ ಸಾಮಾನ್ಯರಿಗೂ ಅಪ್ಯಾಯಮಾನವಾಗಿದೆ. ವಿದ್ಯಾವಂತರು ಪಂಡಿತರು ಮೆಚ್ಚಿರುವ ಕೃತಿಯಾಗಿದೆ.

ಅವಧೀ (ಹಿಂದಿ) ಭಾಷೆಯಲ್ಲಿ ರಚಿಸಲಾಗಿರುವ ಈ ಗ್ರಂಥವು 1200 ಪುಟಗಳಿಂದ ಕೂಡಿದ್ದು. ಇದರ ಪ್ರತಿಗಳು 10 ಕೋಟಿಗೂ ಮೀರಿ ಮಾರಾಟವಾಗಿದೆ. ಜನಪದರ ನಾಲಗೆಯಲ್ಲಿ ನಿತ್ಯವು ಹರಿದಾಡುತ್ತಿದೆ, ಕೆಲವರಿಗೆ ಇದು ಪಾರಾಯಣ ಗ್ರಂಥವಾಗಿದ್ದು, ಇನ್ನು ಕೆಲವರಿಗೆ ನಿತ್ಯವು ಗಮಕ ರೂಪದಲ್ಲಿ ರಂಜಿಸುವುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಕವಿ ಕುಮಾರವ್ಯಾಸ ಗದುಗಿನ ಭಾರತದಂತೆ ಬಹು ಜನಪ್ರಿಯವಾಗಿದ್ದು ಪಾಮರರನ್ನು ರಂಜಿಸುತ್ತಿದೆ.

ಇಂತಹ ಮಹೋನ್ನತ ಕೃತಿಯನ್ನು ಬರೆದ ಸಂತಕವಿ ತುಳಸಿದಾಸರ ಜೀವನ ಒಂದು ಪವಿತ್ರ ಯಾತ್ರೆಯಂತಿದೆ. ರಾಮಕಥೆಯ ಮೂಲಕ ಉನ್ನತ ಮೌಲ್ಯಗಳ ದಿವ್ಯ ಸಂದೇಶಗಳನ್ನು ಜನರಿಗೆ ತಲುಪಿಸುವುದರ ಮೂಲಕ ಕೃತಾರ್ಥರಾಗಿದ್ದಾರೆ.

1497 ರಲ್ಲಿ ವಿಕ್ರಮನಾಮಸಂವತ್ಸರದ ಶ್ರಾವಣಶುಕ್ಲ ಸಪ್ತಮಿಯಂದು ತುಲಸೀದಾಸರು ಉತ್ತರ ಪ್ರದೇಶದ ಬಾಂದ್ ಜಿಲ್ಲೆಯ ರಾಜಾಪುರದಲ್ಲಿ ಜನಿಸಿದರು. ತಂದೆ ಆತ್ಮಾರಾಮದುಬೆ, ತಾಯಿ ಹುಲಸೀ, ಹುಟ್ಟಿದ ಕೂಡಲೆ ಅಳುವಿನ ಬದಲು ಮಗುವಿನ ಬಾಯಿಂದ ರಾಮಶಬ್ದ ಮೂಡಿ ಬಂತು. ಬಾಲ್ಯದಲ್ಲಿ ನರಹರಿ ದಾಸರಿಂದ ರಾಮ ಮಂತ್ರದ ದೀಕ್ಷೆ ಪಡೆದು, ಅಯೋಧ್ಯೆ ಮತ್ತು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿದರು.

ರತ್ನಾವಳಿಯೊಂದಿಗೆ ವಿವಾಹವಾಗಿ ಸುಮಧುರ ಸಾಂಸಾರಿಕ ಜೀವನಕ್ಕೆ ಕಾಲಿಟ್ಟರು. ಒಮ್ಮೆ ತವರಿಗೆ ಹೋಗಿದ್ದ ಪತ್ನಿಯನ್ನು ನೋಡುವ ತವಕದಿಂದ ನಡುರಾತ್ರಿ ಧಾರಾಕಾರ ಮಳೆಯನ್ನು ಲೆಕ್ಕಿಸದೆ ಪತ್ನಿಯ ಮನೆಗೆ ಹೋದರು. ಪತಿಯ ಈ ನಡವಳಿಕೆಯಿಂದ ಜಿಗುಪ್ಸೆಗೊಂಡ ರತ್ನಾವಳಿ, ತನ್ನ ಪತಿಯನ್ನು ಕುರಿತು ಮಾಂಸ ಮೂಳೆಗಳಿಂದ ಕೂಡಿದ ಈ ನನ್ನ ಶರೀರದ ಮೇಲಿನ ನಿಮ್ಮ ಪ್ರೀತಿ ಭಗವಂತನ ಮೇಲೆ ತೋರಿದ್ದರೆ ನೀವು ಜೀವನ್ಮುಕ್ತರಾಗಿರುತ್ತಿದ್ದೀರಿ ಎಂದು ಹೇಳಿದಳು. ಪತ್ನಿಯ ಈ ಮಾತುಗಳಿಂದ ತುಳಸಿದಾಸರಿಗೆ ಜ್ಞಾನೋದಯವಾಯಿತು. ಒಡನೆಯೇ ಮನೆ ಮಠಗಳನ್ನು ತ್ಯಜಿಸಿ ಸಂತರಾಗಿ ಪರಿವರ್ತಿತರಾಗಿ ತೀರ್ಥಯಾತ್ರೆಯನ್ನು ಕೈಗೊಂಡರು. ಕಾಶೀ,ಪ್ರಯಾಗಗಳಲ್ಲಿ ರಾಮಕಥೆಯ ಪ್ರವಚನ ಕೈಗೊಂಡರು. ಚಿತ್ರಕೂಟದಲ್ಲಿ ಅವರಿಗೆ ಶ್ರೀರಾಮನ ಸಾಕ್ಷಾತ್ಕಾರವಾಯಿತು ಅಯೋಧ್ಯೆಯಲ್ಲಿ ನಿಂತು ರಾಮಚರಿತಮಾನಸ ಕೃತಿ ರಚಿಸಿದರು. ಕೃತಿ ರಚನೆ ಪೂರ್ಣಗೊಂಡ ಮೇಲೆ ಕಾಶಿಗೆ ತೆರಳಿ ವಿಶ್ವನಾಥನ ಸನ್ನಿಧಿಯಲ್ಲೂ ಹಾಡಿ ಶಂಕರನ ಕೃಪೆಗೆ ಪಾತ್ರರಾದರು. ಉಳಿದ ಜೀವನವನ್ನು ಶ್ರೀ ರಾಮಚರಿತಮಾನಸ ಪ್ರಸಾರ ಕಾರ್ಯದಲ್ಲಿ ತೊಡಗಿಸಿಕೊಂಡರು ಜನತೆಯಲ್ಲಿ ಈ ಮೂಲಕ ಭಕ್ತಿ, ಜ್ಞಾನ, ವೈರಾಗ್ಯ ಹಾಗೂ ಉನ್ನತ ಮೌಲ್ಯಗಳನ್ನು ಬಿತ್ತಿದರು.

ಭಕ್ತ ಕವಿ ತುಲಸಿದಾಸರು ರಚಿಸಿರುವ "ಹನುಮಾನ್ ಚಾಲೀಸ್" ಬಹು ಜನಾದರಣೀಯವಾಗಿದ್ದು, ಭಾರತದ ಅನೇಕ ಭಾಷೆಗಳಿಗೆ ಅನುವಾದವಾಗಿದೆ. ಸರಳ ಭಾಷೆ ಹಾಗೂ ಸುಲಲಿತ ಛಂದಸ್ಸಿನಲ್ಲಿರುವ ಹನುಮಾನ್ ಚಾಲೀಸ್‌ನಲ್ಲಿ ಹನುಮಂತನ ಮಹಿಮೆ, ಹನುಮದ್ ವೈಭವಗಳನ್ನು ಸುಂದರವಾಗಿ ವರ್ಣಿಸಲಾಗಿದೆ.ಭಕ್ತಿ ರಸ ಪ್ರಧಾನವಾದ ಈ ಕೃತಿ ತುಲಸೀದಾಸರ ಭಕ್ತಿ ಪಾರಮ್ಯವನ್ನು ಎತ್ತಿ ಹಿಡಿದಿದೆ.



# ಆನೇಕಲ್ಲಿನ ಶ್ರೀ ಚನ್ನಕೇಶವ ದೇವಾಲಯ ಮತ್ತು ತಿಮ್ಮರಾಯಸ್ವಾಮಿ ದೇವಾಲಯ



-ಕೆಂಗೇರಿ ಚಕ್ರಪಾಣಿ
94483 86886

ಬೆಂಗಳೂರು ನಗರ ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರ ಆನೇಕಲ್ಲು. ಬೆಂಗಳೂರಿನಿಂದ ನೈಋತ್ಯಕ್ಕೆ ತಮಿಳುನಾಡು ರಾಜ್ಯದ ಗಡಿಗೆ ಹೊಂದಿಕೊಂಡಿರುವ ಸ್ಥಳ. ಈ ಪ್ರದೇಶದಲ್ಲಿ ಆನೆಗಳು ಅಧಿಕ ಸಂಖ್ಯೆಯಲ್ಲಿದ್ದುದರಿಂದ ಆನೇಕಲ್ಲು ಎಂಬ ಹೆಸರು ಬಂದಿರಬಹುದೆಂಬ ಅಭಿಪ್ರಾಯ ವಿದೆ. ಆನೇಕಲ್ಲು ಎಂಬ ಹೆಸರನ್ನು ಸಂಸ್ಕೃತದೊಳಗೆ ಗಜ ಪುರಿ ಎಂದು ಕರೆಯಲಾಗಿದೆ. ಆನೇಕಲ್ಲು ಗ್ರಾಮವನ್ನು ವಿಜಯ ನಗರ ದರಸರ ಮಾಂಡಳೀಕನಾಗಿದ್ದ ಸುಗಟೂರಿನ ಚಿಕ್ಕ ತಮ್ಮೇ ಗೌಡನು ಇಲ್ಲಿ ಆಳ್ವಿಕೆ ನಡೆಸಿದ್ದನು. ಈ ಊರಿಗೆ ಸಹ ದೇವ ಪುರ ಎಂಬ ಹೆಸರು ಇದೆ. ಆನೇಕಲ್ಲಿನಲ್ಲಿ ಭವಾನಿ ಶಂಕರ, ಅಮೃತ ಮಲ್ಲಿಕಾರ್ಜುನ, ಚನ್ನಕೇಶವ ಮತ್ತು ತಿಮ್ಮ ರಾಯ ಸ್ವಾಮಿ (ವೆಂಕಟೇಶ್ವರ) ಮುಂತಾದ ದೇವಾಲಯ ಗಳಿವೆ.

## ಶ್ರೀ ಚನ್ನಕೇಶವ ದೇವಾಲಯ

ಆನೇಕಲ್ಲಿನ ಅಮೃತ ಮಲ್ಲಿಕಾರ್ಜುನ ದೇವಾಲಯದ ಸಮೀಪ ಚನ್ನಕೇಶವ ದೇವಾಲಯವಿದೆ. ದೇವಾಲಯವು ವಿಶಾಲವಾದ ಪ್ರಾಕಾರದಲ್ಲಿದ್ದು, ಗರ್ಭಗೃಹ ಅಂತರಾಳ, ನವ ರಂಗ ಹಾಗೂ ಸುಂದರವಾದ ರಾಜಗೋಪುರವನ್ನೊಳ ಗೊಂಡಿದೆ. ವಿಜಯನಗರದರಸರ ಆರಂಭ ಕಾಲಕ್ಕೆ ಸೇರುವ ದೇವಾಲಯವು ಶಿಥಿಲ ಹಂತವನ್ನು ತಲುಪಿದ್ದರಿಂದ, ದೇವಾ ಲಯದ ಸ್ತಂಭಗಳನ್ನು ಹಾಗೂ ಮೂಲಮೂರ್ತಿಗಳನ್ನು ಉಳಿಸಿಕೊಂಡು ನೂತನ ಶಿಲಾಮಯ ದೇಗುಲವನ್ನು ಸ್ಥಳೀ ಯರು ಆಸಕ್ತಿವಹಿಸಿ ಅಂದವಾಗಿ ನಿರ್ಮಿಸಿರುವರು. ನವ ರಂಗದ ಕಂಬಗಳಲ್ಲಿ ಉಬ್ಬು ಶಿಲ್ಪವಾಗಿ ದೇವತೆಗಳ ಮೂರ್ತಿ ಗಳನ್ನು ಮೂಡಿಸಿದ್ದು ಅವುಗಳಲ್ಲಿ ಭಕ್ತನ ಮೂರ್ತಿ ಉಗ್ರನರ ಸಿಂಹ, ಬಲೀಂದ್ರ ವಾಮನ, ರಾಮ, ಕೃಷ್ಣ ಮಾರುತಿ, ಗಜೇಂದ್ರಮೋಕ್ಷ ಮುಂತಾದ ಮೂರ್ತಿಗಳು ಗಮನ ಸೆಳೆ ಯುತ್ತದೆ.

ಗರ್ಭಗುಡಿಯಲ್ಲಿ ಸುಮಾರು ಐದು ಅಡಿ ಎತ್ತರವಿರುವ ಶ್ರೀಭೂನೀಳಾ ಸಹಿತನಾದ ಚನ್ನಕೇಶವನ ಅತ್ಯಂತ ಆಕರ್ಷಕ ವಾದ ಮೂರ್ತಿಯಿದೆ. ಚಕ್ರ, ಶಂಖ, ಅಭಯ, ವರದಹಸ್ತಧಾರಿ ಯಾದ ಚನ್ನಕೇಶವನು ಕಿರೀಟಮುಕುಟವನ್ನು ಧರಿಸಿದ್ದು. ಮುಖಾರವಿಂದವು ಸೊಗಸಾಗಿ ಮೂಡಿ ಬಂದಿದೆ. ದೇವನ ಇಕ್ಕೆಲ ಗಳಲ್ಲಿ ಶ್ರೀದೇವಿ, ಭೂದೇವಿಯರಿದ್ದರೆ, ಅಂತರಾಳದ ಒಂದು ಬದಿಯಲ್ಲಿ ವಿಷ್ಣುವಿನ ಭಕ್ತೆ ಆಂಡಾಳ್ ತಾಯಿಯ ವಿಗ್ರಹವಿದೆ. ದೇವಾಲಯದ ಪ್ರಾಕಾರದಲ್ಲಿ ಬಲಗೈಯಲ್ಲಿ ಬೆಣ್ಣೆಯನ್ನು ಹಿಡಿ ದಿರುವ ನವನೀತ ಕೃಷ್ಣನ ಮತ್ತು ಮಾರುತಿಯ ಸಣ್ಣ ಗುಡಿಗಳಿವೆ.

ಆನೇಕಲ್ಲಿನ ಶ್ರೀಭೂನೀಳಾ ಸಹಿತ ಚನ್ನಕೇಶವ ಸ್ವಾಮಿಯ ಬ್ರಹ್ಮ ರಥೋತ್ಸವವು ಫಾಲ್ಗುಣ ಶುದ್ಧ ಪಂಚಮಿಯಂದು ಬಹಳ ಅದ್ದೂರಿಯಾಗಿ ಸಹಸ್ರಾರು ಭಕ್ತರ ಸಮ್ಮುಖವಾಗಿ ನೆರವೇರುತ್ತದೆ. ಉತ್ಸವದ ಅಂಗವಾಗಿ ಮೊದಲ ದಿನ ಅಂಕು ರಾರ್ಪಣ,ಯಾಗಶಾಲೆ ಪ್ರವೇಶ,ದ್ವಿತೀಯ ದಿನ ಧ್ವಜಾರೋಹಣ, ತೃತೀಯ ದಿನ ಪ್ರಾಕಾರೋತ್ಸವ, ಗಜೇಂದ್ರಮೋಕ್ಷ, ತಿರು ಕಲ್ಯಾ ಣೋತ್ಸವ, ನಾಲ್ಕನೆಯ ದಿನ ಗರುಡೋತ್ಸವ, ಐದನೆಯ ದಿನ ಬ್ರಹ್ಮ ರಥೋತ್ಸವವು ಕರ್ನಾಟಕ ರಾಜ್ಯ ಸರ್ಕಾರದ ನೇತೃ ತ್ವದಲ್ಲಿ ಭಕ್ತಾದಿಗಳ ಸಮ್ಮುಖದಲ್ಲಿ ಬಹಳ ವೈಭವವಾಗಿ ಪಾಂಚ ರಾತ್ರಾಗಮ ರೀತ್ಯಾ ನೆರವೇರುತ್ತದೆ.

ಉತ್ಸವಾನಂತರ ಎರಡು ದಿನಗಳ ಕಾಲ ಶೇಷ ವಾಹ ನೋತ್ಸವ, ಪ್ರಾಕಾರೋತ್ಸವ,ಹನುಮಂತೋತ್ಸವ, ವಸಂತೋ ತ್ಸವ ನಡೆದು ಧ್ವಜಾವರೋಹಣ ಮತ್ತು ಶಯನೋತ್ಸವ ದೊಂದಿಗೆ ಮುಕ್ತಾಯವಾಗುತ್ತದೆ.

ಚನ್ನಕೇಶವಸ್ವಾಮಿಗೆ ಶ್ರಾವಣ ಮಾಸದ ಶನಿವಾರಗಳಲ್ಲಿ ಮತ್ತು ವೈಕುಂಠ ಏಕಾದಶಿಯ ದಿನ ವಿಶೇಷ ಪೂಜಾ ಕೈಂಕ ರ್ಯವು ಜರುಗುವುದು.

ಆನೇಕಲ್ಲಿನ ಚನ್ನಕೇಶವ ದೇವಾಲಯದ ಬಗ್ಗೆ ಬರೆಯು ವಾಗ ಸ್ಮರಿಸಬೇಕಾದ ವ್ಯಕ್ತಿ ಸ್ಥಳೀಯ ಹೋಟಲ್ ಉದ್ಯಮಿಯಾಗಿರುವ ಶ್ರೀ ಚಂದ್ರಶೇಖರ ವಾರಂಬಳ್ಳಿಯವರ ಪುತ್ರ ರಾದ ಶ್ರೀಲಕ್ಷ್ಮಣ್‌ರವರು. ದೇವಾಲಯದ ಜೀರ್ಣೋದ್ಧಾರದ ಸಮಯದಲ್ಲಿ ಹಣಕಾಸಿನ ತೊಡಕಾದಾಗ ಅವರು ಬಹು ಬೆಲೆಬಾಳ ತಕ್ಕ ತಮ್ಮ ನಿವೇಶನವನ್ನೇ ಮಾರಿ ಹಣ ಹೊಂದಿಸಿ ಜೀರ್ಣೋದ್ಧಾರದ ಮಹತ್ಕಾರ್ಯಕ್ಕೆ ಸಹಕರಿಸಿದ್ದಾರೆ. ಶ್ರೀಲಕ್ಷ್ಮಣ್‌ರವರು ಇತ್ತೀಚೆಗೆ ಬಹಳ ಕಿರು ವಯಸ್ಸಿನಲ್ಲಿಯೇ ಹರಿ ಪಾದವನ್ನು ಸೇರಿದ್ದರೂ ಅವರ ದಾನ ಶೀಲತೆ ಅವರನ್ನು ಅಜರಾಮರಗೊಳಿಸಿದೆ.

**ಶ್ರೀ ವೆಂಕಟೇಶ್ವರ ದೇವಾಲಯ (ತಿಮ್ಮರಾಯಸ್ವಾಮಿ ದೇವಾಲಯ)**

ಆನೇಕಲ್ಲಿನ ಮತ್ತೊಂದು ಪ್ರಮುಖ ದೇವಾಲಯ ಶ್ರೀ ವೆಂಕಟೇಶ್ವರ ದೇವಾಲಯವಾಗಿರುವುದು. ಆನೇಕಲ್ ಹೊಸೂರು ರಸ್ತೆಯ ಸಮೀಪವಿರುವ ಬೃಹತ್ ದೇವಾಲಯವು ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದೆ. ದೇವಾಲಯಕ್ಕೆ ನಾಲ್ಕು ದಿಕ್ಕಿನಲ್ಲಿಯೂ ಪ್ರವೇಶ ಗೋಪುರಗಳನ್ನು ಹೊಂದಿರುವ ಪ್ರವೇಶದ್ವಾರವಿದೆ. ದೇವಾಲಯವನ್ನು ಇತ್ತೀಚೆಗೆ ನವೀಕರಿಸಿದ್ದಾರೆ. ಕ್ರಿ.ಶ.1913ರಲ್ಲಿ ದೇವಾಲಯವು ಜೀರ್ಣೋದ್ಧಾರವಾಗಿದೆ. ವಿಶಾಲವಾದ ಪ್ರಾಕಾರದಲ್ಲಿರುವ ವೆಂಕಟೇಶ್ವರನ ಗುಡಿಯ ಮೂಲ ಬಿಂಬವು ನಿರಾಕಾರವಾಗಿ ಸಾಲಿಗ್ರಾಮ ಶಿಲೆಯಲ್ಲಿದೆ. ನಿರಾಕಾರ ಬಿಂಬದ ಹಿಂಬದಿಯ ಭಿತ್ತಿಯಲ್ಲಿ ಗುಂಡಾದ ಶಿಲೆಯಿದ್ದು ದೇವನ ಬೆನ್ನು ಎಂದು ಗುರು ತಿಳಿಸುತ್ತಾರೆ. ಗರ್ಭಗುಡಿಯಲ್ಲಿ ಪುರಾತನ ಕಾಲದ ನಿರಾಕಾರವಾಗಿರುವ ದೇವನ ಜೊತೆಗೆ ಇತ್ತೀಚೆಗೆ ವೆಂಕಟೇಶ್ವರ ಮೂರ್ತಿ



ಯನ್ನು ಪ್ರತಿಷ್ಠಾಪಿಸಿದ್ದಾರೆ. ದೇವಾಲಯವು ಮೂಲತಃ ವಿಜಯ ನಗರದ ಅರಸು ಎರಡನೆಯ ಬುಕ್ಕರಾಯನ ಕಾಲಕ್ಕೆ ಸೇರುವ ಆಲಯವಾಗಿದೆ.

ಅನೇಕಲ್ಲಿನ ತಿಮ್ಮರಾಯಸ್ವಾಮಿ ಬ್ರಹ್ಮರಥೋತ್ಸವವು ಚೈತ್ರಮಾಸ ಶುಕ್ಲಪಕ್ಷದ ಸಪ್ತಮಿಯಲ್ಲಿ ಮಧ್ಯಾಹ್ನ ಒಂದೂವರೆ ಗಂಟೆಗೆ ಪಾಂಚ ರಾತ್ರಾಗಮ ರೀತ್ಯ ಬಹಳ ವಿಜೃಂಭಣೆಯಿಂದ ನೆರವೇರುತ್ತದೆ. ಚೈತ್ರ ಶುದ್ಧ ಪಾಡ್ಯಮಿಯಿಂದ ಆರಂಭವಾಗುವ ಬ್ರಹ್ಮ ರಥೋತ್ಸವದ ಪೂಜಾ ಕೈಂಕರ್ಯಗಳು ಏಳು ದಿನಗಳ ಕಾಲ ಬಹಳ ವೈಭವವಾಗಿ ನೆರವೇರುತ್ತವೆ.

**ಹೀಗೆ ಬನ್ನಿ :**

ಬೆಂಗಳೂರು ನಗರ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಆನೇಕಲ್ಲು ಬೆಂಗಳೂರು ನಗರದಿಂದ 35 ಕಿ.ಮೀ. ದೂರದಲ್ಲಿದೆ.

ಬೆಂಗಳೂರಿನಿಂದ ಅನೇಕಲ್ಲಿಗೆ ಸಾಕಷ್ಟು ವಾಹನಗಳ ಸೌಲಭ್ಯವಿದೆ.

## ಶ್ರೀ ಬೇಡಿ ಆಂಜನೇಯ ಸ್ವಾಮಿ ಆಲಯ

**ತಿರುಮಲೆಯಲ್ಲಿ ಶ್ರೀನಿವಾಸನ ಆಲಯಕ್ಕೆ ಎದುರಾಗಿ ಈ ದೇವಸ್ಥಾನವಿದೆ. ಶ್ರೀ ಶ್ರೀನಿವಾಸನಿಗೆ ನಮಸ್ಕರಿಸುತ್ತಿರುವ ಭಂಗಿಯಲ್ಲಿರುವ ಈ ಆಂಜನೇಯನ ಕೈಗಳಿಗೆ, ಕಾಲುಗಳಿಗೆ ಬೇಡಿಯನ್ನು ಧರಿಸಿ ದರ್ಶನವನ್ನು ನೀಡುತ್ತಿದ್ದಾನೆ. ಅಂಜನಾದ್ರಿಯ ಪರ್ವತದ ಮೇಲೆ ತುಂಟಾಟವಾಡುತ್ತಿದ್ದ ಹನುಮಂತನನ್ನು, ಅವನ ತಾಯಿ ಅಂಜನಾ ದೇವಿ ಗದರಿಸಿ ಕೈಗಳಿಗೆ ಕಾಲುಗಳಿಗೆ ಬೇಡಿಯನ್ನು ತೊಡಿಸಿ, ಶ್ರೀ ಹರಿಯ ಎದಿರು ನಿಲ್ಲಿಸಿದಳಂತೆ, ಅದಕ್ಕೆ ಈ ಸ್ವಾಮಿಯನ್ನು ಬೇಡಿ ಆಂಜನೇಯನೆಂದು ಕರೆಯುತ್ತಾರೆ. ಈ ದೇವಾಲಯದಲ್ಲಿ ಮುಖ ಮಂಟಪ ಗರ್ಭಗುಡಿ ಎಂಬ ಎರಡು ಭಾಗಗಳಿವೆ.**



# ಹರಿದಾಸಿಯರು ಕಂಡಂತೆ ಶ್ರೀ ರಾಘವೇಂದ್ರ ತೀರ್ಥರು

ಡಾ॥ ಭಾರತೀ ರವೀಂದ್ರ
94802 63676

ರಾಘವೇಂದ್ರ ಸ್ವಾಮಿಗಳ ಹೆಸರನ್ನು ಬಹುಶಃ ಕೇಳದೇ ಇರುವವರೇ ಇಲ್ಲ ಅನ್ನಬಹುದು. ಅಷ್ಟು ಪ್ರಖ್ಯಾತರು ರಾಯರು. ವೈಷ್ಣವರು ಮಾತ್ರವಲ್ಲದೇ ಅನ್ಯಧರ್ಮೀಯರೂ ಕೂಡ ರಾಯರ ಮಹಿಮೆ ತಿಳಿದು, ತಮ್ಮ ತಮ್ಮ ಮನೆಗಳಲ್ಲಿ ರಾಯರ ಚಿತ್ರವನ್ನು ಇಟ್ಟು ಇವತ್ತಿಗೂ ಪೂಜೆ ಮಾಡ್ತಾ ಇದ್ದಾರೆ. ಮಂತ್ರಾಲಯ ಕ್ಷೇತ್ರದಲ್ಲಿ ಸಶರೀರ ಬೃಂದಾವನಸ್ಥರಾಗಿ, ಯೋಗ ನಿದ್ರೆಯಲ್ಲಿರುವ ರಾಯರ ದರ್ಶನಕ್ಕೆ ಇವತ್ತಿಗೂ ಸಾವಿರಾರು ಭಕ್ತರು ಬರುತ್ತಾರೆ. ಕಲಿಯುಗ ಕಲ್ಪತರು, ಕಾಮಧೇನು ಎಂದೇ ಪ್ರಖ್ಯಾತಿ ಇಂದಿಗೂ ಅವರನ್ನು ನಂಬಿ ಬರುವ ಭಕ್ತಾದಿಗಳ ಕಷ್ಟವನ್ನು ಜಾತಿ-ಮತ ಎಣಿಸದೆ,ಪರಿಹರಿಸುವ ಕರುಣಾಮೂರ್ತಿ ರಾಘವೇಂದ್ರರು.

ರಾಯರ ಅನುಗ್ರಹವನ್ನು ನಾವು ಅನೇಕ ರೀತಿಯಲ್ಲಿ ಪಡೆಯಬಹುದು.ಅವರ ಮೇಲಿನ ದೇವರನಾಮ ಹಾಡೊದು, ಭಜನೆ ಮಾಡೋದು ಅವರ ಪ್ರಸಾದ ಸ್ವೀಕರಿಸೋದು ಹೀಗೆ, ಆದರೆ ಅವರು ನಮ್ಮ ಅಂತರಂಗಕ್ಕೆ ಇಳಿಯಬೇಕಾದ್ರೆ ನಮ್ಮ ಮನಸ್ಸು ಬುದ್ಧಿ ಉಪಯೋಗಿಸಿ ಅವರ ಮಹಿಮೆಯನ್ನು ಕೊಂಡಾಡಬೇಕು. ಅವರನ್ನು ಹೇಗೆ ಕೊಂಡಾಡಬೇಕು? ಹೇಗೆ ಸ್ತುತಿಸಬೇಕು. ಅನ್ನೋದನ್ನ ನಮ್ಮ ಹರಿದಾಸರು ತೋರಿಸಿ ಕೊಟ್ಟಿದ್ದಾರೆ. ನಮ್ಮ ದಾಸರುಗಳು ರಾಯರ ಮೇಲೆ ರಚಿಸಿರುವಷ್ಟು ಪದಗಳು ಬಹುಶಃ ಬೇರೆ ಇನ್ಯಾವ ಗುರುಗಳ ಮೇಲೂ ರಚಿಸಿಲ್ಲ ಅಂತಾನೇ ಹೇಳಬಹುದು.

**ಗುರುರಾಯರು:** ಮಾಧ್ವಯತಿಗಳಲ್ಲಿ ಶ್ರೀ ಜಯತೀರ್ಥರು, ಶ್ರೀಪಾದರಾಜರು, ವ್ಯಾಸರಾಜರಂಥ ಪ್ರಮುಖ ಯತಿಗಳ ನಂತರ ಕೇಳಿಬರುವುದೇ ರಾಘವೇಂದ್ರ ತೀರ್ಥರ ಹೆಸರು. ಪ್ರಹ್ಲಾದ ರಾಜರ ಮೂರನೇ ಅವತಾರವೇ ಶ್ರೀರಾಘವೇಂದ್ರರು ವ್ಯಾಸತೀರ್ಥರಿಂದ ವ್ಯಾಸಕೂಟ ಕಳೆಕಟ್ಟಿದ್ದರೆ, ದಾಸಕೂಟವನ್ನು ಬೆಳೆಸಿ ಜೀವಕಳೆ ತುಂಬಿದವರೇ ರಾಘವೇಂದ್ರ ತೀರ್ಥರು.ದಾಸ ತತ್ವದ ಪ್ರಚಾರಕ್ಕೆ ಮಂತ್ರಾಲಯವೇ ಕೇಂದ್ರ ಸ್ಥಳವಾಗಿತ್ತು. ಆ ಸಮಯದಲ್ಲೇ ವಿಜಯದಾಸರು,ಗೋಪಾಲದಾಸರು, ಜಗನ್ನಾಥ ದಾಸರು,ಮುಂತಾದವರು ಪ್ರಸಿದ್ಧಿಗೆ ಬಂದಿದ್ದು. ಇವೆರೆಲ್ಲರಿಂದ ರಚಿತವಾದ ರಾಯರ ಮೇಲಿನ ಕೃತಿಗಳು, ರಾಯರ ಬಗ್ಗೆ ತಿಳಿದುಕೊಳ್ಳಲು ಆಧಾರವಾಗಿವೆ.

ಹೀಗೆ ರಾಯರನ್ನು ಕೊಂಡಾಡಿದವರು ಕೇವಲ ಹರಿದಾಸರುಗಳಲ್ಲ, ಹರಿದಾಸಿಯರೂ ಇದ್ದಾರೆ. ದಾಸಸಾಹಿತ್ಯದಲ್ಲಿ ಮಹಿಳೆಯರು ಕಂಡು ಬರುವುದು 18 ನೇ ಶತಮಾನದಿಂದ ಈಚೆಗೆ.ಈ ಹರಿದಾಸಿಯರ ವೈಶಿಷ್ಟ್ಯ ಏನು?ಅವರು ರಾಯರನ್ನು ಹೇಗೆಲ್ಲಾ ಕೊಂಡಾಡಿದ್ದಾರೆ ಅಂತ ನೋಡೋಣ.

**ಮಹಿಳಾ ಹರಿದಾಸರ ವೈಶಿಷ್ಟ್ಯ:**

ನಮ್ಮ ಕರ್ನಾಟಕದ ಹರಿದಾಸ ಪಂಥವು ಒಂದು ಮಹಾಸಾಗರವಿದ್ದಂತೆ ಅದೆಷ್ಟೋ ನದಿಗಳು,ಉಪನದಿಗಳೂ ಸೇರಿ ಸಾಗರವನ್ನು ಸೇರುವಂತೆ. ಭಕ್ತಿ ಪಂಥವೆಂಬ ಸಾಗರವನ್ನು ಸೇರುವ ಭಕ್ತಿ ಮಾರ್ಗದಲ್ಲಿ ಹರಿದಾಸಿಯರೂ ಸೇರಿ ದಾಸ ಸಾಹಿತ್ಯವ ಶ್ರೀಮಂತಗೊಳಿಸಿದ್ದಾರೆ. ಮಹಿಳೆಯರು ಸಾಹಿತ್ಯ ರಚನೆಯ ಜೊತೆಗೆ ಅದರ ರಕ್ಷಣೆಯಲ್ಲೂ ಮುಖ್ಯ ಪಾತ್ರವಹಿಸಿದ್ದಾರೆ.

ಆ ಕಾಲದ ಹೆಣ್ಣು ಮಕ್ಕಳಿಗೆ ಸಾಮಾನ್ಯ ಶಿಕ್ಷಣದ ಸೌಲಭ್ಯ ವಿರಲಿಲ್ಲ. ಜನಸಂಪರ್ಕ ವಿದ್ವಾಂಸರ ಒಡನಾಟ ಇತ್ಯಾದಿಗಳೂ ಮಹಿಳೆಯರಿಗೆ ಇರಲೇ ಇಲ್ಲ.ಹೊರ ಪ್ರಪಂಚದ ಆಗು ಹೋಗುಗಳ ಮಾಹಿತಿಯೇ ಇರಲಿಲ್ಲ.

ಈ ರೀತಿ ಸಂಪ್ರದಾಯಬದ್ಧ ಚೌಕಟ್ಟಿನಲ್ಲಿ ಬೆಳೆದ ಹೆಣ್ಣು ಮಕ್ಕಳಿಗೆ ಮನೆಯಲ್ಲಿ ನಡೆಯುತ್ತಿದ್ದ ಪಾಠ ಪ್ರವಚನಗಳ ಶ್ರವಣವೇ ಮೂಲವಾಗಿತ್ತು ಅವರ ಜ್ಞಾನ ಸಂಪಾದನೆಗೆ, ಬಾಲ್ಯವಿವಾಹ, ವಿಧವಾ ಶೋಷಣೆ ಪದ್ಧತಿಗಳಿದ್ದಾಗ, ಆ ಆಘಾತಗಳನ್ನು ಎದುರಿಸಿಕೊಂಡೇ ಆಧ್ಯಾತ್ಮ ಸಾಧನೆ ಮಾಡುವಂಥ ಸ್ಥಿತ ಪ್ರಜ್ಞತೆ ಹೊಂದಿದ್ದರು.

"ನ ಸ್ತ್ರೀ ಸ್ವಾತಂತ್ರ ಮರ್ಹತಿ,ಗೃಹಿಣೀ ಗೃಹಮುಚ್ಯತೇ-" ಎಂಬ ಮಾತುಗಳೇ ಪ್ರಭಾವವಿದ್ದ ಕಾಲದಲ್ಲಿ, ಏನು ಮಾಡಿದ್ರೆ ತಪ್ಪೋ ಎನ್ನುವ ಸಂದಿಗ್ಧ ಪರಿಸ್ಥಿತಿಯಲ್ಲೇ ದಿಟ್ಟ ಹೆಜ್ಜೆಯಿಟ್ಟ ಹರಿದಾಸಿಯರೆಂದರೆ, ಗಿರಿಯಮ್ಮ,ಭೀಮವ್ವ,ಸರಸ್ವತೀಬಾಯಿ,ಅಂಬಾಬಾಯಿ, ಜೀವೂ ಬಾಯಿ, ದೊಡ್ಡಿ ಸುಧಾಬಾಯಿ, ರಾಧಾಬಾಯಿ ಇನ್ನು ಮುಂತಾದವರು.

ತಮಗೆ ಸಿಕ್ಕ ಸೀಮಿತ ಅನುಭವದಲ್ಲಿಯೇ ಅನೇಕ ಹಾಡುಗಳನ್ನು ಕಟ್ಟಿ ಮಹಿಳೆಯರಿಗಾಗಿಯೇ ಸಾಹಿತ್ಯ ರಚಿಸಿದ್ದು ವೈಶಿಷ್ಟ್ಯ.ಹರಿದಾಸರು ನುಡಿದಂತೆ ನಡೆದರೆ, ಹರಿದಾಸಿಯರು ಬದುಕನ್ನು ಬಂದಂತೆ ಸ್ವೀಕರಿಸಿದರು. ಹರಿದಾಸಿಯರ ಹಾಡು ಭಾವಕೋಶವೂ ಹೌದು, ಭಕ್ತಿ ಕೋಶವೂ ಹೌದು ಅನಕ್ಷರತೆಯೆಂಬ ತಡೆಗೋಡೆಯನ್ನು ಕೆಡವಿ ಅಕ್ಷರಸ್ಥರೂ ನಾಚುವ ರೀತಿಯಲ್ಲಿ ಹಾಡು ಹೆಣೆದರು.

ಜೀವನ್ಮುಖಿ ಸಾಹಿತ್ಯ ರಚಿಸಿ ದುಃಖದಲ್ಲಿರುವವರಿಗೆ ಸಾಂತ್ವನ ನೀಡುವುದರ ಜೊತೆಗೆ ಆಚಾರ್ಯರ ತತ್ವವನ್ನೂ ಹೇಳಿರುವುದು ವಿಶೇಷ. ಮಹಿಳಾ ಹರಿದಾಸಿಯರ ವೈಶಿಷ್ಟ್ಯವನ್ನು ತಿಳಿದ ನಂತರ ಮುಂದಿನ ಹಂತದಲ್ಲಿ ಹರಿದಾಸಿಯರಿಗೆ ರಾಯರ ಅನುಗ್ರಹ ಹೇಗೆ ಆಗಿದೆ? ರಾಯರನ್ನು ಹೇಗೆಲ್ಲಾ ಸ್ತುತಿ ಮಾಡಿದ್ದಾರೆ ಅಂತ ನೋಡೋಣ.

### ಹರಿದಾಸಿಯರು ಕಂಡಂತೆ ರಾಯರು

**1) ಹೆಳವನಕಟ್ಟೆ ಗಿರಿಯಮ್ಮ -** ಕರ್ನಾಟಕದ ಮೀರಾ ಎಂದೇ ಪ್ರಖ್ಯಾತರಾದವರು ಹೆಳವನಕಟ್ಟೆ ಗಿರಿಯಮ್ಮ, ವಿಜಯದಾಸರ ಕಾಲದಲ್ಲಿದ್ದ ಮಹಾಭಕ್ತೆ. ಮದುವೆಯಾಗಿದ್ದರೂ ವೈವಾಹಿಕ ಜೀವನದಲ್ಲಿ ಆಸಕ್ತಿ ಹೊಂದದೇ ವಿರಕ್ತಳಾಗಿದ್ದಳು. ಒಮ್ಮೆ ಇವರಿದ್ದ ಊರಿಗೇ,ರಾಘವೇಂದ್ರ ಸ್ವಾಮಿಗಳ ಪರಂಪೆಯ ಶ್ರೀ ಸುಮತೀಂದ್ರ ತೀರ್ಥ ಶ್ರೀಪಾದಂಗಳವರು ಬಂದಿದ್ದಾಗ ಅವರ ಅನುಗ್ರಹ ಗಿರಿಯಮ್ಮನಿಗೆ ಆಯಿತು.ಗಿರಿಯಮ್ಮ ಸಂಸ್ಥಾನದ ಮೂಲ ರಾಮನನ್ನು ಕವನದಲ್ಲಿ ವರ್ಣಿಸುವರು ಹೀಗೆ ರಾಯರ ಮಠದ ಅನುಗ್ರಹ ದೊರೆತ ಮೇಲೆ ಇನ್ನೂ ಪ್ರಖ್ಯಾತಿಗೆ ಬಂದು ಅನೇಕ ಪವಾಡಗಳನ್ನೂ ಮಾಡಿದವರು ಗಿರಿಯಮ್ಮ.

**2. ಅಂಬಾಬಾಯಿ :** ತಂದೆ ಮುದ್ದು ಮೋಹನ ವಿಠಲದಾಸರ ಪ್ರಮುಖ ಶಿಷ್ಯೆ ಅಂಬಾಬಾಯಿ. ಗೋಪಾಲಕೃಷ್ಣ ಅಂಕಿತದಲ್ಲಿ ಸುಮಾರು 300 ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಕೀರ್ತನೆಗಳನ್ನೂ ದೀರ್ಘ ಕೃತಿಗಳನ್ನೂ ಬರೆದಿದ್ದಾರೆ. ಇವರ ಇನ್ನೊಂದು ವೈಶಿಷ್ಟ್ಯವೆಂದರೆ, ಅಂದಿನ ಕಾಲದಲ್ಲಿ ಹರಿದಾಸರಂತೆ, ಯಾವ ಹರಿದಾಸಿಯರು ಗೆಜ್ಜೆ ಕಟ್ಟಿ ಕುಣಿದು ಯಾಯಾವಾರಕ್ಕೂ ಯಾರೂ ಹೋಗ್ತಾ ಇರಲಿಲ್ಲ. ಆದರೆ ಇವರು ಕಾವಿ ಧರಿಸಿ, ಗೆಜ್ಜೆ ಕಟ್ಟಿ, ಗೋಪಾಳ ಬುಟ್ಟಿ ಹಿಡಿದು ತಂಬೂರಿ ಮೀಟುತ್ತಾ ನಿಜವಾದ ಅರ್ಥದಲ್ಲಿ ದಾಸರಂತಿದ್ದರು.ಇವರ ಇನ್ನೊಂದು ಹೆಗ್ಗಳಿಕೆ ಎಂದರೆ ಕುವೆಂಪು ರಚಿಸಿರುವ ರಾಮಾಯಣ ದರ್ಶನಂ ಬರೆಯುವ ಮುಂಚೆಯೇ ಇವರೂ ರಾಮಕಥಾಮೃತವನ್ನು ಬರೆದಿದ್ದಾರೆ. ಇವರು ರಾಯರ ಮೇಲೆ ರಚಿಸಿರುವ 11 ನುಡಿಗಳನ್ನು ಹೊಂದಿರುವ ಕೃತಿಯೊಂದು ಸಿಕ್ಕಿದೆ.

ಬಂದನಿಂದು ರಾಘವೇಂದ್ರನು ಆನಂದದಿಂದಲಿ
ಬಂದನಿಂದು ರಾಘವೇಂದ್ರನು - ಅಂತ ಆರಂಭವಾಗತ್ತೆ

ಭಗವಂತನ ದಾರಿ ತೋರುವವನೆಂದಿಗೂ ಗುರುಗಳೇ ಎನ್ನುವಂತೆ, ರಾಯರ ಬೃಂದಾವನಕೆ ಶ್ರದ್ಧೆಯಿಂದ ನಡೆದುಕೊಂಡು ಭಕ್ತಿ ತೋರಿದರೆ ಅದು ಭಗವಂತನಿಗೂ ಸಲ್ಲುವುದು ಅಂತ ಹೇಳ್ತಾರೆ ಅಂಬಾ ಬಾಯಿಯವರು ಈ ಕೃತಿಯಲ್ಲಿ ಗುರುಗಳನ್ನು ನಂಬಿ ಭಜಿಸಿದರೆ ಅಂತರಂಗದಲ್ಲೇ ಹರಿಯನ್ನೆ ತೋರಿಸುವರೆಂದು ಸೊಗಸಾಗಿ ವರ್ಣಿಸಿದ್ದಾರೆ.

**3.ಸರಸ್ವತೀ ಬಾಯಿ :** ಶ್ರೀ ಶ್ರೀನಿವಾಸ ಅನ್ನೋ ಅಂಕಿತದಲ್ಲಿ ಸರಸ್ವತೀ ಬಾಯಿಯವರು ಸುಮಾರು 150 ಹಾಡುಗಳನ್ನು ಬರೆದಿದ್ದಾರೆ. ಇವರು ಕಲಿಯುಗ ದೈವವೆನಿಸಿರುವ ಶ್ರೀನಿವಾಸನ ಅಂತರಂಗದ ಭಕ್ತರು. ಹಾಗಾಗಿ ಅವನ ಅಂಕಿತವನ್ನೇ ಇಟ್ಟುಕೊಂಡು ಪದಗಳನ್ನೂ, ದೀರ್ಘ ಕೃತಿಗಳನ್ನೂ ಬರೆದಿದ್ದಾರೆ.ತಿರುಪತಿಯ ವೆಂಕಟೇಶ ಇವರ ಇಷ್ಟದೈವವಾದರೂ ಮಂತ್ರಾಲಯದ ರಾಯರ ಮೇಲೂ ಒಂದು ಕೃತಿ ಬರೆದಿದ್ದಾರೆ. ಕನ್ನಡ ಮಾತ್ರವಲ್ಲದೇ ತೆಲುಗು, ಮರಾಠಿಯಲ್ಲೂ ರಚನೆ ಮಾಡಿದ್ದಾರೆ. ಇವರ ಕೃತಿಗಳಲ್ಲಿ ಅನನ್ಯ ಭಕ್ತಿ ಹಾಗೂ ಶರಣಾಗತ ಭಾವವೇ ತುಂಬಿದೆ.

ಗುರುರಾಯರ ನಂಬಿರೋ ರಾಘವೇಂದ್ರ
ಗುರುರಾಯರ ನಂಬಿರೋ ಜಗದೊಳು ॥ ಪ॥

ಎಂದು ರಾಯರ ಮೇಲೆ ಹಾಡಿದ್ದಾರೆ. ರಾಯರ 3 ಅವತಾರಗಳಾದ ಪ್ರಹ್ಲಾದರಾಜರು, ವ್ಯಾಸರಾಯರು ಹಾಗೂ ರಾಘವೇಂದ್ರಸ್ವಾಮಿಗಳನ್ನು ವರ್ಣಿಸಿದ್ದಾರೆ. ಸರಸ್ವತಿಬಾಯಿಯವರು ತಮ್ಮ ಕೃತಿಯಲ್ಲಿ,

**4. ನಿಡಗುರುಕಿ ಜೀವೂಬಾಯಿ :** ಕಮಲನಾಭ ವಿಠಲ ಎಂಬ ಅಂಕಿತದಲ್ಲಿ ಸುಮಾರು 170 ಕೀರ್ತನೆಗಳನ್ನು ಬರೆದವರು ಜೀವೂ ಬಾಯಿಯವರು. ಸಂಪ್ರದಾಯಸ್ಥ ಮನೆಯಿಂದ ಬಂದವರೇ ಆದರೂ ಇವರಿಗೆ ಶಿಕ್ಷಣ ಸಂಗೀತ ಕಲಿಕೆ,ಎರಡೂ ದೊರೆಯಿತು. ಬಾಲ್ಯದಲ್ಲೇ ವಿಧವೆಯಾದರೂ, ಅಧ್ಯಾತ್ಮದತ್ತ ಮನ ಹೊರಳಿಸಿ ಜೀವನವನ್ನು ಸಾರ್ಥಕ ಪಡಿಸಿ

ಕೊಂಡರು. ಅನೇಕ ಸಂಪ್ರದಾಯದ ಹಾಡುಗಳನ್ನು ಬರೆಯುವುದರ ಜೊತೆಗೆ ರಾಯರ ಮೇಲೂ 3 ಕೃತಿಗಳನ್ನು ಬರೆದಿದ್ದಾರೆ.

ಬೇರೆಡೆ ಎಲ್ಲೂ ಹೋಗದೇ ರಾಯರನ್ನು ನಂಬಿ ಭಜಿಸಿದರೆ ಸಾಕು, ನಮ್ಮ ಪಾಪವನ್ನೆಲ್ಲ ಕಳೆದು ಅನುಗ್ರಹಿಸುವರು ಅಂತಭಕ್ತಿಯಿಂದ ಹಾಡಿದ್ದಾರೆ.

**4. ಹರಪ್ಪನಹಳ್ಳಿ ಭೀಮವ್ವ :** ಹರಿದಾಸ ಮಹಿಳೆಯರಲ್ಲಿ ಅತ್ಯಂತ ಜನಪ್ರಿಯರಾದವರು ಹರಪ್ಪನಹಳ್ಳಿ ಭೀಮವ್ವನವರು. ಶಿಕ್ಷಣ ವನ್ನೇ ಪಡೆಯದ ಭೀಮವ್ವನಿಗೆ ಮನೆಯಲ್ಲಿ ನಡೆಯುವ ಪಾಠ-ಪ್ರವಚ ನಗಳೇ ಅವರಿಗೆ ಆಧಾರ ಶ್ರವಣ ಮಾಧ್ಯಮವನ್ನೇ ಅವಲಂಭಿಸಿದ ಭೀಮ ವ್ವನ ಸಾಹಿತ್ಯದ ಹರಹು ವಿಶಾಲ.ಸ್ವಪ್ನದಲ್ಲೇ ಇವರಿಗೆ "ಭೀಮೇಶ ಕೃಷ್ಣ" ಅನ್ನೋ ಅಂಕಿತ ಸಿಗುವುದು. ವ್ರತ, ನೇಮ, ನಿಯಮಗಳಿಗೆ ಬೇಕಾದ ಸಂಪ್ರದಾಯದ ಹಾಡುಗಳನ್ನು ಭೀಮವ್ವ ಬರೆದುಕೊಟ್ಟಿದ್ದಾರೆ. ಈಗಲೂ ನಾವುಗಳೆಲ್ಲರೂ ಅವರು ಬರೆದ ಶುಕ್ರವಾರದ ಹಾಡು, ಶನಿವಾರದ ಹಾಡುಮಯ್ಯದ ಹಾಡು ಇವುಗಳನ್ನೆಲ್ಲಾ ನಾವು ಈಗಲೂ ಹಾಡುತ್ತೀವಿ. ಇವರ ವ್ರತ ಕಥೆಗಳೂ ಜನಪ್ರಿಯ. ದೇವರ ನಾಮ, ಸುಳಾದಿ, ಉಗಾ ಭೋಗ. ಈ ಎಲ್ಲ ಪ್ರಕಾರಗಳಲ್ಲೂ ಬರೆದಿದ್ದಾರೆ. ರಾಯರ ಬಗ್ಗೆ 2 ಕೃತಿ ಗಳನ್ನು ಬರೆದಿದ್ದಾರೆ ಇದು ಜನಪ್ರಿಯ ಕೃತಿಯಾದ್ದರಿಂದ ಅದರ ಒಂದೆರಡು ನುಡಿಗಳನ್ನು ನೋಡೋಣ.

ನೋಡಿರಿ ರಾಘವೇಂದ್ರರ ಮಾಡಿರಿ ನಮಸ್ಕಾರ
ಬೇಡಿದ ಇಷ್ಟಾರ್ಥ ನೀಡುವರು ನಮ್ಮ ಯತಿವರ ॥ಪ॥
ಮಂತ್ರಾಲಯದಿ ನಿಂತಿಹ ಚಿಂತೆಗಳ ಪರಿಹರಿಸುವ
ಕಂತುಪಿತನ ಅನಂತ ಗುಣ ತನ್ನಂತರಂಗದಿ ಸ್ತುತಿಸುವ
ಇಂಥಾ ಯತಿಗಳ ಕಾಣೆ, ಹರಿಯೇ ಕಾಂತ ಭಕ್ತರೆನಿಸಿ ಕೊಂಬುವ
ಮಂತ್ರಾಕ್ಷತೆ ಫಲ ನೀಡಿ ಸಂತಾನ ಸಂಪತ್ತು ಕೊಡು ವರ॥೧॥
ಭಜಿಸೆ ಭಕ್ತರ ನೋಡುವ ಸದನಕೆ ಬಂದು ಕೂಡುವ ಒದಗಿದ
ಆಪತ್ತು ದೂಡುವ ಮುದದಿ ತಾ ದಯಮಾಡುವ
ಅಜನನಯ್ಯನ ಕೊಂಡಾಡುತ ತುಂಗಾ ನದಿಯ ತೀರ
ವಾಸವಾಗಿ
ಹೃದಯದೊಳು ಭೀಮೇಶ ಕೃಷ್ಣನ ಪದವ ಭಜಿಸಿ
ಪಡೆವರಾನಂದವ ॥೩॥

ರಾಯರನ್ನು ಭಕ್ತಿಯಿಂದ ಭಜಿಸಿದರೆ ನಮ್ಮ ಮನೆಗೆ ಬಂದು ಆಪತ್ತು ಪರಿಹರಿಸುವರು ಅಂತ ಭಕ್ತಿ ಭಾವದಿಂದ ಹಾಡಿದ್ದಾರೆ.

**5. ರಾಧಾಬಾಯಿ :** ವೆಂಕಟೇಶ ವಿಠಲ ಅಂಕಿತದಿಂದ ಇವರು 35 ಹಾಡುಗಳನ್ನು ಬರೆದಿದ್ದಾರೆ. ಇವರ ವಿಶೇಷತೆ ಏನೆಂದರೆ ಇವರಿಗೆ ಪ್ರೇರಣೆಯಾಗಿ ಬರೆಯಲು ಶುರು ಮಾಡಿದ್ದೇ ತಮ್ಮ 80 ನೇ ವಯಸ್ಸಿನಲ್ಲಿ. ಇವರು ರಾಘವೇಂದರ್ರ ಪರಮ ಭಕ್ತೆ.ಬರೆದಿರುವ 35 ಹಾಡುಗಳಲ್ಲಿ 22 ಹಾಡುಗಳನ್ನು ರಾಯರ ಬಗ್ಗೆ ಬರೆದಿದ್ದಾರೆ. ಅನೇಕ ಹಾಡುಗಳಿಗೆ "ಶ್ರೀ ರಾಘವೇಂದ್ರ" ಅಂಕಿತದಲ್ಲೇ ಬರೆದಿದ್ದಾರೆ. ಇವರು ಬಳಸಿರುವ ಭಾಷೆ ಸರಳವಾಗಿದ್ದು ಸಾತ್ವಿಕ ಭಕ್ತಿಯಿಂದ ಕೂಡಿದೆ.

ಹೀಗೆ 18 ರಿಂದ 20 ನೇ ಶತಮಾನಗಳ ಅವಧಿಯಲ್ಲಿ ಸಾಂಪ್ರ ದಾಯಿಕವಾಗಿ ಹರಿದಾಸ ಅಂಕಿತ ಪಡೆದು ತಮ್ಮನ್ನು ಗುರುತಿಸಿಕೊಂಡ ದಾಸ ಮಹಿಳೆಯರ ಸಂಖ್ಯೆ 800 ನ್ನೂ ಮೀರಿದೆ.ಇದಕ್ಕೆ ಸಂಬಂಧ ಪಟ್ಟ ವಿಷಯ ಗಳನ್ನು ಮಹಿಳಾ ಹರಿದಾಸ ದರ್ಪಣ ಎಂಬ ಇತ್ತೀಚಿನ ಕೃತಿಯಲ್ಲಿದೆ.

ಹಾಗಾದರೆ ಈ ಆಧುನಿಕ ಯುಗದಲ್ಲಿ ಈ ಪರಂಪರೆ ಮುಂದು ವರೆದಿಲ್ಲವೇ ಅಂತ ಅಂದ್ರೆ. ಖಂಡಿತವಾಗಿಯೂ ಈ ದಾಸ ಪರಂಪರೆ ಮಹಿಳೆಯರಲ್ಲಿ ಈಗಲೂ ಮುಂದುವರೆದು ಕೊಂಡು ಬಂದಿದೆ. ಇದಕ್ಕೆ ಉದಾಹರಣೆಯೆಂದರೆ ಭಾರತೀ ಬಾಯಿ ಹಾವನೂರುರವರು.

**6. ಭಾರತೀಯ ಹಾವನೂರು :** ಇತ್ತೀಚಿನವರಾದ ಇವರು ಪ್ರಸಿದ್ಧ ವಿದ್ವಾಂಸರಾಗಿದ್ದ ಡಾ.ಶ್ರೀನಿವಾಸ ಹಾವನೂರರ ಪತ್ನಿ ಸ್ವತಃ ಇವರೂ ಪ್ರತಿಭಾವಂತರಾಗಿದ್ದರು. ಉತ್ತಮ ಶಿಕ್ಷಣ ಪಡೆದು ಹೋಮಿ ಯೋಪತಿ ವೈದ್ಯೆಯಾಗಿದ್ದ ಇವರು ದಾಸ ಸಾಹಿತ್ಯದಲ್ಲೂ ಆಸಕ್ತಿ ತೋರಿ, ಜಾಲೀಹಾಳ ಶ್ರೀನಿವಾಸಾಚಾರ್ಯರಿಂದ ಭಾರತೀಶನೊಡೆಯ ಎಂಬ ಅಂಕಿತ ಪಡೆದಿದ್ದರು. ಇವರೂ ಸಹ ರಾಯರ ಮೇಲೆ ಬರೆದಿರುವ ಒಂದು ಕೃತಿ ದೊರಕಿದೆ.

ಪ್ರಹ್ಲಾದ ವ್ಯಾಸ ಮನೆಗೆ ರಾಘವೇಂದ್ರ ಬಂದನಮ್ಮಾ।
ಆಹ್ಲಾದ ಖಾಸ ನಮಗೆ ರಘುಮಂತ್ರವಿತ್ತನಮ್ಮಾ॥ಪ॥

ಎಂಬ ಪಲ್ಲವಿಯಿಂದ ಆರಂಭ ಆಗತ್ತೆ. ರಾಯರ ಮಹಿಮೆಯನ್ನು ಆರು ಚರಣದಲ್ಲಿ ಸೊಗಸಾಗಿ ವರ್ಣಿಸಿದ್ದಾರೆ.

**ಉಪಸಂಹಾರ :** ಹೀಗೆ ಮಹಿಳೆಯರು ಸ್ವಂತ ಕೃತಿಗಳನ್ನು ಆತ್ಮ ತೃಪ್ತಿಗಾಗಿ ಭಕ್ತಿಯನ್ನು ಅಭಿವ್ಯಕ್ತಿ ಮಾಡುತ್ತಿರುವರು.ಮಹಿಳಾ ಹರಿ ದಾಸಿಯರು ಈಗಲೂ ಸಾಕಷ್ಟು ಮಂದಿ ಇದ್ದಾರೆ. ತಮ್ಮನ್ನು ಯಾರಾದರೂ ಗುರುತಿಸಲಿ ಎಂಬ ಯಾವ ನಿರೀಕ್ಷೆಯಿಲ್ಲದೇ ನಿರ್ಲಿಪ್ತವಾಗಿ ಭಕ್ತಿ ಮಾರ್ಗ ದಲ್ಲಿ ಮುನ್ನಡೆಯುತ್ತಿರುವ ಮಹಿಳೆಯರಿಂದ ಮಹಿಳಾ ದಾಸಸಾಹಿತ್ಯ ಬೆಳೆಯುತ್ತಲೇ ಇದೆ.



# ಶ್ರೀನಿವಾಸ ಚತುರ್ವೇದ ಹವನಮ್

ಯಜ್ಞ ಅಥವಾ ಯಾಗವು ಒಂದು ವಿಶಿಷ್ಟವಾದ ಹಿಂದೂ ಸಂಪ್ರದಾಯವಾಗಿದೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಈ ಯಜ್ಞದ ಆಚರಣೆಯನ್ನು ನಡೆಸಲಾಗುತ್ತಿದೆ. ಯಜ್ಞವು ಆಯಾ ದೇವತೆಗಳನ್ನು ಸಮಾಧಾನ ಪಡಿಸಲು ಕೆಲವು ವಸ್ತುಗಳನ್ನು ಬೆಂಕಿಯಲ್ಲಿ ಸುಡುವುದು. ಈ ಯಜ್ಞವನ್ನು ಯಾಗ, ಕ್ರತು ಮತ್ತು ಹವನಂ ಎಂದೂ ಕರೆಯುತ್ತಾರೆ. ಈ ಯಜ್ಞಕ್ಕೆ ಸಂಬಂಧಿಸಿದ ಅನೇಕ ನಿಯಮಗಳು ಮತ್ತು ಸಂಪ್ರದಾಯಗಳಿವೆ. ನಮ್ಮ ಪೂರ್ವಜರು ಈ ಯಜ್ಞಗಳನ್ನು ಮಾಡುವುದರ ಹಿಂದೆ ಹಲವು ವೈಜ್ಞಾನಿಕ ಕಾರಣಗಳಿವೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನರು ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಮತ್ತು ಮನಸ್ಸಿನ ಶಾಂತಿಗಾಗಿ ಅನೇಕ ಸ್ಥಳಗಳಿಗೆ ಅಲೆದಾಡುತ್ತಿದ್ದಾರೆ. ಅದಾಗ್ಯೂ, ಆರೋಗ್ಯಕರ ಆಹಾರ, ಯೋಗ, ದೈಹಿಕ ಚಟುವಟಿಕೆ ಮತ್ತು ಆರೋಗ್ಯಕರ ಜೀವನಶೈಲಿಯಂತಹ ಅನೇಕ ವಿಷಯಗಳು ಆರೋಗ್ಯಕರ ಜೀವನಕ್ಕೆ ಬಹಳ ಸಹಾಯಕವಾಗಿವೆ. ಆದರೆ ಇನ್ನೊಂದು ಆಯ್ಕೆ ಯಾಗ. ಈ ಯಾಗವನ್ನು ಮಾಡುವಾಗ ಮಂತ್ರಗಳನ್ನು ಪಠಿಸುವುದರಿಂದ ಎಲ್ಲಾ ಒಳ್ಳೆಯದನ್ನು ಮಾಡುತ್ತದೆ.

ಲೋಕಕಲ್ಯಾಣಕ್ಕಾಗಿ ತಿರುಪತಿಯಲ್ಲಿ ತಿ.ತಿ.ದೇ., 29- 06-2023 ರಿಂದ 05-07-2023 ರ ವರೆಗೆ ಶ್ರೀನಿವಾಸ ಚತುರ್ವೇದ ಹವನವು ಆಡಳಿತ ಭವನದ ಮೈದಾನದಲ್ಲಿ ಶಾಸ್ತ್ರ ಮತ್ತು ವೇದಮಂತ್ರಗಳಿಂದ ವೈಭವವಾಗಿ ನಡೆಯಿತು. ತಿ.ತಿ.ದೇ., ಶ್ರೀ ವೆಂಕಟೇಶ್ವರ ಉನ್ನತ ವೇದಾಧ್ಯಯನ ಸಂಸ್ಥೆ ಮತ್ತು ಹಿಂದೂ ಧರ್ಮದಾಯ ಸಂಸ್ಥೆಗಳು ಜಂಟಿಯಾಗಿ ಆಯೋಜಿಸಿವೆ. ಈ ಕಾರ್ಯಕ್ರಮದ ಸಂದರ್ಭದಲ್ಲಿ 32 ಮಂದಿ ಋತ್ವಿಕರು ನಾಲ್ಕು ವೇದಗಳ ಮಂತ್ರಗಳೊಂದಿಗೆ ಕಲಶ ಸ್ಥಾಪನ,ಕಲಶ ಆವಾಹನ,ಯಜಮಾನಿ ಸಂಕಲ್ಪ, ಯಜಮಾನಿ ಪೂಜೆ, ಭಕ್ತ ಸಂಕಲ್ಪ ಮತ್ತು ಅಗ್ನಿ ಪ್ರತಿಷ್ಠಾ ಕಾರ್ಯಕ್ರಮಗಳನ್ನು ನಡೆಸಿದರು.

ಈ ಹವನದಲ್ಲಿ ಸೃಷ್ಟಿಯಲ್ಲಿರುವ ಎಲ್ಲಾ ಜೀವಿಗಳು ಆರೋಗ್ಯ ಮತ್ತು ಸಂತೋಷದಿಂದ ಇರಲು ಭಗವಂತನನ್ನು ಪ್ರಾರ್ಥಿಸುತ್ತಾ, ನಾಲ್ಕು ವೇದಗಳಲ್ಲಿನ ಮಂತ್ರಗಳನ್ನು ಪಠಿಸಲಾಯಿತು. ಈ ವಿಧವಾಗಿ ದೇವತೆಗಳಿಗೆ ನೈವೇದ್ಯವನ್ನು ನೀಡಿದರೆ ಫಲ ಪ್ರಾಪ್ತಿಯಾಗುತ್ತದೆ.

ಸಾಕ್ಷಾತ್ತು ಬ್ರಹ್ಮನಿಂದ ಸೃಷ್ಟಿಸಲಾದ ವೇದ ಹವನದಿಂದ ಮಾನವರು ಧರ್ಮಮಾರ್ಗದಲ್ಲಿ ನಡೆಯಲು ಇದು ಮಾರ್ಗದರ್ಶಕವಾಗುತ್ತದೆ. ಭಗವಂತನು ಸೃಷ್ಟಿಸಿದ ವೇದಗಳು ಕೇವಲ ಕೇಳಲ್ಪಟ್ಟವು ಮತ್ತು ನಂತರ ಗುರುಶಿಷ್ಯ ಪರಂಪರೆಯಿಂದ ಅದು ವ್ಯಾಪ್ತಿಯಾಯಿತೆಂದು ಆಧ್ಯಾತ್ಮಿಕರ ಮಾತು. ಲಿಂಗ ಪುರಾಣ, ಕಾಶಿಪುರಾಣ, ವರಾಹಪುರಾಣದಲ್ಲಿಯೂ ಲೋಕಕಲ್ಯಾಣಕ್ಕಾಗಿ ಇಂತಹ ತ್ಯಾಗಗಳ ಉಲ್ಲೇಖವಿದೆ.ಇಂತಹ ಯಾಗಗಳನ್ನು ನಿರ್ವಹಿಸಬೇಕೆಂದು ತಿಳಿಸುತ್ತದೆ. ಈ ಹವನವು ದೇಶ ಪ್ರಜೆಗಳ ಶಾಂತಿ, ಶ್ರದ್ಧೆ, ಬುದ್ಧಿವಂತಿಕೆ ವೈಭವವನ್ನು ತರುತ್ತದೆ.

ತಿ.ತಿ.ದೇ.,ಯವರ ನೇತೃತ್ವದಲ್ಲಿ ಎಷ್ಟೋ ಯಾಗಗಳನ್ನು ನಿರ್ವಹಿಸಲಾಗಿದೆ. ಅದರಲ್ಲಿ ಶ್ರೀನಿವಾಸ ಚತುರ್ವೇದ ಹವನವನ್ನು ನಿರ್ವಹಿಸಲಾಗಿದೆ.ಈ ಯಾಗಕ್ಕೆ ಎಲ್ಲೆಲ್ಲಿಂದಲೂ ಭಕ್ತರು ಬಂದು ಸ್ವಾಮಿಯವರ ಕೃಪೆಗೆ ಪಾತ್ರರಾದರು.

**ಲೋಕಾಃ ಸಮಸ್ತಾ ಸುಖಿನೋ ಭವಂತು**

**ಶ್ರೀನಿವಾಸಾರ್ಪಣ ಮಸ್ತು**



ತಿ.ತಿ.ದೇ., ಆಡಳಿತ ಮಂಡಳಿಯ ಪ್ರಾಂಗಣದ ಮೈದಾನ(ತಿರುಪತಿ)ದಲ್ಲಿ 29-06-2023 ರಿಂದ 05-07-2023 ರ ವರೆಗೆ ನಡೆದ ಶ್ರೀನಿವಾಸ ಚತುರ್ವೇದ ಹವನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ದಂಪತಿಗಳು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್.ಭಾರ್ಗವಿ, ಐ.ಎ.ಎಸ್., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಹಾಗೂ ವೇದಪಂಡಿತರು, ಅರ್ಚಕರು ಮತ್ತು ಭಕ್ತರು ಪಾಲ್ಗೊಂಡರು.













**ತಿ.ತಿ.ದೇ., ಆಡಳಿತ ಮಂಡಳಿಯ ಪ್ರಾಂಗಣದ ಮೈದಾನದಲ್ಲಿ ನಡೆದ ಶ್ರೀ ವೆಂಕಟೇಶ್ವರ ಉನ್ನತ ವೇದಾಧ್ಯಯನ ಸಂಸ್ಥೆ - ಹಿಂದೂ ಧರ್ಮಪ್ರಚಾರ ಪರಿಷತ್ ಅವರು ನಿರ್ವಹಿಸಿದ ಶ್ರೀನಿವಾಸ ಚತುರ್ವೇದ ಹವನ ಕಾರ್ಯಕ್ರಮದ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳು, ಆಧ್ಯಾತ್ಮಿಕ ಪ್ರವಚನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿರುವ ಭಕ್ತರು ತಿ.ತಿ.ದೇ., ಸಿಬ್ಬಂದಿಗಳು, ಹಾಗೂ ಇತರ ಉನ್ನತ ಅಧಿಕಾರಿಗಳು.**
















ತಿರುಮಲೆ ಸ್ವಾಮಿಯವರನ್ನು 22-06-2023 ದರ್ಶಿಸಿದ ನ್ಯಾಯಸ್ಥಾನದ ನ್ಯಾಯಮೂರ್ತಿ ಶ್ರೀ.ವಿ.ರಾಮಸುಬ್ರಮಣಿಯನ್ ದಂಪತಿಗಳು. ಇವರಿಗೆ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷಕರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಚಿತ್ರಪಟ ಮತ್ತು ತೀರ್ಥಪ್ರಸಾದಗಳನ್ನು ನೀಡಿದರು.




ನವೀಮುಂಬೈನಲ್ಲಿ 07-06-2023 ರಂದು ತಿರುಮಲೆ ಶ್ರೀ ಬಾಲಾಜಿ ಆಲಯದ ನಿರ್ಮಾಣಕ್ಕಾಗಿ ನಡೆದ ಭೂಮಿಪೂಜೆ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮಹಾರಾಷ್ಟ್ರ ಮುಖ್ಯಮಂತ್ರಿ ಶ್ರೀ ಏಕ್‌ನಾಥ್ ಶಂಭಾಜಿ ಷಿಂಡ್, ಉಪಮುಖ್ಯ ಮಂತ್ರಿ ಶ್ರೀ ದೇವೇಂದರ್ ಫಡ್ನವೀಸ್, ರೇಮಂಡ್ಸ್ ಗ್ರೂಪ್ ಸಿ.ಎಂ.ಡಿ. ಶ್ರೀ ಗೌತಮ್ ಹರಿಸಿಂಘಾನಿಯಾ, ತಿ.ತಿ.ದೇ., ಪಾಲಕಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ,ಐ.ಡಿ.ಇ.ಎಸ್. ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡರು




ತಿರುಮಲೆ ಘಾಟ್ ರಸ್ತೆಯ ಏಳನೇ ಮೈಲಿನ ಬಳಿಯಿರುವ ಶ್ರೀ ಪ್ರಸನ್ನಾಂಜನೇಯ ಸ್ವಾಮಿ ವಿಗ್ರಹದ ಬಳಿ 14-06-2023 ರಂದು ರಸ್ತೆ ಅಪಘಾತಗಳ ನಿವಾರಣೆಗೆ ನಡೆಸಿದ ಮಹಾ ಶಾಂತಿ ಹೋಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ. ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್. ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡರು.




ಶ್ರೀ ವೆಂಕಟೇಶ್ವರ ವೈದ್ಯ ವಿಜ್ಞಾನ ಸಂಸ್ಥೆ (ಸ್ವಿಮ್ಸ್) ನಿರ್ದೇಶಕರಾಗಿ ಮತ್ತು ಉಪಕುಲಪತಿಯಾಗಿ 30-06-2023 ರಂದು ಉಸ್ತುವಾರಿ ಪಡೆದ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ, ಐ.ಎ.ಎಸ್.,ರವರು

# ನಿತ್ಯ ಹಬ್ಬಗಳ ತೋರಣ ಶ್ರಾವಣ ಮಾಸ



- ಪ್ರತ್ಯಗ್ರ

ಆಷಾಢ ಮಾಸ ಕಳೆದು ಬರುವ ಸರ್ವ ಹಬ್ಬಗಳ ಸಮನ್ವಯ ಸಂಯೋಗ ಮಾಸ ಶ್ರಾವಣ ಮಾಸ. ಎಲ್ಲ ಹಿಂದೂ ಹಬ್ಬಗಳು ಆಚರಿಸಲ್ಪಡುವುದು ಈ ಶ್ರಾವಣ ಮಾಸದಲ್ಲಿಯೇ ಎಷ್ಟೊಂದು ಹಬ್ಬಗಳು ಬೇರೆ ಯಾವ ಮಾಸದಲ್ಲಿಯೂ ಸಹ ಶ್ರಾವಣದ ಸಂಭ್ರಮ ಮತ್ತು ಇಷ್ಟೊಂದು ಹಬ್ಬಗಳ ಆಚರಣೆ ಇರುವುದಿಲ್ಲ. ಮಳೆಯಲ್ಲಿ ಭೂಮಿ ಹಸಿರಾಗಿ ನಳನಳಿಸುವ ಹೊತ್ತಿನಲ್ಲಿ ಹಬ್ಬದ ಹೆಸರಿನಲ್ಲಿ ಸಡಗರವನ್ನು ಮೈ - ಮನಸ್ಸಿನಲ್ಲಿ ತುಂಬಿಕೊಳ್ಳಲು ಕಾರಣವಾಗುವ ಮಾಸ ಇದು.ಎಡಬಿಡದೇ ಸುರಿಯುವ ಮಳೆಯ ನಡುವೆ ಬರುವ ಶ್ರಾವಣ ಮಾಸವನ್ನು ಹಿಂದೂ ಪಂಚಾಂಗದಲ್ಲಿ ಅತ್ಯಂತ ಮಹತ್ವ ಹಾಗೂ ದೈವಿಕ ಮಾಸ ಎಂದೇ ಪರಿಗಣಿಸಲಾಗಿದೆ.

**ಶ್ರಾವಣ ಎಂದರೆ...**

ಶ್ರವ ಎಂದರೆ ಸುರಿಸು, ಶ್ರಾವಕವಾಗಿ 27 ನಕ್ಷತ್ರಗಳು ಒಂದೇ ರೇಖೆಯಲ್ಲಿ ಬಂದು ಮಂಗಳಕರ ಫಲಗಳನ್ನು ಗರೆಯುವ ಮೂಲಕ ಶ್ರಾವಣವಾಗಿ ರೂಪಾಂತರ ಹೊಂದಿರಬಹುದು ಅಥವಾ ಶ್ರವಣ ಅಂದರೆ ಆಲಿಸುವುದು. ಶ್ರವಣ ಮಾಡಿಸುವ ಮಾಸವೇ ಶ್ರಾವಣ.ತತ್ತ್ವಪದ ಲಕ್ಷಣಗಳನ್ನು ಶೋಧಿಸಿದಾಗ ಅಶುದ್ಧ ಬುದ್ಧಿಯು ಶುದ್ಧವಾದ ನಂತರ ಗುರುಮುಖದಿಂದ ಉಪನಿಷತ್ ವಾಕ್ಯಗಳನ್ನು ಶ್ರವಣ ಮಾಡುವುದರಿಂದ ಅಪರೋಕ್ಷ ಜ್ಞಾನವಾಗುವುದು. ವರಕವಿ ಬೇಂದ್ರೆಯವರು ಶ್ರಾವಣ ಬಂತು ಕಾಡಿಗೆ ಬಂತು ನಾಡಿಗೆ ಬಂತು ಬೀಡಿಗೆ ಶ್ರಾವಣಾ ಬಂತು ಕಡಲಿಗೆ ಬಂತು ಶ್ರಾವಣಾ ಎಂದು ಹಾಡಿ ಹೊಗಳಿದ್ದಾರೆ.

**ನಾಗ ಚತುರ್ಥಿ :**

ಪುರಾಣ ಕಾವ್ಯ ಮಹಾಕಾವ್ಯಗಳಲ್ಲಿ ನಾಗದೇವರಿಗೆ ಸಂಬಂಧಿಸಿದ ಹಲವಾರು ಉಲ್ಲೇಖಗಳಿವೆ. ಜನಮೇಜಯ ಮಹಾರಾಜನು ತಾನು ಮಾಡುತ್ತಿದ್ದ ಸರ್ಪಯಜ್ಞವನ್ನು ನಿಲ್ಲಿಸಿ ಮಹಾಭಾರತವನ್ನು ಕೇಳಲು ಪ್ರಾರಂಭಿಸಿದುದು ಈ ಶ್ರಾವಣ ಮಾಸದ ಶುದ್ಧ ಪಂಚಮಿಯ ದಿನ.ಇಂಥ ದಿನವನ್ನು ನಾಗಪಂಚಮಿ ಎಂದು ನಾಗ ಮೂರ್ತಿಗೆ/ಹುತ್ತಕ್ಕೆ ಹಾಲೆರೆಯುವ ಮೂಲಕ ನಾಗ ಪಂಚಮಿಯನ್ನು ಈ ಶ್ರಾವಣ ಮಾಸದಲ್ಲಿ ಆಚರಿಸುವರು.

**ವರಮಹಾಲಕ್ಷ್ಮೀ ವ್ರತ / ಪೂಜೆ :**

ವರಗಳನ್ನು ಕೊಡುವ ಲಕ್ಷ್ಮೀ ದೇವಿಯ ವ್ರತ ಇದು. ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಹೆಚ್ಚಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ವಿಷ್ಣುವಿನ ಪತ್ನಿ ಲಕ್ಷ್ಮೀದೇವಿಗೆ ಪೂಜೆ ಸಲ್ಲಿಸಿ ಆರೋಗ್ಯ,ಸಂಪತ್ತು,ಸಂತಾನ ಕರುಣಿಸಿ ದೀರ್ಘಸುಮಂಗಲಿಯಾಗಿ ಬಾಳುವಂತೆ ಹರಸು ಎಂದು ಲಕ್ಷ್ಮೀಯಲ್ಲಿ ಬೇಡುತ್ತಾರೆ. ಮದುವೆಯಾದ ಹೆಣ್ಣುಮಕ್ಕಳು ವಿಶೇಷವಾಗಿ ಈ ಪೂಜೆಯನ್ನು ಕೈಗೊಳ್ಳುತ್ತಾರೆ.





## ಶ್ರಾವಣ ಶುಕ್ರವಾರ :

ಪ್ರತಿ ಶುಕ್ರವಾರ ಶುಕ್ರಗೌರಿ ವ್ರತವನ್ನು ಕೈಗೊಳ್ಳುವುದರಿಂದ ಸಂತಾನಪ್ರಾಪ್ತಿ ಹಾಗೂ ದೀರ್ಘಾಯುಷ್ಯನಾದ ಮಕ್ಕಳನ್ನು ಪಡೆದ ಕಥೆಗಳು ಈ ಪೂಜೆಯ ಕಥಾಶ್ರವಣ ಮಾಡುವುದರಿಂದ ತಿಳಿದು ಬರುತ್ತದೆ.

## ಮಂಗಳ ಗೌರಿ ವ್ರತ :

ಶ್ರಾವಣ ಮಾಸದ ಮೊದಲ ಮಂಗಳವಾರದ ಪುಣ್ಯ ದಿನದಿಂದ ನಾಲ್ಕು ಮಂಗಳವಾರ ಮಂಗಳಗೌರಿ ವ್ರತವನ್ನು ಮಾಡುತ್ತಾರೆ. ಹೊಸದಾಗಿ ಮದುವೆ ಆಗಿರುವ ಹೆಣ್ಣು ಮಕ್ಕಳು ತವರು ಮನೆಗೆ ಬಂದು ಶ್ರದ್ಧೆ ಮತ್ತು ಭಕ್ತಿಯಿಂದ ಮಂಗಳಗೌರಿ ವ್ರತವನ್ನು ಮಾಡುವ ಮೂಲಕ ಮಾಂಗಲ್ಯಭಾಗ್ಯ,ಸಂಸಾರದ ಕ್ಷೇಮ, ಪತಿಯ ಆಯುಸ್ಸು, ಆರೋಗ್ಯ, ಐಶ್ವರ್ಯ, ಕೀರ್ತಿಯು ವೃದ್ಧಿಸಲೆಂದು ಸಂಕಲ್ಪದಿಂದ ಈ ವ್ರತ ಮಾಡಿ ಪ್ರತಿವಾರವೂ ಸಹ ಮುತ್ತೈದೆಯರಿಗೆ ಬಾಗಿನ ಕೊಡುತ್ತಾರೆ. ಕೊನೆಯ ಮಂಗಳವಾರ ವ್ರತ ಮುಗಿದ ಮೇಲೆ ಮುತ್ತೈದೆಯರಿಗೆ ಬಾಗಿನ ಮತ್ತು ದಕ್ಷಿಣೆ ಕೊಡುವ ಮೂಲಕ ಆಚರಿಸುತ್ತಾರೆ.

## ಉಪಾಕರ್ಮ :

ಶ್ರಾವಣ ಮಾಸದ ಶ್ರವಣ ನಕ್ಷತ್ರದಂದು ಉಪಾಕರ್ಮ ಆಚರಿಸುವರು. ಇದನ್ನು ಜನಿವಾರದ ಹಬ್ಬ ಎಂದೂ ಕರೆಯುವರು.

## ನೂಲು ಹುಣ್ಣಿಮೆ / ರಕ್ಷಾಬಂಧನ :

ಶ್ರಾವಣ ಮಾಸದ ಹುಣ್ಣಿಮೆಗೆ ನೂಲು ಹುಣ್ಣಿಮೆ ಎಂದು ಹೆಸರು. ಈ ಪೌರ್ಣಿಮೆಯ ದಿನ ಅಥವಾ ಅದರ ಹಿಂದಿನ ಶುಕ್ರವಾರ ವರಮಹಾಲಕ್ಷ್ಮೀ ವ್ರತ ಬರುವುದು. ಶ್ರಾವಣ ಮಾಸದ ಹುಣ್ಣಿಮೆಯ ದಿನ ಆಚರಿಸಲಾಗುವ ಈ ಹಬ್ಬವನ್ನು ರಕ್ಷಾಬಂಧನ ರಕ್ಷಾ ಪೂರ್ಣಿಮೆ ನೂಲು ಹುಣ್ಣಿಮೆ ಎಂದೆಲ್ಲಾ ಕರೆಯುವರು, ಸಹೋದರ ಸಹೋದರಿಯರು ತಮ್ಮ ಮಾನ ಪ್ರಾಣಗಳನ್ನು ಸದಾ ರಕ್ಷಿಸಿರೆಂದು ಮುಂಗೈಗೆ ರೇಷ್ಮೆಯ ದಾರದ ಎಳೆಗಳನ್ನು ಕಟ್ಟುತ್ತಾರೆ.



## ಶ್ರೀ ವೇಂಕಟೇಶ್ವರ ಮ್ಯೂಜಿಯಂ

ಪ್ರಪಂಚದಲ್ಲೇ ಪ್ರಾಮುಖ್ಯತೆ ಪಡೆದಿರುವ ತಿರುಮಲೆಯ ಚಾರಿತ್ರಿಕ ವೈಭವವನ್ನು ಎಲ್ಲೆಡೆ ಪಸರಿಸುತ್ತಿರುವ ದಿವ್ಯ ವಿಜ್ಞಾನ ಭಾಂಡಾಗಾರ ತಿರುಮಲೆಯಲ್ಲಿರುವ ಶ್ರೀವೇಂಕಟೇಶ್ವರ ಮ್ಯೂಜಿಯಂ. ಹೆಚ್ಚೂ ಕಡಿಮೆ ಸಾವಿರ ಚದರ ಅಡಿಗಳ ವಿಶಾಲವಾದ ಪ್ರಾಂಗಣದಲ್ಲಿ 1997 ರಲ್ಲಿ ಇದನ್ನು ನಿರ್ಮಿಸಿದರು. ಈ ಪ್ರದರ್ಶನ ಶಾಲೆಯಲ್ಲಿ 16 ನೆಯ ಶತಮಾನದ ಅನ್ನಮಯ್ಯ ರಚಿಸಿದ ಕೃತಿಗಳು ತಾಮ್ರದ ರೇಕುಗಳು, ಚಿತ್ರ ಲೇಖನಗಳು, ತಾಮ್ರದ ವಿಗ್ರಹಗಳು, ಮರದ ವಿಗ್ರಹಗಳು, ಕಂಚಿನ ವಿಗ್ರಹಗಳು, ಅಪುರೂಪವಾದ ನಾಣ್ಯಗಳು ಇನ್ನಿತರ ಗ್ಯಾಲರಿಗಳಿವೆ. ತಿರುಮಲೆಯ ಶ್ರೀನಿವಾಸನ 5 ಸಾವಿರ ವರ್ಷಗಳ ಚಾರಿತ್ರಾತ್ಮಕ ಸುದೀರ್ಘವಾದ ವೈಭವವನ್ನು ಇಲ್ಲಿ ತಿಳಿಯಬಹುದು.

# ಉಪಾಕರ್ಮದ ಮಹತ್ವ



- ಓಂ ಪ್ರಕಾಶ್‌ಭಟ್
99640 25922

ಚಟುವಟಿಕೆಗಳಿಂದ ಶಕ್ತಿ ಹ್ರಾಸವಾಗುವುದು ಜಗದ ನಿಯಮ. ಅದೇ ರೀತಿ ವೇದ ಮಂತ್ರಗಳು ಅನುಷ್ಠಾನ ಮಾಡುವವನಲ್ಲಿ ವೀರ್ಯವನ್ನು ಕಳೆದುಕೊಳ್ಳುತ್ತವೆ. ಪಾಣಿನೀಯ ಶಿಕ್ಷಾವು ಅದನ್ನು ಪಟ್ಟಿ ಮಾಡಿದೆ. ಗೀತೀ, ಶೀಘ್ರೀ ಶಿರಃ ಕಂಪೀ, ಲಿಖಿತ ಪಾಠಕ, ಅನರ್ಥಜ್ಞ ಹಾಗೂ ಅಲ್ಪ ಕಂಠತ್ವದಿಂದಾಗಿ ವೇದಗಳು ಉಚ್ಚಾರಣಾದೋಷಗಳಿಂದ ಅಶುದ್ಧವಾಗಿ ನಿರ್ವೀರ್ಯವಾಗುತ್ತದೆ. ಈ ಎಲ್ಲ ದೋಷಗಳ ಶುದ್ಧಿಯು "ಉಪಾಕರ್ಮ" ರೂಪದ ವಿಶೇಷ ಸಂಸ್ಕಾರದಿಂದ ಬರುತ್ತದೆ.

ಪ್ರತ್ಯಬ್ಧಂ ಯದುಪಾಕರ್ಮ ಸೋತ್ಸರ್ಗಂ ವಿಧಿವದ್‌ದ್ವಿಜೈಃ
ಕ್ರಿಯತೇ ಛಂದಸಾಂ ತೇನ ಪುನರಾಪ್ಯಾಯನಂ ಭವೇತ್।

ಇದಕ್ಕಾಗಿ "ಉಪಾಕರ್ಮ"ವನ್ನು ವಿಧಿವತ್ತಾಗಿ ಸಕಾಲದಲ್ಲಿ ಆಚರಿಸಿ ವೇದಮಂತ್ರಗಳನ್ನು (ನಮಗೆ ಸಂಬಂಧಪಟ್ಟಂತೆ) ದೋಷಗಳಿಂದ ಮುಕ್ತಿಗೊಳಿಸಿ ಶಕ್ತಿಯುತವನ್ನಾಗಿ ಮಾಡಿ ಮಂತ್ರಗಳಿಂದ ಮಾಡುವ ಕರ್ಮಗಳು ಸಿದ್ಧಿಗೊಳ್ಳುವಂತೆ ಮಾಡಬೇಕು. ಈ ಆಚರಣೆಗೆ ಚತುರ್ವೇದಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ದಿನಗಳಿವೆ. ಮುಖ್ಯವಾಗಿ ಋಗ್ವೇದಿಗಳು (ಋಗ್ವೇದವನ್ನು ತಮ್ಮ ಶಾಖೆಯನ್ನಾಗಿ ಇಟ್ಟುಕೊಂಡ ವರ್ಗ) ಶ್ರಾವಣ ಶುಕ್ಲ ಪಕ್ಷದಲ್ಲಿ ಶ್ರವಣ ನಕ್ಷತ್ರವಿರುವ ದಿನದಂದು ಮಾಡುತ್ತಾರೆ.

ಮೂಲತಃ ಬ್ರಹ್ಮೋಪದೇಶವೆಂದರೆ ಗಾಯತ್ರೀ ಉಪದೇಶ. ಆ ದಿನದಂದು, ತಂದೆಯು ವಟುವಿಗೆ (ತನ್ನ ಮಗನಿಗೆ) ಗಾಯತ್ರೀ ಮಂತ್ರ ದೀಕ್ಷೆಯನ್ನು ನೀಡುತ್ತಾನೆ. ಜೊತೆಗೆ ಅಗ್ನಿ ಉಪಾಸನೆಯನ್ನು ಅಧಿಕೃತವಾಗಿ ಪ್ರಾರಂಭಿಸುತ್ತಾನೆ. ಅದಕ್ಕಾಗಿ 'ಯಜ್ಞೋಪವೀತ' ದ ಧಾರಣೆ ನಡೆಯುತ್ತದೆ. "ಯಜ್ಞ"ಕ್ಕಾಗಿ "ಉಪವೀತ"ಧಾರಣೆ ನಡೆಯುತ್ತದೆ. ವಟುವು ಅಂದಿನಿಂದ ಸಂಧ್ಯಾವಂದನೆ, ಅಗ್ನಿ ಉಪಾಸನೆ ಜೊತೆಗೆ ವೇದ ಕಲಿಕೆಯನ್ನು ಪ್ರಾರಂಭಿಸಬೇಕು.ಈ ಎಲ್ಲ ಕ್ರಿಯಗಳಿಗೆ ಸಂಬಂಧಪಟ್ಟಿದ್ದು "ಉಪಾಕರ್ಮ" ಪ್ರಕ್ರಿಯೆ. ಆದರೆ ಇಂದು ಯಾಂತ್ರಿಕವಾಗಿ ವೈಭವೀಕರಣಗೊಂಡು ನಡೆಯುವ ಉಪನಯನ ಸಂಸ್ಕಾರದಿಂದ ಏನೂ ಆಧ್ಯಾತ್ಮಿಕವಾಗಿ ಪ್ರಯೋಜನವಿಲ್ಲ. ದೈವಿಕ - ಆಧ್ಯಾತ್ಮಿಕ ಮೆರುಗು ಇರಬೇಕು ಆಗಲೇ ಆ ವಟು ಮುಂದೆ "ಉಪಾಕರ್ಮ" ಎಂಬ ವಿಶಿಷ್ಟ ಸಂಸ್ಕಾರದಲ್ಲಿ ಪಾಲ್ಗೊಳ್ಳಬಹುದು.

ಉಪಾಕರ್ಮ ಸಂಸ್ಕಾರದಲ್ಲಿ ಸಾಮಾನ್ಯವಾಗಿ"ಯಜ್ಞೋಪವೀತ" ವನ್ನು ಬದಲಾಯಿಸುತ್ತಾರೆ. ಜೀರ್ಣವಾಗಿರುವ (ಶಕ್ತಿ ಕುಂದಿರುವ ಹಳೆಯ ಉಪವೀತವನ್ನು ಮಂತ್ರಪೂರ್ವಕವಾಗಿ ಬದಲಾಯಿಸಿ ಹೊಸ ಉಪವೀತವನ್ನು ಧರಿಸುತ್ತಾರೆ. ಯಾಕೆ ಬದಲಾಯಿಸುತ್ತಾರೆ. ಹೊಸತನ್ನು ಯಾಕೆ ಧರಿಸುತ್ತಾರೆ ಎಂದು ಚಿಂತಿಸಿದರೆ ಯಜ್ಞದ ಮಹತ್ವ, ವೇದ ಮಂತ್ರ ವೇದ ಉಪಾಸನೆಯ ಮಹತ್ವ ತಿಳಿಯುತ್ತದೆ. ಈ ಕೆಲಸವನ್ನು ನಾವು ನಮ್ಮ ಮಕ್ಕಳಿಗೆ ತಿಳಿ ಹೇಳಬೇಕು.

"ಉಪಾಕರ್ಮ"ದ ಜೊತೆಗೆ ಅಂಟಿಕೊಂಡಿರುವ ಇನ್ನೊಂದು ಆಚರಣೆ "ಉತ್ಸರ್ಜನೆ".ಯಾವುದೇ ಲಾಭದ ಅಪೇಕ್ಷೆಯಿಲ್ಲದೆ ಕರ್ತವ್ಯ ರೂಪದಿಂದ ಜ್ಞಾನಿಗಳು ವೇದಗಳನ್ನು ಅಧ್ಯಯನ ಮಾಡಬೇಕು ಅದರ ಆರಂಭಕ್ಕೂ ಸೂಕ್ತ ಕಾಲವಿದೆ. ಅದರ ಅರ್ಥವನ್ನು ತಿಳಿಯಲು ಪ್ರಯತ್ನಿಸಬೇಕು. ಅದಕ್ಕಾಗಿ ಷಡಂಗ ಸಹಿತವಾಗಿ (ಸಾಧ್ಯವಾದರೆ) ಅಧ್ಯಯನವನ್ನೂ ಮಾಡಬೇಕು. ಮತ್ತೆ ಪುನಃ ವೇದದ ಅಧ್ಯಯನ, ಪುನಃ ಷಡಂಗ ಸಹಿತ ಅರ್ಥಾನುಸಂಧಾನು ಪೂರ್ವಕ ಅಧ್ಯಯನ.ಮಾಘಮಾಸದಲ್ಲಿ ಉರ್ಜನ ಶ್ರಾವಣದಲ್ಲಿ ಉಪಾಕರ್ಮ', ಹೀಗೆ ವೇದ ಮಂತ್ರಗಳ ರಕ್ಷಣೆ, ಅಧ್ಯಯನವೇ ಮುಖ್ಯವಾಗಿ ಉಪಾಕರ್ಮದ ಉದ್ದೇಶ. ಅದರ ಜೊತೆ ಅನಾದಿಕಾಲದಿಂದಲೂ ವೇದಗಳನ್ನು ಸಂರಕ್ಷಿಸಿಕೊಂಡು ಬರುತ್ತಿರುವ ಪ್ರಾಚೀನ ಋಷಿ ಮುನಿಗಳ ಸ್ಮರಣೆಯನ್ನೂ ಉಪಾಕರ್ಮ ಕ್ರಿಯೆಯಲ್ಲಿ ಮಾಡಲಾಗುತ್ತದೆ.

## ಹೇಗೆ ಪೂಜಿಸುವುದು?

ಉಪಾಕರ್ಮಾಣಿ ಚೋತ್ಸರ್ಗೇ ಯಥಾಕಾಲಂ ಸಮೇತ್ಯ ಚ ।
ಋಷೀನ್ ಧರ್ಮಮಯಾನ್ ಕೃತ್ವಾ ಪೂಜಯೇತ್ ತರ್ಪಯೇತ್ ತತಃ।

ಉತ್ಸರ್ಜನ ಉಪಾಕರ್ಮಗಳಲ್ಲಿ ದರ್ಭೆಯಿಂದ ಕೂರ್ಚಗಳನ್ನು ಮಾಡಿ ಅಲ್ಲಿ ಋಷ್ಯಾದಿಗಳನ್ನು ಆವಾಹನೆ ಮಾಡಿ ಅವರಿಗೆ ಧ್ಯಾನ ಆವಾಹನಾದಿ ಷೋಡಶೋಪಚಾರ ಪೂಜೆ ಮಾಡಿ ತರ್ಪಣವನ್ನು ಕೊಟ್ಟು,ಅಗ್ನಿಯಲ್ಲಿ ಆಹುತಿಯನ್ನೂ ಕೊಟ್ಟು ನಾಲ್ಕೂ ವೇದಗಳ ಆರಂಭಮಂತ್ರಗಳಿಂದ ಆಹುತಿ ನೀಡಬೇಕು.

ಇದರಿಂದ ಅಧ್ಯಯನದಲ್ಲಿ ತೊಡಗುವ ವ್ಯಕ್ತಿಗೆ ಋಷಿಗಳ, ಛಂದೋ ಅಭಿಮಾನಿದೇವತೆಗಳ ಅನುಗ್ರಹವೂ ಲಭಿಸುತ್ತದೆ. ಹಾಗಾಗಿ ಈ ವಿಚಾರದಲ್ಲಿ ನಮ್ಮ ಆಚರಣೆ ಅನುಷ್ಠಾನ ಎಲ್ಲಿದೆ ನೋಡಿಕೊಂಡು ಸಾಧ್ಯವಾದಷ್ಟು ಅನುಸಂಧಾನ ಪೂರ್ವಕವಾಗಿ ಆಚರಿಸಲು ಪ್ರಯತ್ನಪಡೋಣ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ. ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

### ಜೀಯರ್ (ಜಿಯ್ಯರ್) ಶಬ್ದದ ಅರ್ಥ :

ಈ ಪದವು (ಸ್ವಾಮಿ ! ಎನ್ನುವ ಅರ್ಥದಲ್ಲಿ) ಪೂಜ್ಯವಾಚಕವು. ಈ ಅರ್ಥವು ಜಿಯರ್‌ಪಡಿ ಶ್ರೀವಚನ ಭೂಷಣದ ವ್ಯಾಖ್ಯಾನದಲ್ಲಿ 'ಮಾರಿನೇರಿನಂಬಿ' ವಿಚಾರದಲ್ಲಿ ಪೆರೆಯನಂಬಿ ಉದ್ದೆಯವರಿಗೆ (ಶ್ರೀರಾಮಾನುಜಾಚಾರ್ಯರಿಗೆ) ಎಂದು ಸ್ಥಳಾವಕಾಶ ಮಾಡಿಕೊಟ್ಟಿದೆ.

ತಿರುಮಲ ತಿರುಪತಿಯಲ್ಲಿ ಶ್ರೀವೇಂಕಟಾಚಲಪತಿ ಶ್ರೀ ಗೋವಿಂದ ರಾಜಸ್ವಾಮಿ ಆಲಯದಲ್ಲಿ ಜರುಗಿದ ಒಂದು ಐತಿಹ್ಯವಿದು.

ಬ್ರಹ್ಮೋತ್ಸವದ ಮೊದಲದಿನ ಪ್ರಾತಃ ಕಾಲದಲ್ಲಿ ಅನುಸಂಧಾನಗಳಾಗದಿರಲು ಕಾರಣವೇನೆಂದರೆ

**ಶ್ರೀ ವೈಖಾನಸ ಶಾಸ್ತ್ರದಲ್ಲಿ ಆನಂದ ಸಂಹಿತೆಯಲ್ಲಿ -**

''ಅವಾಹ್ಯ ಯಾಗಶಾಲಾಯಾಂ ಕಲಶೇ ಪ್ರಥಮೇ ಹನಿ
ಸಾಯಮಾರಾಧ್ಯ ದೇವೇಶ ದೀಕ್ಷಿತೋ ವೇದಪಾರಗೈಃ
ವೇದಾರಂಭಂ ಚರೇದ್ವಿದ್ವಾನ್ ವಿಷ್ಣೋರ್ಯಾಗಾನ್ ತತಶ್ಚರೇತ್''

(ಪ್ರಥಮ ದಿನದಲ್ಲಿ ಯೋಗಶಾಲೆಯಲ್ಲಿ ಕಲಶವನ್ನು ದೇವ ದೇವನ ಆಹ್ವಾನ ಮಾಡಿ ಆರಾಧಿಸಿ ವಿದ್ವಾಂಸರಾದ ದೀಕ್ಷಿತರಾದ ವೇದ ಪಾರಂಗತರಾದ ಅವರಿಂದ ವೇದಾರಂಭವು ಆಗತಕ್ಕದ್ದು, ನಂತರ ಯಾಗವನ್ನು ಅನುಷ್ಠಾನ ಮಾಡತಕ್ಕದ್ದು)

ಹಾಗೆಯೇ ನಿಶ್ಚಯಿಸಿದ ಧ್ವಜಾರೋಣ ಉತ್ಸವದಂದು ತಿರುನಾಳರ ಮೊದಲ ದಿನ ಸಾಯಂಕಾಲದಲ್ಲಿ ಯಾಗಶಾಲೆಯಲ್ಲಿ ಕಲಶದಲ್ಲಿ ದೇವತಾಹಾವಾಹನ ಮಾಡಿ, ಪೂಜೆಯನ್ನು ಮಾಡಿದ ಬಳಿಕ ವೇದ ಪಾರಾಯಣಾರಂಭ ಮಾಡುವುದು ಪ್ರಮಾಣಸಿದ್ಧವಾದುದು. ಆದ್ದರಿಂದ ಅದರ ಸಮಸಮವಾಗಿ ದ್ರಾವಿಡ ವೇದಗಳ ನಂತರವೂ ಸಮಾರಂಭವು ಉಚಿತವಾದದ್ದೆಂದು ರಾತ್ರಿ ಬೀದಿಯಲ್ಲಿ (ಇಯಲ್) ಗೋಷ್ಠಿ ಆರಂಭಿಸುವುದರಿಂದಲೇ ಶ್ರೀ ಭಗವದ್ರಾಮಾನುಜಾಚಾರ್ಯರು ನಿಯಮಗೊಳಿಸಿದರೆಂದು ಹಿರಿಯರವಿವಾದಿಸಿ ವಿಷಯವನ್ನರಸಿದವರು ಸ್ಪಷ್ಟಪಡಿಸಿದರು. ಆದ್ದರಿಂದ ಪ್ರಬಂಧಗಳಲ್ಲಿ ಶ್ರೇಷ್ಠವಾದ 'ತಿರುವಾಯ್‌ಮಾಳಿ'ಯನ್ನು ಮೊದಲುಗೊಂಡು ಇತರ ಪ್ರಬಂಧಗಳನ್ನು ಆರಂಭಿಸಿದೇ 'ಇಯಚ್ಛಾ'ಯನ್ನು ಮೊದಲು ಅನುಸಂಧಾನ ಮಾಡಲು ಕಾರಣವನ್ನು ಶ್ರೀ ಮದ್‌ಭಗವ ದ್ರಾಮಾನುಜರೇ ಸೋಪಾನಯುತವಾಗಿ ನಿಯಮಿಸಿದ್ದಾರೆಂದು 'ಪೆರಿಯವಾಚ್ಛಾಂಬಿಳ್ಳೈ' ಅನುಗ್ರಹಿಸಿರುವ 'ಕಲಿಯನ ರುಳ್‌ಪಾಡು' ರಹಸ್ಯದಲ್ಲಿ ದಾಖಲಿಸಿದರು.

ಸ್ಥಳೀಕರಿಗೆ, ಹಿರಿಯರಿಗೆ, ಜೀಯ್ಯರಿಗೆ, ಶ್ರೀವೈಷ್ಣವರಿಗೆ, ಶ್ರೀವೇಂಕಟಾಚಲಪತಿ ತಿರುಮಲನಂಬಿ ಹೊತ್ತು ತಂದ ಅಭಿಷೇಕ ತೀರ್ಥವನ್ನು ವ್ಯಾಧಿ ಮಾರಕವಾಗಿ ಪಸರಿಸಿದ ಆ ನೀರನ್ನು ಎಲ್ಲರೂ ಸೇವಿಸಿ ಉದ್ದೀಪನಗೊಳ್ಳಿಸ ಬೇಕೆಂದು ಶ್ರೀಅಧ್ಯಯನೋತ್ಸವವು ಮುಗಿವ ಸಮಯದಲ್ಲಿ ಶ್ರೀ ಸ್ವಾಮಿಯವರಿಗೆ, ಶ್ರೀಭಗವದ್ರಾಮಾನುಜಾ ಚಾರ್ಯರು ಆಕಾಶಗಂಗಾತೀರ್ಥ ಮಾರ್ಗವಾಗಿ ವಿಜಯ



ವನ್ನು ಮಾಡಿಸಿ, ಆಕಾಶಗಂಗಾಜಲಧಾರೆಯಿಂದ ತೀರ್ಥವನ್ನು ಎತ್ತು ಕೊಂಡು ತಿರುಮೊಳಿ ಅನುಸಂಧಾನದೊಂದಿಗೆ ಅದರೊಂದಿಗೆ ಶ್ರೀಸ್ವಾಮಿಯವರು, ಶ್ರೀಭಗವದ್ರಾಮಾನುಜರನ್ನು ಬೀದಿಯಲ್ಲಿ ಪ್ರದಕ್ಷಿಣಾ ಕಾರವಾಗಿ ಬಂದಾಗ ಶ್ರೀವೈಷ್ಣವರು ಬೀದಿಯಲ್ಲಿ ತಂತಮ್ಮ ಮನೆಯ ಬಾಗಿಲ ಮುಂದಿರುವ ಸಾವಟಿಗೆಯ ಮೇಲೆ ಪಾದ್ಯ, ಗಂಧ,ಧೂಪ, ಮಂಗಳ ದೀಪ, ತಾಂಬೂಲವನ್ನು ಸಮರ್ಪಿಸಲು, ಹೀಗೆ ಕ್ರಮವಾಗಿ ಗುಡಿಯ ಒಳಗಡೆ ಪಾದಾರ್ಪಣೆ ಮಾಡಿ ಪುರುಷಸೂಕ್ತಾದ್ಯದನು ಸಂಧಾನದೊಂದಿಗೆ ಶ್ರೀ ಸ್ವಾಮಿಯ ಪಾದಗಳಿಗೆ, ಶ್ರೀಶಠಕ್ಕೆ ಅಭಿಷೇಕವನ್ನು ಮಾಡಿಸಿ ಆರತಿ ಮೊದಲಾದ ಮಂಗಳೋಪಚಾರಗಳನ್ನು ಭಗವಂತನಿಗೆ ಸ್ವೀಕರಿಸುವಂತೆ ಮಾಡಿ, ಶ್ರೀರಾಮಾನುಜ ದಶಧರ್ಮಗಳನ್ನು 'ತೀರ್ಥಾದಿ ಗಮನ ಮಾರ್ಗ ಪರಿಷ್ಕರಣ (ತಣ್ಣೀರಮುದು ವಳಿತಿರುತ್ತತ್ತೈ) ಎಂಬ ಹೆಸರು ಪ್ರಸಿದ್ಧಿಯಾಯಿತು. ತಣ್ಣೀರಮುದು =ತಿರುಮಲನಂಬಿ ಆಕಾಶಗಂಗೆಯಿಂದ ಹೊತ್ತು ತಂದ ಅಭಿಷೇಕ ತೀರ್ಥ,ವಳಿತ್ತಿರುತ್ತುಕ್ಕೈ=ಮಾರ್ಗ ಮಧ್ಯದಲ್ಲೇ ನಿಲ್ಲಿಸಿ ಪರಿಷ್ಕರಿಸುವುದು.

''ಪಪಾಜಲಂ ಸಾದರಮಂಬುಜಾಕ್ಷಃ
ಶ್ರೀ ಶೈಲ ಪೂರ್ಣಾಯ ನಮೋಸ್ತು ತಸ್ಮೈ''

(ಪುಂಡರೀಕಾಕ್ಷನು (ಯಾರು ತಂದರೂ) ಜಲವನ್ನೂ ಆದರದಿಂದ ಹೇಗೆ ಪಾನ ಮಾಡಿದನೋ ಅಂತಹ ಶ್ರೀ ಶೈಲ ಪೂರ್ಣರಿಗೆ (ತಿರುಮಲ ನಂಬಿಗೆ ) ನಮಸ್ಕಾರವು)

ಅಂದ ಹಾಗೆ, ಶ್ರೀ ವೇಂಕಟಾಚಲಪತಿ ಆದರಿಸಿ ಅರಗಿಸಿ ಕೊಂಡವ ನಂತೆ

''ಕೃಚ್ಛಾತ್ಪಾಪವಿನಾಶ ಪೂರಿತ ಪಯಃ ಕುಂಭಂ ದಧಾನಂ ಶಿರ
ಸ್ಯಾಯಾಂತಂ ಶಬರಾಕೃತಿಃ ಪಥಿ ಹರಿಃ ಶ್ರೀ ಶೈಲ ಪೂರ್ಣ ಗುರುಂ
ತಾತೇ ತ್ಯರ್ಥಿತವಾನ್'ನ ದತ್ತಮುದಕಂ, ಪೀತಂ ಘಟಾತ್ತತ್ ಶರಾ -
ಘೂತಾದುದ್ಧೃತ ಮಾದರಾತ್ ಪ್ರಮುದಿತಂ ಶ್ರೀನಾಯಕೇನಾ
ಮುನಾ''

''ಭಿನ್ನೇ ಶ್ರೀಶೈಲ ಪೂರ್ಣೇ ವ್ಯಥ ಪಯಸಿ ಹೃತೇ ತದ್ವಿಷಾ
ದಾನ್ನಿಷಾದಾ
ಕಾರ್ಯ ಕಾರುಣ್ಯತ ಸ್ತಂಕರತಲಮವಲಂಬ್ಯಾ ನಯನ್
ಸ್ವೇಷು ಣಾದ್ರಿಂ
ಭಿಂದನ್ ತದ್ರಂಧಜೈಷಾ ಘನತರಖಿನದೀ ವೇಂಕಟೇಶ
ಪ್ರಿಯಾ ತ
ತ್ತೋಯಂ ದೇಯಂ ತ್ವಯಾ ಹರ್ನಿಶಮಿತಿ ಸವದನ್ನಚ್ಯುತೋ
ಭೂದದೃಶ್ಯಃ

''ತಾತೇತಿ ಸಂಬೋಧ್ಯ ಯಮಂಜನಾದ್ರೌ ಅನೀಯಮಾನಾ ಜಲ
ಪೂರ್ಣ ಕುಂಭಾತ್
ಪಷಾ ಜಲಂ ಸಾದರ ಮಂಬುಜಾಕ್ಷಃ ಶ್ರೀ ಶೈಲ ಪೂರ್ಣಾಯ
ನಮೋಸ್ತು ತಸ್ಮೈ''

(ಪಾಪವಿನಾಶಿ ತೀರ್ಥದಿಂದ ನೀರು ತುಂಬಿದ ಜಲಕುಂಭವನ್ನು ತಲೆಯ ಮೇಲಿಟ್ಟುಕೊಂಡು ಪ್ರಯಾಸದಿಂದ ಬರುತ್ತಿರುವ ಶ್ರೀ ಶೈಲ ಪೂರ್ಣಗುರುವನ್ನು ಶಬರಾಕೃತಿ ಧರಿಸಿದ ಶ್ರೀ ಹರಿ ಮಾರ್ಗದಲ್ಲೇ ಸಂದಿಸಿ, ತಾತ, (ತಂದೆ ! ನೀರು ಕೊಡು ) ಎಂದು ಯಾಚಿಸಿದ್ದಾನೆ. ಆದರೂ ಆತನು ತೀರ್ಥವನ್ನು ನೀಡಲಿಲ್ಲ. ಆಗ ಈ ಶ್ರೀರಮಣನು ಬಾಣದಿಂದ ಹೊಡೆದು, ತೂತನ್ನು ಮಾಡಿ ಘಟದಿಂದ ಸೋರಿಸಿ,ಆದರಿಂದ ನೀರನ್ನು ಕುಡಿದು ಆನಂದಿಸಿದ್ದಾನೆ.ಆದಾದ ನಂತರ ನೀರು ಅಪಹರಣಗೊಳ್ಳಲು ಆ ವಿಷಾದದಲ್ಲೇ ಶ್ರೀ ಶೈಲಪೂರ್ಣರು ಖಿನ್ನರಾಗಿ ನಿಷಾದವೇಶದಲ್ಲಿದ್ದ ಶ್ರೀಹರಿಯ ದಯೆಯಿಂದಾಗಿ ಆತನ ಕೈ ಹಿಡಿದು ಕರೆತಂದು ಆತನು ತನ್ನ ಬಾಣದಿಂದ ಬೆಟ್ಟವನ್ನು ಭೇದಿಸಿದನು. ಆ ರಂಧ್ರದಿಂದ ಹುಟ್ಟಿದ ಈ ಆಕಾಶ ಗಂಗಾ ಮಹಾನದಿ ವೇಂಕಟೇಶ್ವರನಿಗೆ ಅತ್ಯಂತ್ಯ ಪ್ರಿಯವಾದುದು. ಈ ತೀರ್ಥವನ್ನು ತೆಗೆದುಕೊಂಡು ಹೋಗಿ ನಿನ್ನ ಸ್ವಾಮಿಗೆ ಕೊಡು ಎಂದು ಹೇಳಿ ಅಚ್ಯುತನು ಅದೃಶ್ಯನಾಗಿದ್ದಾನೆ. ಅಂಜನಾದ್ರಿಯ ಮೇಲೆ ಅಂಬು ಜಾಕ್ಷನು 'ತಾತ' ಎಂದು ಕರೆದು, ಸರೋವರದಿಂದ ಜಲಪೂರ್ಣವಾದ ಕಲಶವನ್ನು ಅದರ ನೀರನ್ನು ಆದರದಿಂದ ಕುಡಿದಿದ್ದಾನೆ. ಇಂತಹ ಶ್ರೀಶೈಲಪೂರ್ಣರಿಗೆ ನಮಸ್ಕಾರವಿರಲಿ.)

ಎಂದು ಸರ್ವರೂ ತಿರುಮಲನಂಬಿ ಪಾದಾರವಿಂದಗಳ ಮೇಲೆ ಬಿದ್ದು ಪ್ರೇಮಾತಿಶಯದಿಂದ ಹೀಗೆ ಶ್ಲೋಕವನ್ನು ಅನುಸಂಧಿಸಿದ್ದಾರೆ.

(ಮುಂದುವರೆಯುತ್ತದೆ)

**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ,ಇತರ ಎಲೆಕ್ಟ್ರಾನಿಕ್ ವಸ್ತು ಗಳನ್ನು ನಿಷೇಧಿಸಲಾಗಿದೆ.ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ.ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**

# ವಾಮನ ಸ್ಮರಣೆಯ ಓಣಂ

- ಡಾ|| ಲೀಲಾ ಬಸವರಾಜು
87628 35104

ಭಾರತೀಯರು ನಾವು ಎಂದೆಂದು ಒಂದೆ
ಭಾವೈಕ್ಯದಲಿ ಕೂಡಿ ನಡೆಯುವೆವು ಮುಂದೆ
ನೂರುಮತ ನಮಗಿರಲಿ ನೂರು ಮಾತಾಗಿರಲಿ

ನಾಡಿನಾ ಜನಮನ ನಾವೆಲ್ಲ ಒಂದೆ. ಇದು ಶ್ರೀಬೆಟ್ಟಗೇರಿ ಕೃಷ್ಣ ಶರ್ಮ ಅವರ ಕನ್ನಡ ಕವಿವಾಣಿ.ಸರ್ವಧರ್ಮ ಸಮನ್ವಯ, ಭಾರತೀಯ ನೆಲದ ವಿಶೇಷ. ನಮ್ಮಭಾರತ. ಇಂದು ಸರ್ವಧರ್ಮಗಳ ಅನೇಕಾನೇಕ ಭಾಷೆಗಳ ನೆಲೆವೀಡಾಗಿದೆ.ಅಂತೆಯೇ ಭಾರತದಲ್ಲಿ ವರ್ಷಪೂರ್ತಿ ವಿಶೇಷ ದಿನಗಳಿದೆ.ಹಬ್ಬ ಹಿರಿದಿನ, ಆರಾಧನೆ, ಜಯಂತ್ಯೋತ್ಸವ ಗಳು.ಜೊತೆಗೆ ಸ್ವಾತಂತ್ರ್ಯೋತವ, ಗಣರಾಜ್ಯೋತ್ಸವ, ವಿಶ್ವಯೋಗದಿನ, ಪರಿಸರದಿನ, ಯೋಧರದಿನ ಇತ್ಯಾದಿ.''ಓಣಂ'' ಕೇರಳ ಪ್ರಾಂತ್ಯದವರು ಪ್ರಧಾನವಾಗಿ ಆಚರಿಸುವ ಸಂವತ್ಸವರದ ಸುಗ್ಗಿಯ ಹಬ್ಬವಾಗಿದೆ. ಸಂಕ್ರಾಂತಿ ಹಬ್ಬದ ಹಾಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡ ಹಬ್ಬವಾಗಿದೆ. ಕೇರಳದ ''ತಿರುವಲ್ಲಾ'' ಎಂಬಲ್ಲಿ, ಹನ್ನೆರಡನೇ ಶತಮಾನದ ದೊಡ್ಡ ದೇವಾಲಯವಿದ್ದು ಅಲ್ಲಿನ ಶಾಸನದಲ್ಲಿ ''ಓಣಂ'' ಹಬ್ಬದ ಉಲ್ಲೇಖವಿದೆ.

''ಓಣಂ'' ಆಚರಣೆಯ ದಿನಾಂಕವು, ಪಂಚಾಂಗವನ್ನು ಆಧರಿಸಿ ಆಗಸ್ಟ್ - ಸೆಪ್ಟೆಂಬರ್ ನಡುವಿನ ದಿನಗಳಲ್ಲಿ, ಮಲೆಯಾಳಂ ಕ್ಯಾಲೆಂಡರ್ ನ ''ಚಿಂಗಂ''ತಿಂಗಳಲ್ಲಿ ಪ್ರಾರಂಭವಾಗಿ ಹತ್ತು ದಿನಗಳವರೆಗೆ ಬಂಧು - ಬಾಂಧವರೊಡಗೂಡಿ ಸಂಭ್ರಮದಿಂದ ಆಚರಿಸಿ ''ತಿರುವೋಣಂ'' ಅಂದು ಸಮಾಪ್ತವಾಗುತ್ತದೆ. ಮೊದಲ ಮತ್ತು ಕಡೆಯ ದಿನ ವಿಶೇಷವಾಗಿದೆ. ಕರ್ನಾಟದಲ್ಲಿ ''ಶರನವರಾತ್ರಿ'' ಹಬ್ಬದಂತೆ ಕೇರಳದ ಎಲ್ಲೆಡೆ, ದೇವಾಲಯಗಳಲ್ಲಿ ಪ್ರಮುಖವಾಗಿ ವಿಷ್ಣು ದೇವಾಲಯಗಳಲ್ಲಿ ವಿಶೇಷ ಪೂಜೆ, ಉತ್ಸವಗಳನ್ನು ನಡೆಸಲಾಗುತ್ತದೆ.ಎಲ್ಲೆಡೆ ಸಗಣಿಯಿಂದ ಸಾರಿಸಿದ ನೆಲದ ಮೇಲೆ ಹೂವಿನ ರಂಗವಲ್ಲಿ.''ಪೂಕಳಂ''ಮನಸ್ಸಿಗೆ ಮುದಕೊಡುವ, ಕಣ್ಣಿಗೆ ಹಬ್ಬವನ್ನುಂಟು ಮಾಡುವ ಬಣ್ಣ ಬಣ್ಣದ ಹೂವಿನಿಂದ, ಹೂಗಳ ಎಸಳಿನಿಂದ, ರಂಗೋಲಿ ಪುಡಿಗಳಿಂದಲೂ ಚಿತ್ತಾರದ ದೊಡ್ಡ ರಂಗೋಲಿ ಬಿಡಿಸುವುದೇ ಚೆಂದ. ''ಪೂಕಳಮ್'' (ಹೂವಿನ ರಂಗೋಲಿ) ಹಾಕುವ ಸಂಪ್ರದಾಯ ''ಅಥಂ'' ದಿನದಂದು ಪ್ರಾರಂಭ ಆಗುವ ಕಾರಣ ಇದನ್ನು ''ಅಥಂಪೂ'' ಎಂದೂ ಕರೆಯ ಲಾಗಿದೆ. ಪ್ರತಿ ಮನೆಯ ಪ್ರವೇಶ ದ್ವಾರದಲ್ಲಿ ಮಹಾಬಲಿ, ವಾಮನರ ಪ್ರತಿಮೆಗಳನ್ನು ಸಾಂಕೇತಿಕವಾಗಿ ಇಟ್ಟು ಪೂಜಿಸಲಾಗುತ್ತದೆ.

''ಪೂಕಳಮ್'' ರಂಗವಲ್ಲಿಯ ಮಧ್ಯದಲ್ಲಿ ಅಲಂಕೃತ ದೀಪ ಸ್ಥಂಭ ವನ್ನು ಇಟ್ಟು, ಹೆಣ್ಣುಮಕ್ಕಳು, ಹೆಂಗಸರೂ ಸಾಂಪ್ರದಾಯಿಕ ಉಡುಗೆ ತೊಟ್ಟು ಸಂಭ್ರಮದಿಂದ ನರ್ತಿಸುವುದನ್ನು ನೋಡುವುದೇ ಆನಂದ. ''ತಿರುವಾಯಿರ ಕಳಿ'' ಎನ್ನುವುದು, ದೀಪದ ಸುತ್ತಲೂ ವೃತ್ತಾಕಾರವಾಗಿ ಮಹಿಳೆಯರು ಮಾಡುವ ವಿಶೇಷ ಸೊಬಗಿನ ನೃತ್ಯ ವೈವಿಧ್ಯಮಯ ಆಚರಣೆ, ಚಟು ವಟಿಕೆ, ದಾನಕೊಡುವುದೇ ವೈಶಿಷ್ಟ್ಯ.

ಓಣಂ ನಂತರ ದಿನ ಅಂದರೆ ಹತ್ತು ದಿನಗಳ ಕಾಲ ರಂಗವಲ್ಲಿಯ ಮಧ್ಯದಲ್ಲಿ ಸ್ಥಾಪಿತವಾದ, ಅಥವಾ ಪ್ರವೇಶದ್ವಾರದಲ್ಲಿ ಬಲೀಂದ್ರ ವಾಮನನ ಸಂಕೇತವಾಗಿ ಸ್ಥಾಪಿಸಿದ್ದ ಮಣ್ಣಿನ ಮೂರ್ತಿಯನ್ನು ಗಣಪನನ್ನು ವಿಸರ್ಜಿಸುವಂತೆಯೇ ನೀರಿನಲ್ಲಿ ವಿಸರ್ಜಿಸುವುದು ಸಂಪ್ರದಾಯ, ಪಟಾಕಿ, ಬಾಣ ಬಿರುಸುಗಳ ಸಂಭ್ರಮ. ದೇವಾಲಯಗಳಲ್ಲಿ ದೀಪೋತ್ಸವ. ಜೊತೆಗೆ ವಾಮನ ಹಬ್ಬವನ್ನು ನೆನಪಿಗೆ ತರುವಂತೆ ದೇವಾಲಯದ ಮುಂದೆ ತಾಳೆಗರಿಯಲ್ಲಿ ಕಂಬದಂತೆ ರಚಿಸಿ, ಅದನ್ನು ಒಣಗಿದ ತಾಳೇಗರಿಯಿಂದ ಅಲಂಕಾರ ಮಾಡಿ ಬಲಿ ಚಕ್ರವರ್ತಿ ಸುತಳಲೋಕಕ್ಕೆ ಹೋದ ಎಂಬುದರ ಸಾಂಕೇತಿಕ ಸೂಚಿಕವಾಗಿ ಅದನ್ನು ಸುಟ್ಟು ಭಸ್ಮಮಾಡುತ್ತಾರೆ. ಅಂತೆಯೇ ಹಿರಿಯರನ್ನುಸ್ಮರಿಸುತ್ತ ಅಡಿಗೆಯನ್ನು ಎಡೆಯಿಟ್ಟು ಧೂಪ ದೀಪ ಮಾಡುವ, ತರ್ಪಣ ಬಿಡುವ ಪದ್ಧತಿಯೂ ಇದೆ.ಹಾಗಾದರೆ ನಾಡೆಲ್ಲ ಭಕ್ತಿಯಿಂದ ಸ್ಮರಿಸುವ ಬಲೀಂದ್ರ ಯಾರು? ಅವ ನಲ್ಲಿದ್ದ ವಿಶೇಷ ಆದರೂ ಏನು? ರಾಜಾ ಬಲಿಚಕ್ರವರ್ತಿ, ಮತ್ತು ವಾಮನ ರೂಪನಾದ ವಿಷ್ಣುವನ್ನು ಸ್ಮರಿಸುವ ದಿನವೇ '' ಓಣಂ'' ಕೇರಳದಲ್ಲಿ ಈ ಹಬ್ಬ ಪ್ರಾಧಾನ್ಯತೆಯನ್ನು ಪಡೆಯಲು ಕಾರಣ ಪುರಾಣ ಕಾಲದಲ್ಲಿ ಈ ಪ್ರಾಂತ್ಯ ಬಲೀಂದ್ರನ ಆಳ್ವಿಕೆಯಲ್ಲಿ ಇತ್ತು ಎಂಬುದಾಗಿದೆ. ಬಲಿಚಕ್ರವರ್ತಿ, ಶ್ರೀ ಹರಿಯ ಪರಮ ಭಕ್ತನಾದ ಪ್ರಹ್ಲಾದನ ಮೊಮ್ಮಗ. ಹಿರಣ್ಯಕಶ್ಯಪುವಿನ ಮಗ ಪ್ರಹ್ಲಾದ.ಆತನ ಮಗ ವಿರೋಚನ ತಂದೆ ಯಂತೆಯೇ ಬ್ರಾಹ್ಮಣ ಭಕ್ತ ವಿಷ್ಣು ಭಕ್ತ.

ಬಲಿಯು ಎಲ್ಲ ದೇವಾನುದೇವತೆಗಳೊಡನೆ ಯುದ್ಧ ಮಾಡಿ ಎಲ್ಲ ದೇವತೆಗಳು ಶರಣಾಗಿ ಅವನ ಸೇವಕರಾಗಿ ಸೇವೆ ಮಾಡಿದುದ್ದೇ ಅಲ್ಲದೆ, ಸ್ವರ್ಗಲೋಕದ ಅಧಿಪತಿ ದೇವೇಂದ್ರನೊಡನೆ ಯುದ್ಧ ಮಾಡಿ, ಅವನನ್ನು ಸೋಲಿಸಿ ಇಂದ್ರ ಪದವಿಯನ್ನು ತನ್ನ ದಾಗಿಸಿಕೊಂಡು ಬಲೀಂದ್ರನಾದ. ಈ ಪರಿಸ್ಥಿತಿಯಲ್ಲಿ ದೇವತೆಗಳ ಪಾಡೇನು? ಅವನ ಕಾಟ ಹಿಂಸೆ ತಡೆಯಲಾರದೆ, ದೇವತೆಗಳಲ್ಲೆ ಒಂದು ಗೂಡಿ ಜಗನ್ನಾಟಕ ಸೂತ್ರಧಾರಿ ಮಹಾವಿಷ್ಣುವನ್ನು ''ಕಾಪಾಡು ಪ್ರಭು'' ಎಂದು ಪ್ರಾರ್ಥಿಸಿದರು. ದಯಾಮಯನಾದ ವಿಷ್ಣು ಕಾಪಾಡುವುದಾಗಿ ಭರವಸೆಕೊಟ್ಟು, ಸರಿಯಾದ ಸಮಯಕ್ಕಾಗಿ, ಅವಕಾಶ ಕ್ಕಾಗಿ ನಿರೀಕ್ಷಿಸುತ್ತಿದ್ದ.

ಇತ್ತ ಬಲೀಂದ್ರ ಎಲ್ಲರನ್ನೂ ಗೆದ್ದು, ಆ ಇಂದ್ರ ಪದವಿ, ಸ್ವರ್ಗಲೋಕ ಯಾವಾಗಲೂ ತನ್ನದೇ ಆಗಿರಬೇಕು ಎಂಬ ಇಚ್ಛೆವುಳ್ಳವನಾಗಿ ಹಲವಾರು ಯಜ್ಞಯಾಗಾದಿಗಳನ್ನು ಮಾಡಿ ಸಂತೋಷ ದಿಂದ ಇದ್ದನು. ಶಿಷ್ಯನ ವಿಷಯ ದಲ್ಲಿ ಅತ್ಯಂತ ವಾತ್ಸಲ್ಯದಿಂದ, ಅವನ ಒಳಿತಿಗಾಗಿ, ಶ್ರೇಯೋಭಿವೃದ್ಧಿಗಾಗಿ ಭೃಗು ವಂಶೀಯ ಬ್ರಾಹ್ಮಣರಿಂದ, ಶುಕ್ರಾ ಚಾರ್ಯರು ತಮ್ಮ ಪ್ರೀತಿಯ ಶಿಷ್ಯನಾದ ಬಲಿಚಕ್ರವರ್ತಿಯಿಂದ ಇಂದ್ರನಂತೆಯೇ ಅಶ್ವ ಮೇಧ ಯಾಗ ವನ್ನು ಮಾಡಿಸಿ ಬೇಡಿ ಬಂದ



ಸತ್ಪಾತ್ರರಿಗೆ ಯಥೇಚ್ಛವಾಗಿ ದಾನ ಮಾಡಿದರೆ ಇಂದ್ರ ಪದವಿ ಅವನದೇ ಆಗಿರುತ್ತದೆ ಎಂಬ ಆಲೋಚನೆ ಬಂದ ತಕ್ಷಣ ಮಹಾರಾಜ ಈ ಯಾಗವನ್ನು ನೀನು ಮಾಡುವಂತವವನಾಗು ಎಂದು ಅಜ್ಞಾಪಿಸಿದರು. ಗುರುಗಳ ಆಜ್ಞೆ ಆದ ತಕ್ಷಣವೇ ಹಿಂದೆ ಯಾರೂ ಮಾಡಿಲ್ಲದಂತಹ ಮುಂದೆ ಯಾರೂ ಮಾಡದಂತಹ ರೀತಿಯಲ್ಲಿ ಅಶ್ವಮೇಧ ಯಾಗವನ್ನು ಮಾಡಬೇಕೆಂಬ ಮನಃಸಂಕಲ್ಪ. ಜೊತೆಜೊತೆಯಲಿ ಯಾಗದಿನದಂದು ಬಲಿಯ ಮನೆಯ ಬಾಗಿಲಿಗೆ ಬಂದು ಯಾರು ಏನೇ ದಾನ ಯಾಚಿಸಿದರೂ ಕೊಡುವ ಧೃಡ ಸಂಕಲ್ಪದೊಂದಿಗೆ ಯಾಗಕ್ಕೆ ಬೇಕಾದ ಸಿದ್ಧತೆಗಳು ಆರಂಭವಾಯಿತು.ರಾಜನ ಸಂಕಲ್ಪದಿಂದ ವಿಚಲಿತರಾದ ದಾನವ ಗುರುಗಳಾದ ಶುಕ್ರಾಚಾರ್ಯರು ಬಲಿಯನ್ನು ಕುರಿತು ''ಅಪ್ಪಾ..ಚಕ್ರವರ್ತಿ, ನೀನು ಅಶ್ವಮೇಧಯಾಗ ಮಾಡುವೆ ಎಂದು ಸಂಕಲ್ಪ ಮಾಡಿದ್ದು ಸರಿ ಇದು ನಿನ್ನಂತಹ ರಾಜನಾದವನು ಮಾಡಬೇಕಾದ್ದೆ. ಅದು ನಿನ್ನ ವರ್ಚಸ್ಸನ್ನು ಹೆಚ್ಚಿಸುತ್ತದೆ ಮಾಡು, ಆದರೆ ದಾನ ಬೇಡಿಬಂದವರಿಗೆ ಅವರು ಕೇಳಿದ್ದನ್ನು ಕೊಡುತ್ತೇನೆ ಎಂಬ ಈ ನಿನ್ನ ಸಂಕಲ್ಪ ಸರಿಯಲ್ಲ. ಈ ಹಿಂದೆ ನಿನ್ನ ತಂದೆಯೂ ಇದೇ ರೀತಿ ಸಂಕಲ್ಪ ಮಾಡಿ ದೇವತೆಗಳ ಕುತಂತ್ರಕ್ಕೆ ಒಳಗಾದರು. ಆದ ಕಾರಣ ಈ ನಿನ್ನ ಸಂಕಲ್ಪವನ್ನು ಹಿಂದಕ್ಕೆ ತೆಗೆದುಕೋ. ಈಗ ನೀನು ಮಾಡಿರುವ ಸಂಕಲ್ಪಕ್ಕೆ ನನ್ನ ಸಮ್ಮತಿವಿಲ್ಲ. ಇದು ನಿನಗೆ ಒಳಿತನ್ನು ಮಾಡುವುದಿಲ್ಲ. ಏನೋ ಅನರ್ಥವಾಗುತ್ತದೆ ಎಂದು ನನ್ನ ಅಂತರಂಗ ಹೇಳುತ್ತಿದೆ'' ಎಂದು ವಿಧ ವಿಧವಾಗಿ ತಿಳಿ ಹೇಳಿದರೂ ತನ್ನ ಸಂಕಲ್ಪ ಬದಲಾಯಿಸಲಿಲ್ಲ.



ಬಲಿಯ ಸಂಕಲ್ಪದಂತೆ ಯಾಗವು ಶುಭ ಮಹೂರ್ತದಲ್ಲಿ ಪ್ರಾರಂಭವಾಯಿತು. ಅದನ್ನು ಬಣ್ಣಿಸಲು ಪದಗಳೇ ಇಲ್ಲ. ಯಾವ ಕವಿಯು ಬಣ್ಣಿಸಲಾರ ಎಂಬಂತೆ ನಡೆಯಿತು. ಬಲೀಂದ್ರ ತನ್ನ ಮಾತಿನಂತೆ ಅಂದು ಯಾಗ ಸಮಯದಲ್ಲಿ ತನ್ನ ಮನೆಯ ಬಾಗಿಲಿಗೆ ''ದೇಹಿ'' ಎಂದು ಬಂದವರಿಗೆ ಅವರು ಬೇಡಿದ್ದನ್ನು ದಾನರೂಪದಲ್ಲಿ ಕೊಟ್ಟು ಸಂತೋಷಪಡುತ್ತಿದ್ದ ಸಂತುಷ್ಟಗೊಂಡ.ಅವನ ಮನಃ ಸಂಕಲ್ಪದಂತೆ,ಅರಮನೆಯ ಬಾಗಿಲಿನಲ್ಲಿ ದಾನ ಪಡೆಯಲು ಕಾದು ನಿಂತವರಿಗೆಲ್ಲ ಅವರು ಬೇಡಿದ್ದನ್ನು ಯಥೇಚ್ಛವಾಗಿ ದಾನ ಮಾಡುತ್ತಿದ್ದನು.ಇದೇ ಕಾಲಾವಕಾಶಕ್ಕಾಗಿ, ಸುಮಹೂರ್ತಕ್ಕೆ ಶ್ರೀಹರಿಯು ಕಾದಿದ್ದನೋ ಎಂಬಂತೆ ಸ್ವಾಮಿಯೂ,ದಾನ ಪಡೆಯುವವರಲ್ಲಿ ತಾನೂ ಒಬ್ಬ ಎಂಬಂತೆ ಲೀಲಾನಾಟಕ ಸೂತ್ರಧಾರಿ ಮುದ್ದು ಮುಖದ ಬಾಲ ವಟುವಿನ ವೇಷದಲ್ಲಿ ವಾಮಾವತಾರಿ ಶ್ರೀಮನ್ನಾರಾಯಣ ತನ್ನ ಸರದಿಗಾಗಿ ಕಾದು ನಿಂತಿದ್ದ. ವಿಶ್ವವೇ ತಾನಾಗಿರುವ ಭಗವಂತ, ದಾನ ಪಡೆಯಲು ಬಲೀಂದ್ರನ ಅರಮನೆಯ ಬಾಗಿಲಲ್ಲಿ ನಿಲ್ಲುವುದೇ..? ಬಲೀಂದ್ರ ಎಂತಹ ಭಾಗ್ಯಶಾಲಿ. ದೇವನಿದ್ದಲ್ಲಿಗೆ ಭಕ್ತಹೋಗಬೇಕು. ಆದರೆ ಇಲ್ಲಿ ಭಕ್ತಪರಾಧೀನನಾದ ಭಗವಂತ, ತಾನೇ ಭಕ್ತನೆಡೆಗೆ ಬಂದಿದ್ದಾನೆ. ಎಂತಹ ಸುಯೋಗ, ಎಂಥಹ ಪುಣ್ಯ ಬಲಿಯದು. ದಾನ ಬೇಡಲು ವಾಮನ ರೂಪದಲ್ಲಿ ಬಂದಿರುವವರು ಯಾರು? ರಾಕ್ಷಸರ ಶತ್ರುವಾದ ದೇವರದೇವ ಮಹಾವಿಷ್ಣು. ದೇವತೆಗಳಿಗೆ ಬಲಿಯು ಕೊಟ್ಟಿರುವ ಹಿಂಸೆ ಕಿರುಕುಳ ಸಾಮಾನ್ಯವೇ?ಇಂದ್ರಲೋಕ,ಇಂದ್ರಪದವಿಯನ್ನೇ ತನ್ನದಾಗಿಸಿಕೊಂಡಿದ್ದಾನೆ. ಮಾಯಾವಿ ಮಹಾವಿಷ್ಣು ಏನೋ ಉಪಾಯವನ್ನು ಮಾಡಿಕೊಂಡೇ ಬಂದಿದ್ದಾನೆ. ಏನೋ ಸಂಚಿದೆ, ನನ್ನ ಶಿಷ್ಯನ ಶ್ರೇಯಸ್ಸಿಗಾಗಿ ಮುಂಬರಲಿರುವ ಅನಾಹುತವನ್ನು ತಡೆಯಲೇ ಬೇಕು ಹೇಗೆ?

ದಾನವನ್ನು ನೀಡುವಾಗ ಪೂಜಾಕ್ರಮದಲ್ಲಿ ಜಲಸಂಪ್ರೋಕ್ಷಣ ಮಾಡುವುದು,ಅರ್ಘ್ಯಬಿಡುವುದು ವಿಧಿವಿಧಾನ.ಇಲ್ಲಿ ಬಲೀಂದ್ರ ತನ್ನ ಪೂಜಾ ಸಮಯದಲ್ಲಿ ಉಪಯೋಗಿಸಿದ ಕಮಂಡಲದ ನೀರನ್ನೇ ಉಪಯೋಗಿಸುತ್ತಾನೆ ಉಪಯೋಗಿಸಲೇ ಬೇಕು. ಇದಕ್ಕೆ ಅಡ್ಡಿ ಉಂಟುಮಾಡಲೇಬೇಕು. ಇಲ್ಲದಿದ್ದರೆ ಚಕ್ರವರ್ತಿ ಬಲಿಯ ಅಂತ್ಯ ನಿಶ್ಚಿತ ಎಂದು ಶುಕ್ರಾಚಾರ್ಯರ ಮನಸ್ಸಿಗೆ ಒಂದೊಡನೆ ''ಮಂಡೂಕ'' ರೂಪದಲ್ಲಿ ಕಮಂಡಲದಲ್ಲಿ ಸೇರಿಕೊಂಡರು. ಸಂಪ್ರೋಕ್ಷಣೆಯ ಸಮಯದಲ್ಲಿ, ಜಲವು ಕಮಂಡಲದ ರಂಧ್ರದಿಂದ ಹೊರ ಬೀಳದಂತೆ ತಡೆದರು. ಮಾಯಾವಿ,ವಿಶ್ವಸ್ವರೂಪನ ಮುಂದೆ, ರಾಕ್ಷಸ ಗುರುವಿನ ಆಟ ನಡೆಯಲು ಸಾಧ್ಯವೇ?.. ವಾಮನ ರೂಪಿಯಾದ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ಮಹಾವಿಷ್ಣು . ಕಮಂಡಲದ ನಾಳದಲ್ಲಿ ಏನೋ ಅಡಚಣೆ ಆಗಿದೆ. ಆ ಕಸವನ್ನು ಇಲ್ಲವಾಗಿಸಬೇಕು ಎಂದು ಒಂದು ದರ್ಭೆಯ ಮೊನೆಯಿಂದ ಕಮಂಡಲದ ನಾಳಕ್ಕೆ ಚುಚ್ಚಿದ. ಅದು ಮಂಡೂಕಾವತಾರಿ ಆಗಿದ್ದ ಶುಕ್ರಾಚಾರ್ಯರ ಕಣ್ಣಿ ಚುಚ್ಚಿತು. ಅಂದಿನಿಂದ ಅವರು ಒಂದು ಕಣ್ಣನ್ನು ಕಳೆದುಕೊಂಡು ''ಒಕ್ಕಣ್ಣಶುಕ್ರಾಚಾರ್ಯ'' ರಾದರು. ವಾಮನ ತನ್ನ ಪುಟ್ಟ ಪಾದ ಮೂರು ಹೆಜ್ಜೆ ಭೂಮಿಯನ್ನು ಬೇಡಿದಾಗಲೂ ಬಲಿಚಕ್ರವರ್ತಿ ಬಾಲ ಬ್ರಹ್ಮಚಾರಿ, ನನ್ನಲ್ಲಿ ಯಾಚಿಸಲು ಬಂದವರು ಮತ್ತೆ ಎಲ್ಲಿಯೂ ಬೇಡಲು ಹೋಗಬಾರದು.ಇದು ನನ್ನ ಸಂಕಲ್ಪ. ಆದ್ದರಿಂದ ನಿನ್ನ ಜೀವನವನ್ನು ಸಂತೋಷದಿಂದ ಸಾಗಿಲಸು ಬೇಕಾದಷ್ಟು ಧನ, ಕನಕ, ಭೂಮಿಯನ್ನು ಬೇಡು, ನಾನು ಕೊಡುತ್ತೇನೆ ಎಂದು ಹೇಳುತ್ತಾನೆ. ಇಲ್ಲಿ ಬಲೀಂದ್ರನಲ್ಲಿದ್ದ ''ನಾನು'' ''ನನ್ನದು'' ಅಳಿದಿಲ್ಲ.''ನಾನು'' ಎಂಬುದು ಇವಲ್ಲದೇ ಹೋದಾಗ ಮಾತ್ರ ಅವನು ಪರಿಪೂರ್ಣದೆಡೆಗೆ ಹೋಗಲು ಸಾಧ್ಯ ಮೋಕ್ಷ ಪಡೆಯಲು ಸಾಧ್ಯ.ಬಲಿಯಲ್ಲಿ ವಾಮನ ಬೇಡಿದ ಮೂರನೆಯ ಹೆಜ್ಜೆ, ಅದನ್ನು ಸಂತುಷ್ಟಿಗೊಳಿಸುವ ಸಲುವಾಗಿ ಪೂರ್ಣಗೊಳಿಸುವ ಸಲುವಾಗಿ ಬಲಿಯ ತಲೆಯ ಮೇಲೆ ಮೂರನೆಯ ಹೆಜ್ಜೆಯನ್ನು ಇಟ್ಟು, ಅವನನ್ನು ಪಾತಾಳಕ್ಕೆ ತುಳಿದು ಬಿಟ್ಟ ಎಂಬುದು ಉಲ್ಲೇಖ. ಹರಿಯ, ಪ್ರಿಯಭಕ್ತನಾದ ಪ್ರಹ್ಲಾದನ ಮೊಮ್ಮಗ ವಿರೋಚನೆ ಜನ್ಮತಃ ಅಸುರನಾದರೂ, ಅಂತರಂಗದಲ್ಲಿ ಅವನು ದೇವ ದೇವನ ಪ್ರಿಯ ಭಕ್ತ. ಭಕ್ತ ಪರಾಧೀನನಾದ ಭಗವಂತ ತನ್ನಂತರಂಗದ ಭಕ್ತನಾದ ಬಲಿಯನ್ನು ತುಳಿದು ಸಂಹರಿಸಲು ಸಾಧ್ಯವೇ...?

ಬಲೀಂದ್ರನ ಮಹಾನ್ ಸಹಿಷ್ಣುತೆ,ಶಾಂತ ಸ್ವಭಾವ ಮೆಚ್ಚಿದ ಪುರುಷೋತ್ತಮ, ಯಾವ ದೇವತೆಗಳಿಗೂ ಲಭ್ಯವಾಗದ ಉನ್ನತ ಸ್ಥಾನವನ್ನು ಕೊಟ್ಟು ತಾನೇ ಸಂಭ್ರಮಿಸಿದ್ದಾನೆ. ಅಲ್ಲದೆ ತನ್ನ ಪ್ರಿಯಭಕ್ತನಿಗೆ ''ಸಾವರ್ಣಿ'' ಮನುವಿನ ಕಾಲದಲ್ಲಿ ಸ್ವರ್ಗಾಧಿಪತಿ ಪಟ್ಟವನ್ನು ಕೊಟ್ಟು ಆಶೀರ್ವದಿಸಿದ್ದಾನೆ. ಬಲೀಂದ್ರ ಭಗವಂತನ ಪ್ರೀತಿಗೆ ಪಾತ್ರನಾಗಿದ್ದಾನೆ. ಎಂಥಾ ಪುಣ್ಯ, ಎಂಥಾ ಭಾಗ್ಯ ಬಲಿಚಕ್ರವರ್ತಿಯದು ಕರುಬುವವರ ದ್ವೇಷಕ್ಕೆ, ಅಸೂಯೆಗೆ ಗುರಿಯಾಗದಂತೆ ಸದಾ ಭಗವಂತನ ರಕ್ಷೆಯಲ್ಲಿದ್ದನು.ದಾನವೇಂದ್ರ ಬಲಿ ಚಕ್ರವರ್ತಿ ''ರಾಜಾ ಪ್ರತ್ಯಕ್ಷ ದೇವತಾ'' ತನ್ನ ಪ್ರಜೆ ಗಳ ಪ್ರೀತಿಗೆ ಪಾತ್ರನಾಗಿ ಅವರ ಅಂತರಂಗದಲ್ಲಿ ದೇವರ ಸ್ಥಾನವನ್ನು ಪಡೆದಿದ್ದ. ಬಲಿಚಕ್ರವರ್ತಿ ತನ್ನ ತನು ಮನಧನವನ್ನು ಜಗದ್ರಕ್ಷಕ ವಾಮಾವತಾರಿ ಬ್ರಹ್ಮಾಂಡನಾಯಕನಿಗೆ ಅರ್ಪಿಸಿ ಸಂತೃಪ್ತನಾದ ಅದ್ದರಿಂದ ಸಂತುಷ್ಟನಾದ ವಾಮರೂಪಿ ಭಗವಂತ ಬಲೀಂದ್ರನ ಪ್ರಜೆಗಳ ಇಚ್ಛೆಯಂತೆ ಸಂವತ್ಸರದಲ್ಲಿ ಒಂದು ದಿನ ಭೂಮಿಗೆ ಬಂದು ತನ್ನ ಜನರೊಂದಿಗೆ ಇದ್ದು ಅವರಿಂದ ಪೂಜೆಗೊಳ್ಳುವಂತೆ ವರವನ್ನು ಕೊಟ್ಟನು ಎಂದು ಹಲವಾರು ಪುರಾಣ ಕಥೆಗಳಲ್ಲಿ ಕಾಣುತ್ತೇವೆ. ಅಂದು ''ಓಣಂ'' ಹಬ್ಬವೆಂದು ಆಚಾರಿಸಲಾಗುತ್ತಿದೆ.

ದೇವತಾ ಸಂಬಂಧವಾದ, ಪಿತೃಮನುಷ್ಯ ಸಂಬಂಧವಾದ ಕಾರ್ಯಗಳು ನಡೆಯುವಾಗ ವಾಮಾವತಾರದ ಕಥೆಯನ್ನು ಪಾರಾಯಣ ಮಾಡಿದರೆ ಎಲ್ಲ ರೀತಿಯ ಸಂಕಷ್ಟ ದುರಿತಗಳು ನಿವಾರಣೆ ಆಗುತ್ತದೆ ಎಂಬುದಾಗಿ ಮಹಾಪುರಾಣವೂ ಪಾರಮಹಂಸ್ಯ ಸಂಹಿತೆಯೂ ಆಗಿರುವ ಶ್ರೀ ಮದ್ಭಾಗವತದಲ್ಲಿ ಹೇಳಿದೆ. ಅದರಂತೆ ಬಲೀಂದ್ರನನ್ನು ವಾಮನ ಮೂರ್ತಿಯನ್ನು ಪೂಜಿಸಿ ಕೃತಾರ್ಥರಾಗೋಣ.

**ಕೃಷ್ಣಾರ್ಪಣಮಸ್ತು**



# ಆಳ್ವಾರುಗಳು ಕಂಡ ತಿರುವೇಂಗಡ

**- ಎಂ. ಆರ್. ನರಸಿಂಹನ್**

ಶ್ರೀ ಸೀತಾಪತಿಯವರು ಈ ಸ್ತೋತ್ರ (ಪಾಶುರಗಳ) ವಿವರಣೆಯನ್ನು ಡಾ॥ ಕೃಷ್ಣಸ್ವಾಮಿ ಅಯ್ಯಂಗಾರ್ಯರ ಮತ್ತು ಶ್ರೀ ಟಿ.ಕೆ.ಟಿ. ವೀರ ರಾಘವಾಚಾರ್ ಎಂಬುವವರ 'ಹಿಸ್ಟರಿ ಆಫ್ ತಿರುಪತಿ' ಎಂಬುವ ಒಂದೇ ಹೆಸರಿನ ಎರಡು ಪುಸ್ತಕಗಳ ಆಧಾರದಿಂದ ಪಡೆದಿರುವುದಾಗಿ 'ಶ್ರೀ ವೆಂಕಟೇಶ್ವರ' ಎನ್ನುವ ಪುಸ್ತಕದ ಅಡಿಟಿಪ್ಪಣೆಗಳಲ್ಲಿ ಸೂಚಿಸಿರುತ್ತಾರೆ. ಈ ಈರ್ವರ ಪುಸ್ತಕಗಳು 1952 ಮತ್ತು 1953 ನೇ ಇಸವಿಗಳಲ್ಲಿ ಪ್ರಕಟಗೊಂಡಿವೆ. ಶ್ರೀ ಪಿ.ಸೀತಾಪತಿ ಅವರ ಪುಸ್ತಕದ ಮೊದಲನೇ ಆವೃತ್ತಿ 1968 ರಲ್ಲಿ ಪ್ರಕಟವಾದದ್ದು. ಇದು ಮೂರು ನಾಲ್ಕು ಆವೃತ್ತಿಗಳನ್ನು ಕಂಡಿದೆ. ಈ ಪುಸ್ತಕದ ವಿವರದಿಂದ ಶ್ರೀ ಸೀತಾಪತಿಯವರು ಮೂಲ ಪಾಶುರಗಳನ್ನು ಪರಿಶೀಲಿಸಿಲ್ಲವೆಂಬುದಾಗಿಯೂ, ಅವರ ಅಭಿಪ್ರಾಯಗಳು ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್ ಮತ್ತು ಶ್ರೀ ಟಿ. ಕೆ. ಟಿ. ವೀರ ರಾಘವಾಚಾರ್ಯರ ವಿಚಾರ ವಾಹಿನಿಯ ಮೇಲೆ ಅವಲಂಬಿತವಾಗಿರುವುದನ್ನೂ ನಾವು ತಿಳಿಯಬಹುದು ಶ್ರೀ ಎಸ್.ಕೆ. ರಾಮಚಂದ್ರರಾಯರು 'ತಮ್ಮ ತಿರುಪತಿ ತಿಮ್ಮಪ್ಪ' ದಲ್ಲಿ ಈ ಮೇಲ್ಕಂಡ ವಿದ್ವಾಂಸರಿಬ್ಬರ ಬಗೆಗೆ ಅವರ ಪ್ರಾಮಾಣಿಕ ವಸ್ತು ಸಂಗ್ರಹಣೆ ವಿಷಯ ನಿರೂಪಣೆ ಮತ್ತು ಉದಾಹರಣೆಗಳ ಮೇಲೆ ಮೆಚ್ಚುಕೆ ವ್ಯಕ್ತಪಡಿಸಿರುವುದನ್ನು ನೋಡಿದಾಗ ಅವರೂ ತಮ್ಮ ಪುಸ್ತಕಕ್ಕೆ ಈ ಮಹನೀಯರ ಗ್ರಂಥ ವಿಷಯಗಳನ್ನು ವಸ್ತುಗಳನ್ನಾಗಿಯೂ, ಪ್ರಮಾಣವಾಗಿಯೂ ಅಂಗೀಕರಿಸಿರುವುದಾಗಿ ತಿಳಿಯುತ್ತದೆ. ಶ್ರೀರಾಯರು ತಮ್ಮ ಪುಸ್ತಕದ ಪುಟದಲ್ಲಿ ಶ್ರೀ ಟಿ.ಕೆ.ಟಿ. ವೀರ ರಾಘವಾಚಾರ್ಯರ ಬಗೆಗೆ ಮೆಚ್ಚು ನುಡಿಗಳನ್ನು ಈ ರೀತಿ ಹೇಳುತ್ತಾರೆ. "ಗುಡಿಯ ಪ್ರಥಮಾಚಾರ್ಯ ಪರಂಪರೆ ಸೇರಿದ ಟಿ.ಕೆ. ಟಿ. ವೀರ ರಾಘವಾಚಾರ್ಯರು ಎರಡು ಸಂಪುಟಗಳಲ್ಲಿ ಇದೇ ಹೆಸರಿನಿಂದ (ತಿರುಪತಿಯ ಇತಿಹಾಸ) ಬರೆದ ಗ್ರಂಥಗಳಲ್ಲಿ (1953) ಇತಿಹಾಸ, ಆಗಮ ಪದ್ಧತಿಗಳು ಇವನ್ನು ಕುರಿತ ವಿವರಗಳು ದೊರೆಯುತ್ತವೆ. ವೀರರಾಘವಾಚಾರ್ಯರ ಬರಹದಲ್ಲಿ ಗುಡಿಯ ಬಗ್ಗೆ ಆದರವಿದೆ. ವಿವರಗಳನ್ನು ಕುರಿತಂತೆ ತೆರೆದ ಮನಸ್ಸಿನ ಪರಿಶೀಲನೆಯೂ ಇದೆ. ಮನೆತನದಲ್ಲಿ ವೈದಿಕರಾದರೂ ಅವರು ಲೌಕಿಕ ವೃತ್ತಿಯಲ್ಲಿದ್ದರೂ (ಇಂಜಿನಿಯರ್) ಕುರುಡು ನಂಬಿಕೆಗಳನ್ನು ಹರಿಯ ಬಿಡಿದೆ ಹರಿತವಾದ ವಿಮರ್ಶೆಯ ಮೂಸೆಯಲ್ಲಿ ಎಲ್ಲಾ ವಿವರಗಳನ್ನೂ ಪುಟವಿಟ್ಟು ನೋಡಿದ್ದಾರೆ. ಗುಡಿಗೆ ಸೇರಿದವರಾದರೂ ಅಲ್ಲಿ ನಡೆಯುವ ಅನ್ಯಾಯಗಳನ್ನು ಅಂಜದೆ, ಅಳುಕದೆ ಎತ್ತಿ ಹಿಡಿದ್ದಾರೆ. ಅವರ ಬರಹದಲ್ಲಿ ಸೊಗಸೂ, ರುಚಿಯೂ ಇದೆ.."

ಮೇಲಿನ ಪಾಶುರಗಳನ್ನೂ ಶ್ರೀ ಪಿ. ಸೀತಾಪತಿಯವರು ಹೊರಗೆಡಹಿರುವ ಶ್ರೀ ಕೃಷ್ಣಯ್ಯಂಗಾರ್ ಮತ್ತು ವೀರ ರಾಘವಾ ಚಾರ್ಯ ಅವರುಗಳ ಮೂಲ ಅಭಿಪ್ರಾಯಗಳನ್ನೂ ಶ್ರೀರಾಮ ಚಂದ್ರರಾಯರ ಚುಚ್ಚು ಮತ್ತು ಮೆಚ್ಚು ನುಡಿಗಳ ಬೆಳಕಿನಲ್ಲಿ ಪರಿಶೀಲಿಸಿದಾಗ ಈ ಮೆಚ್ಚುಗೆ ಎಷ್ಟರ ಮಟ್ಟಿಗೆ ಅವರುಗಳನ್ನು ಅರ್ಹರನ್ನಾಗಿ ಮಾಡಿಸಿವೆ ಎಂಬುವುದು ತಿಳಿಯುತ್ತದೆ.

ಏಕೆಂದರೆ ಮೇಲೆ ವಿವರಿತವಾಗಿರುವ ಪಾಶುರಗಳು ಪೊಯ್ಗಯ್ ಆಳ್ವಾರ್‌ರ ಮೊದಲ್ ತಿರುವಂದಾದಿಯ 5,98 ಮತ್ತು 74 ನೆಯ ಪಾಶುರಗಳು,ಪೇಯಾಳ್ವಾರ್ ಅವರ ಮೂರ ನೆಯ ತಿರುವಂದಾದಿಯ 63 ನೆಯ ಪಾಶುರ ಮತ್ತು ನಮ್ಮಾ ಳ್ವಾರ್ ಅವರ ತಿರುವಾಯೊಳಿಯ ದ್ವಿತೀಯ ಶತಕದ ದ್ವಿತಿಯ ದಶಕದ 3ನೇ ಪಾಶುರ. ಶ್ರೀ ವೆಂಕಟೇಶ್ವರ ಪುಸ್ತಕದ ಎರಡನೇ ಅಧ್ಯಾಯದಲ್ಲಿ ಪೇಯಾಳ್ವಾರ್ ಅವರ ಎರಡು ಪಾಶುರಗಳನ್ನು ಉದಾಹರಿಸಿರುವುದಾಗಿ ಶ್ರೀ ಪಿ. ಸೀತಾಪತಿಯವರು ಹೇಳಿ ಒಂದನ್ನು ಮಾತ್ರ ಕಾಣಿಸಿದ್ದಾರೆ. ಎರಡನೇ ಆಳ್ವಾರ್ ಅವರ ಒಂದು ಪಾಶುರವನ್ನೂ ಉದಾಹರಿಸಿಲ್ಲ.ಆದರೂ ಈ ಮೂವರು ಆಳ್ವಾರ್‌ಗಳು ತಮ್ಮ ಹಲವು ಪಾಶುರಗಳಲ್ಲಿ ಹರಿಹರ ಅಭೇದವನ್ನು ತಿರುಪತಿಯ ದೇವರಲ್ಲಿ ಗುರುತಿಸಿ ಹಾಡಿದ್ದಾರೆ ಎಂದು ಹೇಳಿದ್ದಾರೆ. ಮೇಲೆ ಉದಾಹರಿಸಿರುವ ಪಾಶುರಗಳಲ್ಲಿ ಪೇಯಾಳ್ವಾರ್ ಅವರ ತಿರುವಂದಾದಿಯ 63 ನೇ ಪಾಶುರ ವೊಂದನ್ನು ಬಿಟ್ಟು ಉಳಿದ ಯಾವ ಪಾಶುರಗಳಲ್ಲೂ ತಿರು ಮಲೆಯ ದೈವದ ಪ್ರಸ್ತಾಪ ಇಲ್ಲ. ಇವುಗಳೆಲ್ಲಾ ವಿಷ್ಣುವನ್ನು ಕುರಿತ ಪಾಶುರಗಳು. ಅವನಲ್ಲಿ ಶಿವನ ಅಭೇಧವನ್ನು ವ್ಯಕ್ತಗೊಳಿಸುತ್ತದೆ ಎಂದು ಹೇಳಲಾಗುವ ಪಾಶುರಗಳು, ಇವು ವೇಂಗಡದ ಒಡೆಯನಿಗೆ ಸಂಬಂಧಿಸಿಲ್ಲವೆಂದಾಗ ಶ್ರೀ ಪಿ. ಸೀತಾಪತಿಯವರು ಇದರಲ್ಲಿ ಹೇಗೆ ಶ್ರೀನಿವಾಸನ ಸಂಬಂಧ ವನ್ನು ಕಲ್ಪಿಸಿದರೆಂಬುವುದು ಅರ್ಥವಾಗದ ವಿಷಯ. ಹಾಗೆಯೇ ನಿಷ್ಕೃಷ್ಟವಾಗಿ ವಿಷಯ ನಿರೂಪಣೆ ಮಾಡುವವರೆಂದು ರಾಯರು ಹೊಗಳುವ ಶ್ರೀ ಕೃಷ್ಣಸ್ವಾಮಯ್ಯಂಗಾರ್ಯರಾಗಲೀ ವೀರ ರಾಘವಾಚಾರ್ಯರಾಗಲೀ ಈ ಎಲ್ಲ ಪಾಶುರಗಳಲ್ಲಿ ವೆಂಕ ಟೇಶ್ವರನ ಸಂಬಂಧವಿರುವುದಾಗಿ ಹೇಗೆ ಕಂಡು ಕೊಂಡ ರೆಂಬುವುದು ಕುತೂಹಲವಾದ ವಿಷಯ. ಇದು ಸರಿಯಲ್ಲ. ಮೂರನೇ ಆಳ್ವಾರ್‌ರ 63 ನೇ ಪಾಶುರವೊಂದನ್ನುಳಿದು ಯಾವ ಉದಾಹರಿಸಲ್ಪಟ್ಟ ಪಾಶುರಗಳೂ ತಿರುಮಲೆಗೆ ಸಂಬಂಧಿ ಸಲ್ಪಟ್ಟುದಲ್ಲವೆಂದು ಈ ಮೂಲಕ ತಿಳಿಸುತ್ತೇನೆ. ಶ್ರೀಪಿ.ಸೀತಾಪತಿಯವರಾಗಲೀ, ಶ್ರೀ ಕೃಷ್ಣಯ್ಯಂಗಾರ್ಯ ರಾಗಲೀ ಅಥವಾ ಶ್ರೀ ವಿಜಯ ರಾಘವಾಚಾರ್ಯರಾಗಲೀ ಏತಕ್ಕೆ ಈ ರೀತಿ ತಪ್ಪು ಹೇಳಿಕೆ ನೀಡಿರುವರೆಂಬುವುದು ಅರ್ಥವಾಗದ ವಿಷಯ.

ಪೊಯ್ಗಯ್ ಆಳ್ವಾರ್ ಅವರ ತಿರುವಂದಾದಿಯಲ್ಲಿ ಶಿವ ವಿಷ್ಣು ವಿಚಾರವಾಗಿ ಬರುವ ಪಾಶುರಗಳೆಂದರೆ 4, 5, 15, 28, 49, 34, 97 ಮತ್ತು 98 - ಈ ಎಂಟು ಮಾತ್ರ . ಇವು ಗಳಲ್ಲಿ ಪಿ. ಸೀತಾಪತಿಯವರು 5, 28 ಮತ್ತು 38 ಪಾಶುರ ಗಳನ್ನು ವಿವರಿಸಿದ್ದಾರೆ.ಆದರೆ ಈ ತಿರುವಂದಾದಿಯಲ್ಲಿ ವೇಂಗಡದ ವಿಷಯವಾಗಿ ಬರುವ ಪಾಶುರಗಳು ಹತ್ತು ಎಂದು ಈ ಹಿಂದೆಯೇ ಪಟ್ಟಿಯಲ್ಲಿ ತಿಳಿಸಿ ಆಗಿದೆ. ಅವು ಯಾವು ವೆಂದರೆ 26, 37, 38, 39,40,77, 82, 68, 99, ಮತ್ತು 76 ಈ ಪಾಶುರಗಳಿಗೂ ಮೇಲೆ ಕಾಣಿಸಿದ ಎಂಟು ಪಾಶುರ ಗಳಿಗೂ ಸಂಬಂಧವೇ ಇಲ್ಲದಿರುವಾಗ ಶಿವ ವಿಷ್ಣು ಅಬೇಧದ ವಿಷಯವನ್ನು ವೆಂಕಟೇಶ್ವರನಿಗೆ ಹೇಗೆ ಅನ್ವಯಗೊಳಿಸಿದರು ಆಳ್ವಾರುಗಳು ಎಂಬುವುದನ್ನು ಶ್ರೀ ಸೀತಾಪತಿಯವರೇ ತೋರಿಸಬೇಕಾಗಿದೆ.

(ಮುಂದುವರೆಯುತ್ತದೆ)

## ಪಾಪವಿನಾಶಿನಿ

**ತಿರುಮಲೆಯ ಶ್ರೀಹರಿಯ ಆಲಯಕ್ಕೆ 5 ಕಿ.ಮೀ. ದೂರದಲ್ಲಿ ಈ ಪಾಪವಿನಾಶಿನಿ ತೀರ್ಥವಿದೆ. ಶ್ರೀ ವೇಂಕಟೇಶ್ವರ ಸ್ವಾಮಿಯ ಪಾದಗಳಿಂದಲೇ ಇಲ್ಲಿಗೆ ನೀರು ಬಂದು ಸೇರುತ್ತದೆಂದೂ ಈ ಪವಿತ್ರವಾದ ತೀರ್ಥದಲ್ಲಿ ಸ್ನಾನವನ್ನಾಚರಿಸಿದರೆ ಪಾಪಗಳು ಕಳೆಯುತ್ತದ್ದರಿಂದ ಇದಕ್ಕೆ ಪಾಪವಿನಾಶಿನಿ ತೀರ್ಥ ವೆಂದು ಹೆಸರು ಬಂದಿದೆ. ಇಲ್ಲಿ ಪವಿತ್ರಸ್ಥಾನ ಮಾಡುವ ಭಕ್ತರ ಅನುಕೂಲಕ್ಕಾಗಿ,ಬಟ್ಟೆ ಬದಲಿಸಿಕೊಳ್ಳು ವುದಕ್ಕೆ ಪುರುಷರಿಗೆ, ಮಹಿಳೆಯರಿಗೆ ಪ್ರತ್ಯೇಕವಾದ ಕೊಠಡಿಗಳನ್ನು ನಿರ್ಮಿಸಲಾಗಿದೆ. ಇದರ ಪಕ್ಕದಲ್ಲೇ ಪಾಪವಿನಾಶಿನಿ ಡ್ಯಾಂ ಇದೆ. ಈ ಪ್ರಾಂತ್ಯಕ್ಕೆ ತಿರು ಮಲೆಯಿಂದ ಬಸ್ಸುಗಳ ಸೌಕರ್ಯ ವಿದೆ.**

108 ವೈಷ್ಣವ ಕ್ಷೇತ್ರಗಳು



# ತಿರುಕ್ಕುಡಂದೈ (ಕುಂಭಕೋಣಂ)

- ಆಚಾರ್ಯ ಚಕ್ರವರ್ತಿ ರಂಗನಾಥನ್
- ಕನ್ನಡಾನುವಾದ - ಸೂರ್ಯವಂಶಿ

ಶ್ಲೋ॥ ಶ್ರೀಹೇಮಂಬುಜಿನೀ ತಟೀ ತು ನಗರೇ
ಶ್ರೀಕುಂಭಘೋಣಾಭಿದೇ
ಪ್ರಾಪ್ತಃ ಕೋಮಲ ವಲ್ಲಿಕಾಖ್ಯ ಮಹೀಷೀಂ
ಶ್ರೀವೈದಿಕಾಗಾರಗಃ॥
ಹೇಮಾಖ್ಯಾನ ಮುನೀಕ್ಷಿತೋ ವಿಜಯತೇ
ಶ್ರಿಶಾರ್ಗಪಾಣಿ ಪ್ರಭುಃ
ಪ್ರಾಗಾಸ್ಯೋ ಭುಜಗೇಂದ್ರ ಭೋಗಶಯನೇ
ತೃಪ್ತಾಮೃತಾಖ್ಯಾಯುತಃ॥

ತಮಿಳುನಾಡಿನಲ್ಲಿನ "ಕುಂಭಕೋಣಂ "ವನ್ನೇ "ತಿರುಕ್ಕುಡಂದೈ" ಎಂದು ಕರೆಯುತ್ತಾರೆ. ಇದು ೧೦೮ ದಿವ್ಯ ದೇಶಗಳಲ್ಲಿ ಒಂದಾಗಿದೆ. ಈ ದಿವ್ಯ ದೇಶ ಅನೇಕ ದೇವಾಲಯಗಳ ಸಮೂಹವಾಗಿ ರಾರಾಜಿಸುತ್ತಿದೆ. ಈ ಕ್ಷೇತ್ರಕ್ಕೆ 'ಭಾಸ್ಕರಕ್ಷೇತ್ರ' ವೆಂದೂ ಹೆಸರು. ಶೈವ ವೈಷ್ಣವದೇವಾಲಯ ಗಳೊಂದಿಗೆ ಈ ಕ್ಷೇತ್ರ ಶೋಭಾಯಮಾನವಾಗಿದೆ. ಶ್ರೀರಂಗಂನಂತೆಯೇ ಕಾವೇರಿ ಮತ್ತು ಕೊಲ್ಲಡ ಎಂಬ ನದಿಗಳ ನಡುವೆ, ಮೂರು ಎಕರೆಗಳ ವಿಸ್ತೀರ್ಣದೊಂದಿಗೆ,ಮೂರು ಪ್ರಾಕಾರಗಳೊಂದಿಗೆ ಮತ್ತು ನೂರಾ ಐವತ್ತು ಅಡಿಗಳ ಉತ್ತುಂಗವಾದ ಗೋಪುರವನ್ನು ಒಳಗೊಂಡಿದೆ. ಈ ಕ್ಷೇತ್ರವು ಅದ್ಭುತವಾದ ಪ್ರಕೃತಿ ಸೌಂದರ್ಯದಿಂದ ರಾರಾಜಿಸುತ್ತಿದೆ.

ಈ ದಿವ್ಯ ದೇಶದಲ್ಲಿ ನೆಲಸಿರುವ ಮೂಲದೇವರು"ಆರಾವ ಮುದಾಳ್ವಾನ್" ಎಂದು ಕರೆಯಲ್ಪಡುತ್ತಿದ್ದಾನೆ ಹಾಗೂ ಉತ್ಸವ ಮೂರ್ತಿಯನ್ನು "ಸಾರಂಗಪಾಣಿ" ಅಮ್ಮನವರು "ಕೋಮಲವಲ್ಲಿ" ಎಂದು ಕರೆಯು ತ್ತಾರೆ. ಭಕ್ತರು ಈ ದೇವಾಲಯವನ್ನು ಸಾರಂಗಪಾಣಿ ದೇವಾಲಯ ಎಂದು ಕರೆಯುತ್ತಾರೆ.ಉತ್ಸವ ಮೂರ್ತಿಯಾದ ಸಾರಂಗ ಪಾಣಿಯು ಒಂದು ಕೈಯಲ್ಲಿ ಧನಸ್ಸನ್ನು ಹಿಡಿದು ಎಲ್ಲರಿಗೂ ದರ್ಶನ ಭಾಗ್ಯವನ್ನು ಕರುಣಿಸುತ್ತಿದ್ದಾನೆ. ಶ್ರೀರಂಗಂನಲ್ಲಿರುವಂತೆಯೇ ಈ ಸ್ಥಳದಲ್ಲಿ ಮೂಲ ಮೂರ್ತಿ ಆದಿ ಶೇಷನ ಮೇಲೆ ಶಯನಿಸುತ್ತಾ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಆದರೆ ಸ್ವಾಮಿಯ ಆ ತಿರುಮುಖಮಂಡಲವು ಸ್ವಲ್ಪ ಮೇಲಕ್ಕೆ ನೋಡುತ್ತಿರುವಂತೆ ಕಂಡು ಬರುತ್ತದೆ. ಅಂದರೆ ತಿರುಮಳಿಶೈ ಆಳ್ವಾರ್ ಅವರನ್ನು ಅನುಗ್ರಹಿಸಿ ದಂತೆ ಉತ್ತಾನಶಾಯಿಯಾಗಿ ಸ್ವಾಮಿಯು ನೆಲೆಸಿದ್ದಾನೆ.

ಗರ್ಭಗುಡಿಯಲ್ಲಿ ಒಂದೇ ಕಲ್ಲಿನಲ್ಲಿ ಹಾಗೇ ರಥಬಂಧದೊಂದಿಗೆ ಆನೆಗಳು, ಕುದುರೆಗಳು ಇವೆಲ್ಲವೂ ಎಳೆದುಕೊಂಡು ಹೋಗುತ್ತಿರುವಂತೆ ಅತ್ಯದ್ಭುತವಾದ ಶಿಲ್ಪಕಲಾ ಚಾತುರ್ಯವೂ ಕಂಡು ಬರುತ್ತದೆ. ಎರಡು ಬಾಗಿಲುಗಳೊಂದಿಗೆ ಅಂದರೆ ದಕ್ಷಿಣಾಯನವಾಶಲ ಮತ್ತು ಉತ್ತರಾಯನ ವಾಶಲ ಎಂದು ಎರಡು ದ್ವಾರಗಳಿರುತ್ತವೆ. ದಕ್ಷಿಣಾಯನದಲ್ಲಿ ದಕ್ಷಿಣದತ್ತ ಇರುವ ದ್ವಾರದಮೂಲಕ ಭಗವಂತನನ್ನು ಸೇವಿಸಬೇಕು. ಉತ್ತರಾಯಣ ದಲ್ಲಿ ಉತ್ತರದ್ವಾರದ ಮೂಲಕ ಭಗವಂತನನ್ನು ದರ್ಶಿಸಬೇಕು. ರಥಬಂಧ ಎನ್ನುವುದನ್ನು ವಿಶೇಷವಾದ ಪ್ರಕ್ರಿಯೆಯೊಂದಿಗೆ ತಿರುಮಂಗೈ ಆಳ್ವಾರ್ ಅವರು ಒಂದು ಪ್ರಬಂಧವನ್ನು ರಚಿಸಿದ್ದಾರೆ. ಸ್ಥಳ ಪುರಾಣದ ಪ್ರಕಾರ ಬ್ರಹ್ಮನು ಲೋಕವನ್ನು ಸೃಷ್ಟಿಸುವ ಸಂದರ್ಭದಲ್ಲಿ ಅದಕ್ಕೆ ಸರಿಯಾದ ಸಾಮಾಗ್ರಿಯನ್ನು ಮತ್ತು ಅಮೃತವನ್ನು ಒಂದು ಕಲಶದಲ್ಲಿ ಇರಿಸಿದಾಗ, ಮಹಾಪ್ರಳಯದ ಪ್ರವಾಹದಲ್ಲಿ ಆ ಕಲಶವು ಹಾಗೇ ಮುಂದಕ್ಕೆ ಕೊಚ್ಚಿಕೊಂಡು ಹೋಯಿತಂತೆ. ಆ ಕಲಶವು ಶಿವನು ಹೊಡೆದ ಬಾಣಗಳಿಂದ ಒಡೆದುಹೋಗಿತ್ತಂತೆ,ಆದ್ದರಿಂದ, ಅದಕ್ಕೆ "ಕುಡಮೂಕ್ಕು" ಎಂದು ಕರೆಯುತ್ತಾರೆ, ಕಾಲಕ್ರಮೇಣ ಈ ಕ್ಷೇತ್ರಕ್ಕೆ "ಕುಂಭಕೋಣಂ" ಎಂಬ ಹೆಸರು ಬಂತೆಂದು ಪುರಾಣವು ತಿಳಿಸುತ್ತಿದೆ.

### ಎರಡನೆಯ ಚರಿತ್ರೆ

ಒಮ್ಮೆ ಮಹರ್ಷಿಗಳೆಲ್ಲರೂ ಸೇರಿ ಲೋಕಕಲ್ಯಾಣಕ್ಕಾಗಿ ಸುಮಾರು ಹನ್ನೆರಡು ವರ್ಷಗಳ ಕಾಲ ಒಂದು ಯಾಗವನ್ನು ಆಚರಿಸಿದರು. ಯಾಗದ ಹವಿರ್ಭಾಗವನ್ನು ಯಾರಿಗೆ ಸಮರ್ಪಿಸಬೇಕು?ಎಂದು ಎಲ್ಲರೂ ಆಲೋಚಿಸುತ್ತಿರುವಾಗ, ಭೃಗುಮಹರ್ಷಿಯು ತಾನು ಈ ಸಂದೇಹವನ್ನು

ನಿವೃತ್ತಿ ಮಾಡುತ್ತೇನೆಂದು ಹೇಳಿ ಹೊರಟ. ಮೊದಲು ಬ್ರಹ್ಮಲೋಕಕ್ಕೆ ಹೋದ, ಅಲ್ಲಿ ಆತನಿಗೆ ಸಿಗಬೇಕಾದ ಸ್ವಾಗತ ದೊರೆಯಲಿಲ್ಲ, ನಂತರ ಕೈಲಾಸಕ್ಕೆ ಹೋದ ಅಲ್ಲಿಯೂ ಆ ಮಹರ್ಷಿಗೆ ನಿರಾಸೆಯೇ ಎದಿರಾಯಿತು. ನಂತರ ಶ್ರೀವೈಕುಂಠಕ್ಕೆ ಹೋದ, ಅಲ್ಲಿನ ಸನ್ನಿವೇಶವನ್ನು ನೋಡಿ ಕೋಪ ದಿಂದ ನೇರವಾಗಿ ಹೋಗಿ ಶ್ರೀಮನ್ನಾರಾಯಣನ ವಕ್ಷಃಸ್ಥಳಕ್ಕೆ ತನ್ನ ಕಾಲಿನಿಂದ ಒದೆದ. ಅವೆಲ್ಲವನ್ನೂ ನೋಡುತ್ತಿದ್ದ ಮಹಾಲಕ್ಷ್ಮಿಯು ತನಗೆ ಇಷ್ಟವಾದ ವಕ್ಷಃಸ್ಥಳವನ್ನು ಒದ್ದ ಆ ಮಹರ್ಷಿಯನ್ನು ಶ್ರೀಹರಿಯು ಸಮಾಧಾನ ಪಡಿಸುತ್ತಾ, ಆತನನ್ನು ಉಪಚರಿಸಿದ್ದನ್ನು ತನಗಾದ ಅವಮಾನವೆಂದು ಭಾವಿಸಿ, ಲಕ್ಷ್ಮೀದೇವಿಯು ವೈಕುಂಠದಿಂದ ಹೊರಟು ಈ ಕ್ಷೇತ್ರಕ್ಕೆ ಬಂದಳಂತೆ, ಕೂಡಲೆ ಇಲ್ಲಿ ಒಂದು ಬಂಗಾರದ ''ಪೊತ್ತಾಮರೈ''ಎಂಬ ಪುಷ್ಕರಿಣಿಯಲ್ಲಿ ಒಂದು ಚಿಕ್ಕ ಮಗುವಿನಂತೆ ಅವತರಿಸಿ, ಇಲ್ಲಿಯೇ ತಪಸ್ಸು ಮಾಡುತ್ತಿದ್ದಳಂತೆ ತಟಾಕದಲ್ಲಿದ್ದ ಆ ಮಗುವನ್ನು ನೋಡಿದ ಹೇಮ ಮಹರ್ಷಿಯು ಆ ಮಗುವನ್ನು ತನ್ನ ಮನೆಗೆ ಕರೆದೊಯ್ದು ಕೋಮಲವಲ್ಲಿ ಎಂದು ನಾಮಕರಣ ಮಾಡಿ, ಆ ಹುಡುಗಿಗೆ ವಿವಾಹದ ವಯಸ್ಸಾದಾಗ ವೈದಿಕವಾಗಿ ಶಯನಭಂಗಿಯಲ್ಲಿದ್ದ ಆರಾವಮುದ ಸ್ವಾಮಿಯೊಂದಿಗೆ ವಿವಾಹವನ್ನು ನೆರವೇರಿಸಿದನಂತೆ,ಇದು ಒಂದು ಸ್ಥಳ ಪುರಾಣ, ಈ ಸ್ವಾಮಿಗೆ ಆಳ್ವಾನ್ ಎಂಬ ಹೆಸರು ಬರುವುದಕ್ಕೆ ಕಾರಣವೇನೆಂದರೆ, ಒಂಭತ್ತನೆಯ ಶತಮಾನದಲ್ಲಿ ಶ್ರೀಮನ್ನಾಥಮುನಿಗಳು ದಿವ್ಯದೇಶಗಳ ಯಾತ್ರೆಯನ್ನು ಮಾಡುತ್ತಾ ಈ ದಿವ್ಯ ಕ್ಷೇತ್ರಕ್ಕೆ ಬಂದರು. ಇಲ್ಲಿ ಇರುವಂತಹಾ ಸ್ವಾಮಿಯನ್ನು ದರ್ಶಿಸುತ್ತಿರುವಾಗ,ಆ ಸಮಯದಲ್ಲಿ ಶ್ರೀವೈಷ್ಣವರು ಒಂದು ಪಾಶುರವನ್ನು ರಚಿಸಿದರು, ಇದು ಸಾವಿರ ಪಾಶುರಗಳೊಂದಿಗೆ ಕೂಡಿದೆ ಎಂದು ಹೇಳಿದಾಗ, ಆಗ ನಾಥ ಮುನಿಗಳು ಉಳಿದ ಪಾಶುರಗಳೆಲ್ಲಿ? ಎಂದು ಕೇಳಿದಾಗ, ನಮಗೆ ಈ ವಿಷಯ ತಿಳಿದಿಲ್ಲ. ಎಂದು ಅಲ್ಲಿದ್ದವರು ಒಕ್ಕೊರಲಿನಿಂದ ಹೇಳಿದರು. ಆಗ ನಾಥ ಮುನಿಯ ಕನಸಿನಲ್ಲಿ ಸ್ವಾಮಿಯು ಕಾಣಿಸಿಕೊಂಡು, ಆಳ್ವಾರ್ ತಿರುನಗರಿಗೆ ಹೋಗಬೇಕೆಂದು ಆದೇಶಿಸಿದರಂತೆ ಅದರಂತೆ ನಾಥ ಮುನಿಗಳು ಅಲ್ಲಿಂದ ಹೊರಟು ನಮ್ಮಾಳ್ವಾರರ ಶಿಷ್ಯನಾದ ಮಧುರ ಕವಿ ಆಳ್ವಾರರ ''ಕಣ್ಣಿನುಣ್ ಶಿರುತ್ತಾಂಬು'' ಎಂಬ ಪ್ರಬಂಧವನ್ನು ೧೨ ಸಾವಿರ ಬಾರಿ ಜಪಿಸಿ ಯೋಗದಶೆಯಲ್ಲಿ ನಮ್ಮಾಳ್ವಾರರ ಅನುಗ್ರಹವನ್ನು ಪಡೆದು. ೪೦೦೦ ಪಾಶುರಗಳನ್ನು ರಾಗ, ತಾಳ ಬದ್ಧವಾಗಿ ಈ ಲೋಕಕ್ಕೆ ಸಮರ್ಪಿಸಿದರು. ಈ ಕಾರಣದಿಂದಾಗಿ ಆರಾವಮುದ ಸ್ವಾಮಿಯಾದ ಆದ್ದರಿಂದ ಇವರಿಗೆ ಆರಾವಮುದಾಳ್ವಾನ್ ಎಂಬ ಹೆಸರು ಬಂತು. ಈ ಸಾರಂಗ ಪಾಣಿಯನ್ನು ಭಕ್ತ ಪರಾಧೀನ ಎಂದು ಕರೆಯುತ್ತಾರೆ. ಈ ಸ್ವಾಮಿಗೆ ಲಕ್ಷ್ಮೀನಾರಾಯಣ ಎಂಬ ಭಕ್ತನಿದ್ದ. ಅವನು ತನ್ನ ಸಂಪಾದನೆಯಿಂದ ಅದ್ಭುತವಾದ ರಾಜ ಗೋಪುರವನ್ನು ಕಟ್ಟಿಸಿದನಂತೆ.ಆತ ವಿವಾಹವನ್ನು ಮಾಡಿಕೊಳ್ಳದೇ ಈ ಸ್ವಾಮಿಯ ಸೇವೆಗೆ ಅಂಕಿತವಾಗಿ 150 ಅಡಿಗಳ ಗಂಭೀರವಾದ ರಾಜ ಗೋಪುರವನ್ನು ಕಟ್ಟಿಸಿದ. ಕೆಲವು ವರ್ಷಗಳ ನಂತರ ಈ ಭಕ್ತನು ಇಹ ಲೋಕವನ್ನು ತ್ಯಜಿಸಿದನಂತೆ ಆದರೆ ಆತನ ಅಂತ್ಯ ಸಂಸ್ಕಾರವನ್ನು ಮಾಡಲು ಯಾರು ಇರಲಿಲ್ಲವಂತೆ ಆಗ ಆರಾವಮುದ ಸ್ವಾಮಿಯು ಅರ್ಚಕನನ್ನು ಆದೇಶಿಸಿ, ತನ್ನ ಕೈಯಲ್ಲಿ ದರ್ಭೆಯನ್ನು ಇರಿಸಿಕೊಂಡು, ಪ್ರಾಚೀನಾವೀತಿಯಾಗಿ ಯಜ್ಞೋಪವೀತವನ್ನು ಧರಿಸಿ, ತನ್ನ ಭಕ್ತನಿಗೆ ಅಂತ್ಯ ಸಂಸ್ಕಾರವನ್ನು ನೆರವೇರಿಸಿದನೆಂದು ಹೇಳುತ್ತಾರೆ. ಮರುದಿನ ಎಲ್ಲರೂ ಸ್ವಾಮಿಯನ್ನು ದರ್ಶಿಸಲು ಹೋದಾಗ, ಆ ಸ್ವಾಮಿಯ ಕೈಯಲ್ಲಿ ದರ್ಭೆಯ ಪವಿತ್ರವಿತ್ತು. ಸ್ವಾಮಿಯ ವಸ್ತ್ರಗಳು ಒದ್ದೆಯಾಗಿದ್ದುವು,ಯಜ್ಞೋಪವೀತವು ಬದಲಾಗಿತ್ತು. ಇವೆಲ್ಲವನ್ನೂ ನೋಡಿದ ಕೂಡಲೇ ಸಾಕ್ಷಾತ್ತು ಭಗವಂತನು ಸ್ವತಃ ಸ್ವಯಮೇವ ಕಾರಯತಿ ಎಂದು ಹೇಳಿದ ರೀತಿಯಲ್ಲಿ ಭಕ್ತನನ್ನು ಕರುಣಿಸಿದ್ದರು ಎಂದು ಇಂದಿಗೂ ತಮಿಳ ತಿಂಗಳ ಐಪ್ಪಸಿ ಅಮಾ ವಾಸ್ಯೆಯಂದು (ದೀಪಾವಳಿ ಅಮಾವಾಸ್ಯೆ) ಯ ದಿನ ಶ್ರಾದ್ಧವನ್ನು ಭಗವಂತನೇ ಮಾಡಿಸುತ್ತಿದ್ದಾನೆಂದು ಐತಿಹ್ಯವಿದೆ. ಇದಕ್ಕಿಂತಲೂ ನಿದರ್ಶನವು ಏನು ಬೇಕಾಗಿದೆ? ಭಗವಂತನು ಭಕ್ತಪರಾಧೀನನು ತಾನೇ!





ಈ ಸಾರಂಗಪಾಣಿಯು ಅಮೃತಮಯನಾಗಿದ್ದು, ಆರಾವಮುದನ್ ಎಂಬ ಹೆಸರಿನಿಂದ ಕಂಗೊಳಿಸುತ್ತಿದ್ದಾನೆ, ಅಮ್ಮನವರು ಕೋಮಲವಲ್ಲಿ ಎಂಬ ಹೆಸರಿನಲ್ಲಿ ಪೂಜೆಯನ್ನು ಸ್ವೀಕರಿಸುತ್ತಿದ್ದಾಳೆ. ಪುಣ್ಯಕರವಾದ ತೀರ್ಥ ಹೇಮ ಪುಷ್ಕರಣಿ, ಕಾವೇರಿ ಕೊಲ್ಲಿಡಂ ನದಿಗಳ ಮಧ್ಯ ಭಾಗ,ಭಾಸ್ಕರ ಕ್ಷೇತ್ರ, ವಿಮಾನ ವೈದಿಕ ವಿಮಾನ ಇಲ್ಲಿ ಪೂಜಾ ಕೈಂಕರ್ಯಗಳೆಲ್ಲಾ ಪಾಂಚರಾತ್ರಾಗಮದ ಪ್ರಕಾರವೇ ನಡೆಸುತ್ತಾರೆ.

ಶ್ರೀ ಭೂತ ಮಹೋದಾಖ್ಯಾನ ಭಕ್ತಿ ಸಾರ ಶಠಾರಿಭಿಃ
ವಿಷ್ಣು ಚಿತ್ತ ಕಲಿಘ್ನಾಖ್ಯಾಂಗೋದಾಸ್ತುತಿ ಪರಿಷ್ಕೃತಃ॥

ಪೂದತ್ತಾಳ್ವಾರ್, ಪೇಯಾಳ್ವಾರ್,ತಿರುಮಳಿಶೈಆಳ್ವಾರ್, ನಮ್ಮಾಳ್ವಾರ್, ಪೆರಿಯಾಳ್ವಾರ್, ಆಂಡಾಳ್ ಮತ್ತು ತಿರುಮಂಗೈ ಆಳ್ವಾರ್ ಈ ಸ್ವಾಮಿಗೆ ಮಂಗಳಾಶಾಸನವನ್ನು ರಚಿಸಿದ್ದಾರೆ. ಇಂತಹಾ ಕೋಮಲವಲ್ಲಿ ನಾಯಿಕಾ ಸಮೇತನಾದ ಆರಾವಮುದಸ್ವಾಮಿಯನ್ನು ದರ್ಶಿಸಿದವರು ಅವರಿಗೆ ಸಕಲ ವಿದ್ಯೆಗಳೂ ಪ್ರಾಪ್ತಿಯಾಗುತ್ತದೆ. ಸಕಲವಿಧವಾದ ಶ್ರೇಯಸ್ಸನ್ನು ಹೊಂದಿ ಇಹಪರಲೋಕದಲ್ಲಿ ಸುಖವಾಗಿ ಬಾಳುತ್ತಾರೆ.

## ಆರೋಗ್ಯ ಪ್ರದಾಯಿನಿ



# ಬಾದಾಮಿ

- ತೆಲುಗು ಮೂಲ : ಡಾ|| ಸಿ. ಮಧುಸೂಧನ್ ವರ್ಮ
90007 61390
- ಅನುವಾದ - ಡಿ .ಎಸ್. ಬದ್ರಿನಾಥ್

ಪ್ರಕೃತಿ ಮಾತೆ ಪ್ರಸಾದಿಸಿದ ರುಚಿಕರವಾದ ಅದ್ಭುತ ಆಹಾರ ಔಷಧಿ ಬಾದಾಮಿ ಬೀಜ. ವಿವಿಧ ಬಗೆಯ ಆಹಾರ ಪೋಷಕಾಂಶಗಳನ್ನು ಹೊಂದಿರುವ ವಿವಿಧ ವ್ಯಾಧಿಗಳ ನಿವಾರಣೆಗೆ, ನಿಯಂತ್ರಣಕ್ಕೆ ಈ ಬಾದಾಮಿ ಬೀಜ ಉಪಯುಕ್ತವಾಗಿದೆ.ಅಡುಗೆ ಮನೆಯ ಆಹಾರ ತಯಾರಿಕೆಯಲ್ಲಿ, ಮಿಠಾಯಿಗಳ ತಯಾರಿಕೆಯಲ್ಲಿ ಬಾದಾಮಿ ಬೀಜವನ್ನು ಇಡೀಯಾಗಿ, ಹುರಿದು ತುಂಡುಗಳನ್ನಾಗಿ ಮಾಡಿ,ಪುಡಿ ಮಾಡಿ ಉಪಯೋಗಿಸುತ್ತಾರೆ. ಆಂಗ್ಲದಲ್ಲಿ 'ಆಲ್ಮಂಡ್' ಎಂದು ವ್ಯವಹರಿಸಲ್ಪಡುವ ಈ ಬಾದಾಮಿ ವರ್ಷವೆಲ್ಲಾ ಲಭ್ಯವಾಗಿದ್ದು ನಾವು ಅನುಭವಿಸುವ ಹಲವಾರು ಅನಾರೋಗ್ಯಗಳಿಗೆ ಔಷಧಿಯಾಗಿ ಪರಿಣಮಿಸುತ್ತದೆ.

**ಗಮನಕ್ಕೆ :** ಬಾದಾಮಿ ಬೀಜವನ್ನು ಬಿಸಿ ನೀರಿನಲ್ಲಿ ಎರಡು ಗಂಟೆ ನೆನೆಸಿ, ಸಿಪ್ಪೆ ತೆಗೆದು, ಒಳಗಿನ ಪಪ್ಪನ್ನು ಒಣಗಿಸಿ ಸದ್ವಿನಿಯೋಗ ಮಾಡಿಕೊಳ್ಳುವುದರಿಂದ ಪರಿಪೂರ್ಣವಾದ ಅದರ ಔಷಧೀಯ ಗುಣಗಳು ನಮ್ಮ ಆರೋಗ್ಯಕ್ಕೆ ಶ್ರೀರಾಮ ರಕ್ಷೆಯಾಗಿ ಉಪಯೋಗಿಸಲ್ಪಡುತ್ತದೆ.

**ಉತ್ತಮ ಪಚನಕ್ಕೆ:** ಬಾದಾಮಿ ಬೀಜದ ಪುಡಿ, ಒಣದ್ರಾಕ್ಷಿ ಸ್ಪಟಿಕ ಬೆಲ್ಲದ ಪುಡಿ, ಒಂದೊಂದು 10 ಗ್ರಾಂ ಸುನಾಮುಖಿ ಪುಡಿ 30 ಗ್ರಾಂ ತೆಗೆದುಕೊಂಡು ತಕ್ಕಷ್ಟು ಜೇನಿನಲ್ಲಿ ಕಲಿಸಿ, ಮಿಕ್ಸಿಯಲ್ಲಿ ಹಾಕಿ ಇಲ್ಲವೇ ಮೆತ್ತಗೆ ಕುಟ್ಟಿ, ಶೇಖರಿಸಿಟ್ಟುಕೊಂಡು ದಿನವೂ ರಾತ್ರಿ ಮಲಗುವಾಗ 5-10 ಗ್ರಾಂ ಔಷಧಿಯನ್ನು ಚಪ್ಪರಿಸಿ ನುಂಗಿ ಒಂದು ಕಪ್ಪು ಉಗುರು ಬೆಚ್ಚಗಿನ ನೀರನ್ನು ಸೇವಿಸುತ್ತಿದ್ದರೆ ಒಳ್ಳೆಯ ಫಲಿತಾಂಶ ಒದಗುತ್ತದೆ.

**ಕಪ್ಪು ಮಚ್ಚೆಗೆ:** ಬಾದಾಮಿ ಬೀಜದ ಪುಡಿಯಲ್ಲಿ ತಕ್ಕಷ್ಟು ಮೂಲಂಗಿ ರಸ ಹಾಕಿ ಲೇಪಿಸಿ ಗಂಟೆ ಹೊತ್ತು ತಡೆದು ತೊಳೆದುಕೊಂಡರೆ ಒಳ್ಳೆಯ ಫಲಿತ ಉಂಟಾಗುತ್ತದೆ.

**ಶೃಂಗಾರ ಸಾಮರ್ಥ್ಯಕ್ಕೆ:** ದಿನವೂ ರಾತ್ರಿ ಮಲಗುವಾಗ 50 ಮಿ.ಲೀ. ನೀರಿನಲ್ಲಿ ಒಂದು ಗ್ರಾಂ ಬಾದಾಮಿ ಬೀಜದ ಪುಡಿ, ಒಂದು ಟೀಸ್ಪೂನ್ ತುಪ್ಪ ಕಲಿಸಿ ಕುದಿಸಿ ಅದರಲ್ಲಿ 100 ಮಿ.ಲೀ. ಹಾಲು ಒಂದು ಗ್ರಾಂ ಜಾಜಿಕಾಯಿ ಪುಡಿ, ಒಂದು ಟೀ ಸ್ಪೂನ್ ಬೆಲ್ಲ ಇಲ್ಲವೇ ಸ್ಪಟಿಕ ಬೆಲ್ಲದ ಪುಡಿ ಕಲಿಸಿ ಸೇವಿಸುತ್ತಿದ್ದರೆ ಶೃಂಗಾರ ಸಾಮರ್ಥ್ಯ ಬೆಳವಣಿಗೆಯಾಗುತ್ತದೆ.

**ಸೊಂಟ ನೋವು ಕ್ರಮಿಸಲು :** ಬಾದಾಮಿ ಬೀಜದ ಪುಡಿ,ಗಸೆಗಸೆಯನ್ನು ಪುಡಿಮಾಡಿದ್ದು ಸ್ಪಟಿಕ ಬೆಲ್ಲದ ಪುಡಿ, ಸಮಾನವಾಗಿ ತೆಗೆದುಕೊಂಡು ಕಲಿಸಿ, ದಿನವೂ ಎರಡು ಬಾರಿ ಬಾರಿಯೊಂದಕ್ಕೆ 100 ಮಿ.ಲೀ. ನೀರಿನಲ್ಲಿ 5 ಗ್ರಾಂ ಪುಡಿ ಕಲಿಸಿ ಸೇವಿಸುತ್ತಿದ್ದರೆ ಸೊಂಟ ನೋವಿನ ಸಮಸ್ಯೆ ಕಡಿಮೆಯಾಗುತ್ತದೆ.

**ಅಮಿತ ಉಷ್ಣದಿಂದುಟಾಗುವ ಕೆಮ್ಮಿಗೆ :** ದಿನವೂ ಎರಡು ಬಾರಿ ಬಾರಿಯೊಂದಕ್ಕೆ 8 ಬಾದಾಮಿ ಬೀಜಗಳನ್ನು ಕುಟ್ಟಿ ಅದರಲ್ಲಿ ತಕ್ಕಷ್ಟು ಸ್ಪಟಿಕ ಬೆಲ್ಲದ ಪುಡಿ, ಬೆಣ್ಣೆ ಕಲಿಸಿ ಸೇವಿಸುತ್ತಿದ್ದರೆ ಶೀಘ್ರದಲ್ಲಿ ಸತ್ವಲಿತ ಉಂಟಾಗುತ್ತದೆ.

**ನೇತ್ರ ವ್ಯಾಧಿಗಳಿಗೆ :** ಬಾದಾಮಿ ಬೀಜದ ಪುಡಿ 100 ಗ್ರಾಂ ಗಸೆಗಸೆಯನ್ನು ಕುಟ್ಟಿ ಮಾಡಿದ ಪುಡಿ 50 ಗ್ರಾಂ ಕರಿಮೆಣಸಿನ ಪುಡಿ 25 ಗ್ರಾಂ ಸ್ಪಟಿಕ ಬೆಲ್ಲದ ಪುಡಿ 175 ಗ್ರಾಂ ಶುದ್ಧವಾದ ಆಕಳ ತುಪ್ಪ 100 -200 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ ಒಂದು ಟೀ ಸ್ಪೂನ್ ಔಷಧವನ್ನು 50 ಮಿ.ಲೀ. ಬಿಸಿಹಾಲಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ನೇತ್ರ ದೋಷಗಳು ತೊಲಗಿ ಕಣ್ಣಿನ ದೃಷ್ಟಿ ಹರಿತವಾಗುತ್ತದೆ.

**ಗರ್ಭಿಣಿಯರ ಆರೋಗ್ಯಕ್ಕಾಗಿ :** 100 ಗ್ರಾಂ ಬಾದಾಮಿ ಬೀಜದ ಪುಡಿ, 50 ಗ್ರಾಂ ಒಣ ಖರ್ಜೂರದ ಪುಡಿ, ಕಿಸ್‌ಮಿಸ್ 10 ಗ್ರಾಂ, ಏಲಕ್ಕಿ ಪುಡಿ ಕಲಿಸಿ ಕುಟ್ಟಿ ಶೇಖರಿಸಿಟ್ಟುಕೊಂಡು ದಿನವೂ ಉದಯಕಾಲ.ಸಂಧ್ಯಾಕಾಲದಲ್ಲಿ ಬಾರಿಯೊಂದಕ್ಕೆ 100 ಮಿ.ಲೀ. ಉಗುರು ಬೆಚ್ಚಗಿನ ಹಾಲಿನಲ್ಲಿ ಒಂದು ಟೀ ಸ್ಪೂನ್ ಪುಡಿ ಕಲಿಸಿ ಸೇವಿಸುತ್ತಿದ್ದರೆ ಗರ್ಭಿಣಿಯರಲ್ಲಿನ ಅಪೌಷ್ಟಿಕತೆ ತೊಲಗುವುದರೊಂದಿಗೆ ಶಿಶುವಿನ ಬೆಳವಣಿಗೆ ಚೆನ್ನಾಗಿ ಉಂಟಾಗಿ ಸುಖ ಪ್ರವಚನವುಂಟಾಗುತ್ತದೆ.

**ನಿದ್ರಾ ಹೀನತೆಗೆ:** ರಾತ್ರಿ ಮಲಗುವಾಗ 100 ಮಿ.ಲೀ. ಉಗುರುಬೆಚ್ಚಗಿನ ಹಾಲಿನಲ್ಲಿ 1-2 ಗ್ರಾಂ ಬಾದಾಮಿ ಬೀಜದ ಪುಡಿ, ಒಂದು ಗ್ರಾಂ ಜಾಜಿಕಾಯಿ ಚೂರ್ಣ ಕಲಿಸಿ ಸೇವಿಸುತ್ತಿದ್ದರೆ ಗಾಢವಾದ ನಿದ್ರೆ ಬರುತ್ತದೆ.

**ನರಬಲಹೀನತೆಗೆ:** ಬಾದಾಮಿ ಬೀಜದ ಪುಡಿ 100 ಗ್ರಾಂ, ಕಲ್ಲುಸಕ್ಕರೆ 100ಗ್ರಾಂ ಕರಿ ಮೆಣಸಿನ ಪುಡಿ 10 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಒಂದೆರಡು ಬಾರಿ ಬಾರಿಯೊಂದಕ್ಕೆ 100 ಮಿ.ಲೀ. ಉಗುರುಬೆಚ್ಚಗಿನ ಹಾಲಿನಲ್ಲಿ ಅರ್ಧ ಟೀ ಸ್ಪೂನ್ ಪುಡಿ ಕಲಿಸಿ ಸೇವಿಸುತ್ತಿದ್ದರೆ ನರಗಳ ಬಲಹೀನತೆ ಕಡಿಮೆಯಾಗಿ ನೀರಸ - ನಿತ್ರಾಣವಿಲ್ಲದೇ ಆರೋಗ್ಯವಾಗಿರುತ್ತದೆ.

**ವೀರ್ಯಾಕಣಗಳ ಸಂಖ್ಯೆ ಜಾಸ್ತಿಯಾಗಲು :** ದಿನವೂ ಒಂದು ಬಾರಿ 100 ಮಿ.ಲೀ. ನೀರಿನಲ್ಲಿ ಅರ್ಧ ಟೀ ಸ್ಪೂನ್ ಬಾದಾಮಿ ಬೀಜದ ಪುಡಿ ಒಂದು ಸ್ಪೂನ್, ಆಯುರ್ವೇದ ಔಷಧಾಲಯಗಳಲ್ಲಿ ಲಭಿಸುವ ಅಶ್ವಗಂಧ ಚೂರ್ಣ, ಕಲ್ಲುಸಕ್ಕರೆ ಕಲಿಸಿ ಮರಳಿಸಿ, ಕೆಳಗಿಳಿಸಿ 100 ಮಿ.ಲೀ. ಕಾಯಿಸಿದ ಹಾಲು ಕಲಿಸಿ ಸೇವಿಸುತ್ತಿದ್ದರೆ ವೀರ್ಯಕಣಗಳ ಸಂಖ್ಯೆ ವೃದ್ಧಿಗೊಂಡು ವೀರ್ಯ ಕಣಗಳು ಚೈತನ್ಯಯುತವಾಗಿ ತಯಾರಾಗಿ ಸಂತಾನಾವಕಾಶಗಳು ಹೆಚ್ಚಾಗುತ್ತದೆ.

**ತಲೆನೋವಿಗೆ :** ಬಾದಾಮಿ ಬೀಜ, ದಾಲ್ಚಿನ್ನಿ ಚಕ್ಕೆ,ಲವಂಗ ಚೂರ್ಣಗಳನ್ನು ಸಮಾನವಾಗಿ ಕಲಿಸಿಟ್ಟುಕೊಂಡು ತಕ್ಕಷ್ಟು ಪುಡಿಯನ್ನು ತಕ್ಕಷ್ಟು ಹಾಲಿನಲ್ಲಿ ಕಲಿಸಿ ಪೇಷ್ಟಿನ ತರಹ ಮಾಡಿ ಹಣೆ, ತಲೆಗೆ ಹಚ್ಚಿ ಅರ್ಧ ಗಂಟೆ ತಡೆದು ತೊಳೆದರೆ ತಕ್ಷಣ ತಲೆನೋವಿನಿಂದ ಉಪಶಮನ ಪಡೆಯಬಹುದು.



# ಆಗಸ್ಟ್ ತಿಂಗಳ
# ರಾಶಿ ಫಲಗಳು


ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್




### ಮೇಷ

ವೃತ್ತಿ ಉದ್ಯೋಗಗಳಲ್ಲಿ ನಿಮಗಿಂತಲೂ ಮೇಲಿನವರಿಂದಾಗಿ ಸಮಸ್ಯೆಗಳು ಉತ್ಪನ್ನವಾಗುವ ಅವಕಾಶಗಳಿವೆ.ನಿಮ್ಮ ಸಹೋದ್ಯೋಗಿಗಳೊಡನೆ, ಸ್ನೇಹಿತರೊಡನೆ,ನಿಮ್ಮ ಒಡಹುಟ್ಟಿದವರೊಡನೆ,ತಂದೆ ತಾಯಿಯ ರೊಡನೆ ಆವಾಹಗನೆಯಿಂದಾಗಿ ಸಮಸ್ಯೆಗಳು, ಕೆಲಸದೊತ್ತಡ ಜಾಸ್ತಿಯಾಗಿ ಒತ್ತಡಕ್ಕೆ ಒಳಗಾಗುವ ಅವಕಾಶ ಸಹ ಇದೆ. ಇತರರೊಂದಿಗೆ ಸಹೃದ್ಭಾವನೆಯ ವಾತಾವರಣ ದಲ್ಲಿ ವಿಚಾರ ವಿನಿಮಯ ಮಾಡಿಕೊಂಡರೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

### ವೃಷಭ

ಮನೆಯಲ್ಲಿ ಮಂಗಳ ಕಾರ್ಯಗಳುಂಟಾಗುವ ಸೂಚನೆಗಳು ಕಾಣುತ್ತವೆ. ನಿಮ್ಮ ಒಡಹುಟ್ಟಿದವರೊಂದಿಗೆ ಬೇಧಭಾವಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಿ ಮಾನಸಿಕ ಒತ್ತಡಕ್ಕೊಳಗಾಗುವಿರಿ. ಭೂಮಿ ಅಥವಾ ಆಸ್ತಿ ಖರೀದಿಯ ವಿಷಯದಲ್ಲಿ ಹಲವು ಪ್ರತಿಷ್ಠೆ ಭಂಗಗಳು ಉಂಟಾಗಬಹುದು. ಮಾತೃಮೂಲದಿಂದ ಅನಾರೋಗ್ಯ ಅಥವಾ ಕಲಹಗಳಿಗೆ ದಾರಿಯಾಗಬಹುದು. ಪ್ರಸ್ತುತ ಯಾವ ವ್ಯಾಪಾರ ಲೇವಾದೇವಿಗಳು ಕೈಗೂಡಲಾರುವು.

### ಮಿಥುನ

ದ್ವಿತೀಯ ಸ್ಥಾನದ ರವಿ ಆಕಸ್ಮಿಕ ಕೋಪ ಹಾಗೂ ನಾಲಿಗೆಯನ್ನು ಹತೋಟಿಯಲ್ಲಿ ರಿಸಿಕೊಳ್ಳುವುದು ಒಳಿತು. ಕುಟುಂಬದವರೊಂದಿಗೂ ಸ್ನೇಹಿತರೊಡನೆ ಉದ್ರಿಕ್ತತೆಯು ಕಲಹಗಳಿಗೆ ದಾರಿ ಮಾಡಬಹುದಾದ ಸಾಲಗಳು ಮತ್ತು ಕೊಡಲು ಅಥವಾ ಸಾಲ ತೀರಿಸಲು ಇದು ಸರಿಯಾದ ಸಮಯ ವಲ್ಲ ಮಾಸದ ಉತ್ತರಾರ್ಧದಲ್ಲಿ ಅನುಕೂಲವಾದ ಪರಿಸ್ಥಿತಿ ಉಂಟಾಗುತ್ತವೆ. ಆರ್ಥಿಕ ಪುಷ್ಟಿ ಧೈರ್ಯವನ್ನು ತಂದುಕೊಡುತ್ತದೆ.

### ಕರ್ಕಾಟಕ

ಲೇವಾದೇವಿ ಲಾಭದಾಯಕವಾಗಿರುತ್ತವೆ. ಒಟ್ಟಿನಲ್ಲಿ ನಿಮ್ಮ ಆರ್ಥಿಕ ಪರಿ ಸ್ಥಿತಿ ಉತ್ತಮವಾಗಿರುತ್ತದೆ. ಆರೋಗ್ಯ ವಿಷಯಕ್ಕೂ ಇದು ಸಕಾಲ. ಈ ಕಾಲದಲ್ಲಿ ಪ್ರಯಾಣ ಫಲಿಸಲಿವೆ. ಕೌಟುಂಬಿಕ ವಿಷಯಗಳು ಅನು ಕೂಲವಾಗಿರುತ್ತವೆ. ಸಂತಾನ ಆರೋಗ್ಯ, ಓದಿನ ವಿಷಯಗಳಲ್ಲಿ ಶ್ರದ್ಧೆ ತೋರಿ ಪ್ರಕಾಶಿ ಸುತ್ತಾರೆ. ಆರ್ಥಿಕ ಲೇವಾದೇವಿ ಮಿತ್ರನ ಸಹಕಾರ ಮತ್ತು ಸಾಮಾಜಿಕ ಪರವಾದ ವಿಷಯಗಳಲ್ಲಿ ಮುನ್ನಡೆ ಸಾಧಿಸುವಿರಿ.

### ಸಿಂಹ

ಜನ್ಮರಾಶಿಯಲ್ಲಿನ ರವಿ ಸಂಚಾರ ಮಾಸ ಉತ್ತರಾರ್ಥ ಅನುಕೂಲಕರ ವಾದ ಸಮಯವಲ್ಲ ಮಾನಸಿಕ ಒತ್ತಡ ಹೆಚ್ಚಾಗಲಿದೆ. ಶಾರೀರಿಕ ಆಯಾಸ ಉಂಟಾಗಬಹುದು. ಕ್ರೋಧದ ಒಡಂಬಡಿಕೆಯಿಂದ ಪ್ರಯೋಜನವಿಲ್ಲ. ಕೆಟ್ಟ ಸಹವಾಸಗಳನ್ನು ಬಿಡುವುದು ಉತ್ತಮ. ದೂರ ಪ್ರಯಾಣಗಳು ಅನುಕೂಲಕರ ವಾಗಿಲ್ಲ ಉದರ ಸಂಬಂಧಿ ಅನಾರೋಗ್ಯ. ರಕ್ತದರಿವು ಸಮಸ್ಯೆಗಳು ಅಧಿಕವಾಗದಿರು ವಾಗಲೇ ಆಹಾರ, ವ್ಯಾಯಾಮದಂಥ ವಿಷಯಗಳಲ್ಲಿ ಶ್ರದ್ಧೆ ಅವಶ್ಯಕ.

### ಕನ್ಯ

ಸಕಲ ದೋಷಗಳು ತೊಲಗಿ ಸಮಸ್ತ ಐಶ್ವರ್ಯಗಳು ಒದಗಿ ಬರುತ್ತವೆ. ಆಕಸ್ಮಿಕ ಧನಲಾಭ ನಿಮ್ಮನ್ನು ಹುಡುಕಿ ಬರುತ್ತದೆ. ಆದರೂ ಹೊಸ ಪ್ರಯೋಗಗಳಿಗೆ ವಿನಿಯೋಗಗಳಿಂದ ದೂರ ಉಳಿವುದು ಒಳಿತು. ನೀವು ಆರ್ಥಿಕ ವಿಚಾರಗಳ ಮೇಲೆ ವಿಶೇಷ ಗಮನವಿಡುವುದು ಅತ್ಯಾವಶ್ಯಕ ಅನಾವಶ್ಯಕ ಖರ್ಚುಗಳು ಬರಬಹುದು ಶಿರೋಬಾಧೆ ನರಮಂಡಲ,ಸ್ನಾಯು ಬಾಧೆಗಳು ಉಂಟಾದಲ್ಲಿ ವೈದ್ಯರ ಭೇಟಿ ಅಗತ್ಯ ಕುಟುಂಬ ವೃದ್ಧಿಯಾಗಲಿದೆ.

### ತುಲಾ

ಒಳ್ಳೆಯ ಸಮತೋಲನದಿಂದ ವ್ಯವಹರಿಸುವುದರಿಂದ ಜೀವನ ಸ್ಥಾಯಿ ಬೆಳವಣಿಗೆಯಾಗಲಿದೆ. ನಿಮ್ಮ ಜೀವನ ಒಳ್ಳೆಯ ತಿರುವು ತೆಗೆದು ಕೊಳ್ಳಲು ಆರಂಭವಾಗುತ್ತದೆ. ನಿಮ್ಮಲ್ಲಿರುವ ಸೃಜನಾತ್ಮಕ ಶಕ್ತಿ ಬೆಳೆದು, ವೃತ್ತಿಯಲ್ಲಿ ವಿರಾಜಿಸಿ ಅಧಿಕ ಆದಾಯವನ್ನು ಗಳಿಸುತ್ತಿರೀ. ಸೋದರರು ಹಾಗೂ ಸ್ನೇಹಿತರು ನಿಮ್ಮನ್ನನುಸರಿಸುತ್ತಾರೆ. ಇದು ಒಳ್ಳೆಯ ಆರೋಗ್ಯ ಮತ್ತು ಮತ್ತೆ ಹಲವು ಆದಾಯ ಅವಕಾಶಗಳನ್ನು ಉಂಟುಮಾಡುತ್ತದೆ.

### ವೃಶ್ಚಿಕ

ಇದು ನಿಮಗೆ ಆಹ್ಲಾದಕರ ಕಾಲವಾಗಲಿದೆ. ನೀವು ವೃತ್ತಿ ವ್ಯಾಪಾರ ಗಳಲ್ಲಿ ಸಂತೃಪ್ತಿಕರವಾದ ಆದಾಯವನ್ನು ಮತ್ತು ಪ್ರಗತಿ ಯನ್ನು ಕೂಡ ಹೊಂದುತ್ತೀರಿ. ಕುಟುಂಬ ವಾತಾವರಣ ಚೆನ್ನಾಗಿರಲಿದೆ.ಹೊಸ ವ್ಯಕ್ತಿ ಗಳ ಪರಿಚಿಯವಾಗಲಿದೆ. ಶ್ರಮ ಒತ್ತಡವನ್ನು ನಿಭಾಯಿಸುತ್ತೀರಿ. ಕುಟುಂಬಿಕ ಸಮಸ್ಯೆಗಳು ಒಂದು ಹಂತಕ್ಕೆ ಬರುತ್ತವೆ. ಮನೆ ಒಳಹೊರಗೆ ಗೌರವ ಉಂಟಾ ಗಲಿದೆ. ವೃತ್ತಿ ಉದ್ಯೋಗಗಳು ಅನುಕೂಲಕರ.ಸ್ಪರ್ಧಾತ್ಮಿಕ ಪರೀಕ್ಷೆಗಳಲ್ಲಿ ಜಯ ಗಳಿಸಿ ಉದ್ಯೋಗವನ್ನು ಹೆಚ್ಚಿಸುವಿರಿ.

### ಧನಸ್ಸು

ನಿಮ್ಮ ಸಾಮಾಜಿಕ. ಸ್ಥಿತಿ ಉತ್ತಮವಾಗಿರುತ್ತದೆ. ನೀವು ವಿಲಾಸಮಯ ಜೀವನ ಶೈಲಿಯನ್ನು ನಡೆಸಲಿದ್ದೀರಿ. ಮಕ್ಕಳ ವ್ಯವಹಾರಗಳು ಸಹಾ ಸರಾಗವಾಗಿ ಸಾಗಲಿವೆ. ನೀವು ಆಕಸ್ಮಿಕವಾಗಿ ತಿಳುವಳಿಕೆಯುಕ್ತ ನಿರ್ಧಾರಗಳನ್ನು ತೆಗೆದುಕೊಂಡು ವಿಜಯವನ್ನು ಸಾಧಿಸುವಿರಿ.ಒಳ್ಳೆಯ ಆದಾಯವನ್ನು ಕೂಡ ಹೊಂದುತ್ತೀರಿ. ಧೈರ್ಯ ವಿನಿಯೋಗದಿಂದ ಕಾರ್ಯಜಯ ಉಂಟಾಗಲಿದೆ.

### ಮಕರ

ಎದೆಯೊಳಗಿನ ಶ್ವಾಸ ಸಂಬಂಧಿ ಬಾಧೆಗಳಿಂದ ಜರ್ಜರಿತರಾಗುವಿರಿ. ಗ್ರಹಗಳ ಚಲನೆ ಪ್ರತಿಕೂಲವಾಗಿದೆ.ಸೂರ್ಯನಾರಾಯಣ ಸ್ವಾಮಿಯ ಆರಾಧನೆಯಿಂದ ಒಳ್ಳೆಯದಾಗಲಿದೆ. ಉದ್ಯೋಗಸ್ಥರಿಗೆ ಸ್ಥಾನ ಪಲ್ಲಟವಾಗಲಿದೆ. ವಿದ್ಯಾರ್ಥಿಗಳಿಗೆ ವಿದೇಶ ನೂತನ ವಿದ್ಯಾವಕಾಶಗಳು ಒದಗಿ ಬರಲಿವೆ.ವಾಕ್ ಸಂಬಂಧಿ ಸಂದರ್ಭಗಳಲ್ಲಿ ಪ್ರತಿಸ್ಪಂದನೆ ಲೋಪ ದಿಂದಾಗಿ ಅವಕಾಶಗಳು ಕೈತಪ್ಪಿ ಹೋಗಲಿವೆ.

### ಕುಂಭ

ಆರೋಗ್ಯ ವಿಷಯಗಳಲ್ಲಿ ಶ್ರದ್ಧೆವಹಿಸಬೇಕು.ಗುಪ್ತಾಂಗಗಳಿಗೆ ಜನ ನಾಂಗಗಳ ಬಾಧೆಗೆ ಚಿಕಿತ್ಸೆಯ ಅವಶ್ಯಕತೆಯಿರುತ್ತದೆ. ವೈದ್ಯರ ಭೇಟಿ ಪತಿ-ಪತ್ನಿಯರ ಮಧ್ಯೆ ವೈಷಮ್ಯಕ್ಕೆ ಎಡೆಮಾಡಿ ಕೊಡದೇ ಒಬ್ಬರಿ ಗೊಬ್ಬರ ಅಭಿಪ್ರಾಯಗಳನ್ನು ಗೌರವಿಸುವುದು ಒಳಿತು. ದೈವಬಲ ವೃದ್ಧಿಸಲಿದೆ. ಶುಭ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ.ಧನವ್ಯಯ,ಕಾರ್ಯಸಿದ್ಧಿ,ಧನಲಾಭ ವುಂಟಾಗುತ್ತವೆ.

### ಮೀನ

ವೃತ್ತಿಯಲ್ಲಿ ಸಮಸ್ಯೆಗಳನ್ನು ಎದುರಿಸುವಿರಿ ಸ್ವಲ್ಪ ಮಾನಸಿಕ ಒತ್ತಡ ವಿರಲಿದೆ. ಆದರೂ ಇದು ಆರೋಗ್ಯ ವಿಷಯದಲ್ಲಿ ಉಪಶಮನ ಹೊಂದಲು ಸಹಾಯಮಾಡುತ್ತದೆ. ಪ್ರತಿವಾದಿ ವ್ಯಾಜ್ಯಗಳಿಗೆ ಸಮರ್ಥರಾಗಿ ಎದುರೇಟು ಕೊಡುವಿರಿ. ಸಾಮಾಜಿಕ ಪರಿಚಯಗಳು. ಬೆಳವಣಿಗೆಯಾಗಲಿವೆ. ಪ್ರಸ್ತುತ ಆರೋಗ್ಯ ವಿಷಯದಲ್ಲಿ ಶ್ರದ್ಧೆಯಿರಲಿ . ಅನವಸರ ಖರ್ಚುಗಳನ್ನು ಕಡಿಮೆಮಾಡಿ. ಆಡಂಬರಗಳಿಲ್ಲದೆ ಜೀವನ ಮಾಡುವುದು ಒಳಿತು.

# ಶ್ರೀವೆಂಕಟಾಚಲ ಮಹಾತ್ಮ್ಯೆ



**ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್,**
**ಅನುವಾದ – ಶ್ರೀಮತಿ. ಎನ್. ಪಾರ್ವತಿ**

**ಕಳೆದ ಸಂಚಿಕೆಯಿಂದ**

ಮಹಾವಿಷ್ಣು ಹಿರಣ್ಯಾಕ್ಷನನ್ನು ಸಂಹರಿಸಿದ ನಂತರ ತಾನು ಭೂಸತಿಯೊಂದಿಗೆ ಸ್ವಲ್ಪಕಾಲ ಭೂಲೋಕವಾಸ ಮಾಡಬೇಕೆಂದು ನಿಶ್ಚಯಿಸಿದನು. ಭೂಲೋಕದಲ್ಲಿ ಎಲ್ಲಿ ವಾಸ ಮಾಡಬೇಕೆಂದು ನಿಶ್ಚಯಿಸಿ ಸ್ವಾಮಿಯು ಪುಷ್ಕರಣಿ ತೀರವನ್ನು ಆಯ್ಕೆ ಮಾಡಿಕೊಂಡನು ಎಂದು ಸೂತನು ಶೌನಕಾದಿ ಮುನಿಗಳಿಗೆ ತಿಳಿಸಲಾಗಿ ಅವರು ಸ್ವಾಮಿ ಪುಷ್ಕರಣಿಯ ಪ್ರಭಾವವನ್ನು ತಿಳಿಸಬೇಕೆಂದು ಕೋರಿದರು. ಮುನಿಗಳೇ, ನಿಮ್ಮ ಕುತೂಹಲವನ್ನು ಅರಿತಿದ್ದೇನೆ. ಸ್ವಾಮಿ ಪುಷ್ಕರಣಿಯ ಪ್ರಭಾವವನ್ನು ತಪ್ಪದೇ ತಿಳಿಸುತ್ತೇನೆ.

ವೈಕುಂಠವು ವಿಷ್ಣು ನಿವಾಸವಾಗಿದೆ.ಆ ವೈಕುಂಠದಲ್ಲಿ ವಿಷ್ಣುವಿನ ವಿಲಾಸಾರ್ಥಕ್ಕಾಗಿ ಶ್ರೀದೇವಿಯೊಂದಿಗೆ ಸಂಚರಿಸುವ ಕ್ರೀಡಾ ಚಲವಿದೆ. ಹರಿಯುವ ನೀರಿನ ಜರಿಯ ಕಡೆ ಸ್ವಾಮಿಪುಷ್ಕರಿಣಿ ಇದೆ. ಭೂಲೋಕ ವಾಸಿಯರು ಸುಲಭವಾಗಿ ಹೋಗುವ ಪ್ರದೇಶವಲ್ಲ.ಆ ತೀರ್ಥವು ಅಪ್ರಾಕೃತ ಪರಿಮಳೋದಕ ತೀರ್ಥವಾಗಿದೆ.

ಆ ಪುಷ್ಕರಣಿಯಲ್ಲೇ ಮಹಾವಿಷ್ಣುವು ಶ್ರೀ ಭೂ ನೀಲಾದೇವಿ ವರೊಂದಿಗೆ ಸಂತಸವಾಗಿ ವಿಹಾರವನ್ನು ಮಾಡುತ್ತಿರುತ್ತಾನೆ. ಅಂತಹ ಕ್ರೀಡಾದ್ರಿಯನ್ನು ಶ್ವೇತ ವರಾಹಮೂರ್ತಿಯು ಭೂಲೋಕಕ್ಕೆ ತರಬೇಕೆಂದು ಆದೇಶಿಸಿದಾಗ ಗರುಡನು ಶ್ರೀದೇವಿಯನ್ನು ಒಪ್ಪಿಸಿ ಕ್ರೀಡಾದ್ರಿಯನ್ನು ಭೂಮಿಗೆ ತಂದನು. ಕ್ರೀಡಾದ್ರಿಯೊಂದಿಗೆ ಪುಷ್ಕರಣಿ ಕೂಡ ಭೂತಲವನ್ನು ಸೇರಿತು.

ಮುನಿಗಳೇ ಸ್ವಾಮಿ ಪುಷ್ಕರಣಿಯನ್ನು ಸಾಮಾನ್ಯ ಪುಷ್ಕರಣಿಯೊಂದಿಗೆ ಹೋಲಿಸಿ ನೋಡಬೇಡಿ.ಆ ಪುಷ್ಕರಣಿಯು ಪುಣ್ಯ ನದಿಗಳಂತೆ ಪುಣ್ಯ ಪ್ರದಾಯಕವಾಗಿದೆ. ಭರತ ಖಂಡದಲ್ಲಿ ಹರಿಯುವ ಗಂಗಾದಿ ಪುಣ್ಯ ನದಿಗಳಿಗೆ ಮಾತೃದೇವತೆಯಂತಹದು. ಭೂಲೋಕ ವಾಸಿಗಳ ಪಾಪರಾಶಿಯನ್ನು ಸಂಹಾರ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಭಕ್ತರ ಕಷ್ಟಗಳನ್ನು ಉಪಶಮನ ಮಾಡುವ ಸಾಮರ್ಥ್ಯ ಆ ಪುಷ್ಕರಣಿಗೆ ಇದೆ. ಅದಲ್ಲದೆ ಯಾರ್ಯಾರು ತಮ್ಮ ಕೋರಿಕೆಗಳೊಂದಿಗೆ ಆ ಪುಷ್ಕರಣಿಯಲ್ಲಿ ನಾಣ್ಯಗಳನ್ನು ಹಾಕುತ್ತಾರೋ ಅವರ ಕೋರಿಕೆಗಳು ತಪ್ಪದೇ ನೆರವೇರುತ್ತವೆ. ಪುಷ್ಕರಣಿಯಲ್ಲಿ ಸ್ನಾನ ಮಾಡುವುದೊಂದೇ ಅಲ್ಲದೆ ಪುಣ್ಯ ಪುರುಷರ ದರ್ಶನದಂತೆ ಪುಷ್ಕರಣಿದರ್ಶನ ಕೂಡ ಪುಣ್ಯದಾಯಕವಾಗಿದೆ. ಪುಷ್ಕರಣಿಯ ಜಲಪಾನ ಮಾಡುವ ಸ್ತ್ರೀಯರಿಗೆ ಸಮಸ್ತವೂ ಪ್ರಸಾದಿಸುತ್ತದೆ. ಎಲ್ಲಾ ವರ್ಗದವರು ಈ ಪುಷ್ಕರಣಿಯಲ್ಲಿ ಸ್ನಾನ ಮಾಡಲು ಕಾದಿರುತ್ತಾರೆ.

ಉನ್ನತವರ್ಗದವರೆಂದು ಗುರುತಿಸಿ ಕೊಳ್ಳುವವರು ಕೂಡ ಈ ಪುಣ್ಯೋದಕದಲ್ಲಿ ನಿತ್ಯ ಕರ್ಮಗಳನ್ನು ಆಚರಣೆ ಮಾಡುತ್ತಾರೆ. ಅವರಿಗೆ ದಕ್ಕುವ ಫಲವು ಅನಂತವಾಗಿದೆ.

ಅದಲ್ಲದೇ, ತಿಥಿಗಳಲ್ಲಿ ಏಕಾದಶಿ ವ್ರತಾಚರಣೆ, ಹಾಗೆಯೇ ಸದ್ಗುರುಗಳ ಪಾದಸೇವನೆ, ಪುಷ್ಕರಣಿ ಸ್ನಾನ ಸಾಮಾನ್ಯರಿಗೆ ದುರ್ಲಭವಾಗಿರುತ್ತದೆ.ಮಾನವ ಜನ್ಮವು 84 ಲಕ್ಷ ಜನ್ಮಗಳ ನಂತರ ಪುಣ್ಯ ಕಾರ್ಯವನ್ನು ಮಾಡಿದ ಕಾರಣಕ್ಕಾಗಿ ಲಭ್ಯವಾಗಿರುತ್ತದೆ. ಅಂತಹ

ಮಾನವ ಜನ್ಮ, ಸ್ವಾಮಿ ಪುಷ್ಕರಣಿ ಸ್ನಾನ ವೇಂಕಟಾದ್ರಿ ನಿವಾಸ ಯಾರಿಗೆಂದರೆ ಅವರಿಗೆ ದಕ್ಕುವುದಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ವೆಂಕಟಗಿರಿ ಮಹಾತ್ಮೆ, ಪುಷ್ಕರಣಿ ಪ್ರಭಾವವನ್ನು ಮಾತಿನಲ್ಲಿ ವಿವರಿಸಲಾಗುವುದಿಲ್ಲ. ಆ ಕಾರಣಕ್ಕಾಗಿ ನಾನು ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಿಮಗೆ ಒಂದು ಸಣ್ಣ ವೃತ್ತಾಂತವನ್ನು ವಿಷದವಾಗಿ ಹೇಳುತ್ತೇನೆ.

ಒಂದಾನೊಂದು ಕಾಲದಲ್ಲಿ ತಾರಕಾಸುರ ಎನ್ನುವ ಲೋಕ ಕಂಟಕನು ವೈಭೋಗಯುತವಾಗಿ ಜೀವಿಸುತ್ತಿದ್ದನು.ದೇವೇಂದ್ರ ರಾದಿಯರಿಗೆ ತಾರಕಾಸುರನನ್ನು ಎದುರಿಸಲು ಸಾಧ್ಯವಾಗಲಿಲ್ಲ. ಅಂತಹ ಅಸುರನನ್ನು ಕುಮಾರಸ್ವಾಮಿಯು ಸಂಹರಿಸಿದನು.ದೇವತೆಗಳು ಸಂಭ್ರಮದಲ್ಲಿ ಮುಳುಗಿ ಹೋದರು. ತ್ರಿಲೋಕ ವಾಸಿಗಳು ಹಾಯಾಗಿ ಉಸಿರು ಬಿಟ್ಟರು.

ಎಲ್ಲವೂ ಸೌಖ್ಯವಾಗಿದೆ ಎಂದುಕೊಳ್ಳುತ್ತಿರುವಂತೆ ತಾರಕಾಸುರ ಸಂಹಾರದಿಂದ ಕುಮಾರಸ್ವಾಮಿಗೆ ಬ್ರಹ್ಮಹತ್ಯಾದೋಷವು ಅಂಟುಕೊಂಡಿತು. ಏನು ಮಾಡಬೇಕೆಂದು ತಿಳಿಯಲಿಲ್ಲ. ತನಗೆ ಅಂಟಿರುವ ಬ್ರಹ್ಮಹತ್ಯದೋಷ ನಿವಾರಣೆಗಾಗಿ ಉಪಾಯವನ್ನು ಸೂಚಿಸಬೇಕೆಂದು ಷಣ್ಮುಖನು ತನ್ನ ಜನ್ಮದಾತನಾದ ಮಹಾದೇವನನ್ನು ಕೇಳಿದನು. ಆ ಭಕ್ತವತ್ಸಲನು ತಡ ಮಾಡದೇ ಭೂಲೋಕದಲ್ಲಿನ ವೇಂಕಟಾದ್ರಿ ದರ್ಶನವನ್ನು ಹಾಗೂ ಆ ಪ್ರಾಂತ್ಯದಲ್ಲಿರುವ ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಬೇಕೆಂದು ಪರಿಹಾರವನ್ನು ಸೂಚಿಸಿದನು. ತಂದೆಯ ಸೂಚನೆಯ ಮೇರೆಗೆ ವೇಂಕಟಾದ್ರಿಯನ್ನು ಸೇರಲು ಸುಬ್ರಹ್ಮಣ್ಯನು ಪ್ರಯಾಣ ಬೆಳೆಸಿದನು. ಆ ಪುಣ್ಯ ಶೈಲಕ್ಕೆ ಬಂದು ಕಾಲಿಟ್ಟ ಕೂಡಲೇ ತಾರಕಾಸುರನನ್ನು ಸಂಹರಿಸಿದ ಬ್ರಹ್ಮಹತ್ಯ ದೋಷವು ನಿವಾರಣೆಯಾಯಿತು.

ಕುಮಾರಸ್ವಾಮಿಯು ಈ ಘಟನೆಯಿಂದ ನಿಬ್ಬೆರಗಾದನು. ಅನಂತರ ಷಣ್ಮುಖ ಸ್ವಾಮಿಯು ಭಕ್ತಿಯಿಂದ ವೇಂಕಟಾದ್ರಿಗೆ ಬಂದನು. ಸ್ವಾಮಿ ಪುಷ್ಕರಣಿಯನ್ನು ದರ್ಶಿಸಿದನು. ಆ ಪುಷ್ಕರಣಿಯಲ್ಲಿ ಮೂರು ಸಾರಿ ಮುಳುಗಿ ಮೇಲೆದ್ದನು. ತದನಂತರ ಪುಷ್ಕರಣಿಯ ಹತ್ತಿರವಿದ್ದ ವರಾಹ ಸ್ವಾಮಿಯನ್ನು ದರ್ಶಿಸಿ ಮನಸಾರೆ ಸೇವಿಸಿ ಧನ್ಯನಾದನು.ಕುಮಾರ ಸ್ವಾಮಿಯು ತನಗೆ ಅಂಟಿದ್ದ ಬ್ರಹ್ಮಹತ್ಯ ದೋಷವು ವೇಂಕಟಾದ್ರಿ ಮತ್ತು ಪುಣ್ಯೋದಕ ಸೇವನೆಯಿಂದ ನಿವಾರಣೆಗೊಂಡು ನಾನು ಸ್ಕಂದನಾಗಿದ್ದೇನೆ ಎಂದು ಶ್ರೀಕೃಷ್ಣ ಪರಮಾತ್ಮ ವಿಭೂತಿ ಯೋಗದಲ್ಲಿ ತಿಳಿಸಿದ್ದಾನೆ. ಇದರಿಂದಲೂ ಸ್ವಾಮಿ ಪುಷ್ಕರಣಿಯು ಪ್ರಾಶಸ್ತ್ಯವನ್ನು ಪಡೆಯಿತು.

ಸ್ವಾಮಿ ಪುಷ್ಕರಣಿಯಂತೆ ವೇಂಕಟಾಚಲವು ಕೂಡ ಸಾಮಾನ್ಯವಾದುದಲ್ಲ. ಆ ಭೂ ಸ್ಥಳವು ಪಾಪನಾಶಿನಿಯಾಗಿದೆ. ಆ ಪರ್ವತವು ಪರಮ ಪವಿತ್ರವಾಗಿದೆ. ಸುವರ್ಣಮಣಿ ಕಾಂತಿಗಳಿಂದ ಆ ಶೈಲವು ಶೋಭಾಯಮಾನವಾಗಿದೆ. ಅಗ್ರವರ್ಣದವರೆಂದು ಗುರುತಿಸಲ್ಪಡುವವರಿಗೆ ಆ ಪರ್ವತವು ಜೀವನಾಧಾರವಾಗಿದೆ. ತಪಸ್ವಿಗಳಿಗೆ ಆ ಬೆಟ್ಟವು ಅನುಕೂಲಮಯವಾದ ತಪಃಸ್ಥಳವಾಗಿದೆ. ಸೃಷ್ಟಿಕರ್ತನಾದ ಬ್ರಹ್ಮ, ಭಕ್ತ ವತ್ಸಲನಾದ ರುದ್ರ ತ್ರಿಲೋಕಾಧಿಪತಿಯಾದ ದೇವೇಂದ್ರರಾದಿಯರು ಸದಾ ವಾಸಿಸುವ ಪುಣ್ಯ ನಗರವಾಗಿದೆ. ಆ ಬಾಲ ಗೋಪಾಲನಿಗೆ ಸರ್ವಮಂಗಳದಾಯಕವಾದ ಅಂತ ಶಿಖರಗಳ ಕುಲಾಚಲವಾಗಿದೆ. ವೇಂಕಟನಾಯಕನ ಕಲ್ಯಾಣ ಗುಣಗಳ ರಾಶಿಭೂತವಾಗಿ ಕಾಣಿಸುತ್ತದೆ.ಈ ವೇಂಕಟಾದ್ರಿ, ಇದಕ್ಕಿಂತಲೂ ಪರ ಮಾರ್ಥವಾದ ಮತ್ತೊಂದು ಸ್ಥಳವಿಲ್ಲ.

ವೇಂಕಟಾಚಲವೂ ಸಾಮಾನ್ಯರಿಗೆ ಬಂಡೆಗಳಿಂದ ಕೂಡಿದ ಬೆಟ್ಟ. ಆದರೆ ಪವಿತ್ರರಾದವರಿಗೆ ಪರ್ವತರಾಜ.ಇಷ್ಟೆಲ್ಲಾ ಮಹಿಮೆಗಳನ್ನು ಹೊಂದಿರುವ ಬೆಟ್ಟದಲ್ಲಿ ಮೊದಲಿಗೆ ವರಾಹದೇವನು ಬಂದು ನೆಲೆಸಿದನು. ಸಾಮಾನ್ಯರಿಗೆ ಆ ಸ್ವಾಮಿಯು ಅದೃಶ್ಯನಾಗಿರುತ್ತಾನೆ. ಪುಣ್ಯವಂತರ ಕನಸುಗಳನ್ನು ನನಸು ಮಾಡುವ ಕಮನೀಯ ರೂಪಿ.ಈ ಪರ್ವತವನ್ನು ದರ್ಶಿಸಿದ ಮಾತ್ರಕ್ಕೆ ಜೀವಿಗಳಿಗೆ ಜನನ ಮರಣಾದಿಗಳು ಇಲ್ಲದ ಉನ್ನತ ಸ್ಥಾನವು ಲಭಿಸುತ್ತದೆ. ಇದಕ್ಕೆ ಯಾವ ಸಂದೇಹವೂ ಇಲ್ಲ ಎಂದು ಸೂತನು ಪರವಶನಾಗಿ ಹೇಳುತ್ತಿದ್ದಾಗ ಮುನಿಗಳು ಕೇಳಿದರು.

ಪೌರಾಣಿಕ ಮಣಿ! ವೇಂಕಟಾದ್ರಿಯಲ್ಲಿ ನೆಲೆಸಿರುವ ವರಾಹ ದೇವನು ಆ ಬೆಟ್ಟವನ್ನು ನಿವಾಸವಾಗಿ ಮಾಡಿಕೊಂಡು ಏನು ಮಾಡುತ್ತಿದ್ದಾನೆ? ಯಾರಿಗೆ ವರಗಳನ್ನು ನೀಡುತ್ತಿದ್ದಾನೆ? ಎಂದು ಕುತೂಹಲದಿಂದ ಪ್ರಶ್ನಿಸಿದರು. ಮುನಿಗಳ ಕುತೂಹಲವನ್ನು ಅರಿತ ಸೂತನು.

ಮುನಿಗಳೇ, ನೀವು ಕೇಳಿದ ಪ್ರಶ್ನೆ ಸರಿಯಾಗಿದೆ. ಯಾರಿಗಾದರೂ ಸಂದೇಹ ಬರುವಂತದ್ದೇ. ವರಾಹದೇವನು ಬೆಟ್ಟದ ಬೀದಿಗಳಲ್ಲಿ ಕಾಂತಾ ಮಣಿಗಳೊಂದಿಗೆ ಸಪ್ತಗಿರಿಯ ಸೊಗಸನ್ನು ನೋಡುತ್ತಾ ಕಾಲ ಕ್ಷೇಪ ಮಾಡಲಿಲ್ಲ. ಅಧರ್ಮಪರರಾದ ಪಾಪಿಗಳನ್ನು ನಿಗ್ರಹಿಸುತ್ತಾ ಧಾರ್ಮಿಕರ ವಿಶ್ವಾಸಕ್ಕೆ ಬಲವನ್ನು ನೀಡುತ್ತಾ ಕಾಲ ಕಳೆಯುತ್ತಿದ್ದನು.ಹಾಗೆಯೇ ಇವೆಲ್ಲವೂ ಸ್ವಾಮಿಯ ನಿಜಗುಣಗಳು, ದುಷ್ಟಶಿಕ್ಷಣ ಶಿಷ್ಟರಕ್ಷಣೆಗಳಿಗೆ ಆತನೇ ಧರ್ಮ ಕರ್ತ.

ಮಹಾವಿಷ್ಣುವು ಸೃಷ್ಟಿಕರ್ತನೂ ಹೌದೂ, ಪಾಲಕನೂ ಹೌದೂ ಬ್ರಹ್ಮನು ಸೃಷ್ಟಿ ಮಾಡಿ ವಿಶ್ರಮಿಸುವ ವೇಳೆ ವಿಷ್ಣುವೇ ರಕ್ಷಿಸುತ್ತಾನೆ. ಬ್ರಹ್ಮನು ನಿದ್ದೆಯಿಂದ ಎದ್ದ ನಂತರ ತನ್ನ ಬಾಧ್ಯತೆಯನ್ನು ಒಪ್ಪಿಸುತ್ತಾನೆ. ಆಯಾ ಕಾಲಕ್ಕೆ ಬಂದು ವರಹಾದಿ ರೂಪಗಳಿಂದ ದೃಷ್ಟ ನಿಗ್ರಹ ಶಿಷ್ಟ ರಕ್ಷಣೆಯನ್ನು ಮಾಡುತ್ತಾನೆ.

ಹೀಗೆ ವರಾಹ ಕಲ್ಪವು ಸಾಗುತ್ತಿರುವಾಗ ಬ್ರಹ್ಮದೇವನು ಒಂದು ಪ್ರಶ್ನೆಯನ್ನು ಕೇಳಿದನು.

(ಮುಂದುವರೆಯುತ್ತದೆ)

# अष्टविंशः पाठः

## ಪಾಠ : 28

ರಚನೆ:-ಕೆ. ಸೂರ್ಯನಾರಾಯಣ
ಅನುವಾದ: ವಿ. ಪ್ರದೀಪ್ ಕುಮಾರ್

| | | |
|---|---|---|
| त्वाम् = ನಿನ್ನನ್ನು | वदितुम् = ಹೇಳಲು | पृच्छति = ಕೇಳುತ್ತಿದ್ದಾನೆ |
| माम् = ನನ್ನನ್ನು | उदित्वा = ಹೇಳಿ | प्रक्ष्यति = ಕೇಳುತ್ತಾನೆ |
| युष्मान् = ನಿಮ್ಮನ್ನು | आह्वातुम् = ಕರೆಯುವುದಕ್ಕೋಸ್ಕರ | पिबति = ಕುಡಿಯುತ್ತಿದ್ದಾನೆ |

### ಪ್ರಶ್ನೆ

1. ममाग्रजः त्वामाह्वयति शीघ्रमागच्छ।
2. अत्र बालकाः न सन्ति।त्वमेव उदित्वा आगच्छ।
3. जनकः कुत्रास्ति इति अनुजं पृच्छ।
4. बालकाः क्षीरं सर्वम् अपिबन्।
5. इदानीं युष्मान् कः प्रक्ष्यति?
6. मां के अपृच्छन्?
7. अरे शीघ्रं क्षीरं पिब रे।
8. एषः त्वाम् आह्वातुं न आगच्छत्।
9. त्वम् अस्मद्गृहे भोजनार्थमागमिष्यसि वा?
10. अहं नागमिष्यामि किन्तु ममानुजमाह्वय, सः आगच्छति।

### ಉತ್ತರ

1. ನನ್ನ ಅಣ್ಣನನ್ನು ಕರೆಯಲು ಯಾರು ಹೋಗಿದ್ದಾರೆ?
2. ಯಾರೂ ಹೋಗದ ಪಕ್ಷದಲ್ಲಿ ನೀವೇ ಹೋಗಿರಿ.
3. ಆದಮೇಲೇ ನಾನು ಕೂಡ ಅಲ್ಲಿಗೆ ಬರುತ್ತೇನೆ.
4. ಅವರು ಇವಾಗ ಭೋಜನಕ್ಕಾಗಿ ಬರುತ್ತಾರೋ ಏನೋ ಕೇಳು?
5. ನೀವೇ ಕೇಳಿರಿ
6. ನೀವು ಸುಮ್ಮನೆ ಇರಿ ; ಅವರೇ ಬರುತ್ತಾರೆ.
7. ನಿಮ್ಮನ್ನು ಯಾರು ಊಟಕ್ಕೆ ಕರೆದರು?
8. ನಿನ್ನ ಅಣ್ಣನು ಕರೆದನಲ್ವಾ.
9. ನಮ್ಮ ಅಣ್ಣನು ಊರಿನಲ್ಲಿ ಇಲ್ಲವಲ್ಲ ಹೇಗೆ ಕರೆದನು.
10. ಅವನು ಇವತ್ತು ಹೋಗಿದ್ದಾನೆಂದು ನನ್ನ ತಮ್ಮನು ನಮ್ಮ ಮನೆಯಲ್ಲಿ ಹೇಳಿದನು.

### ಪ್ರಶ್ನೆ

1. ನಮ್ಮ ಅಣ್ಣನು ನಿನ್ನನ್ನು ಕರೆಯುತ್ತಿದ್ದಾನೆ. ಬೇಗನೇ ಬಾ.
2. ಇಲ್ಲಿ ಬಾಲಕರು ಇಲ್ಲ ನೀನೇ ಹೇಳಿ ಬಾ.
3. ತಂದೆಯು ಎಲ್ಲಿದ್ದಾನೆ ಎಂದು ತಮ್ಮನನ್ನು ಕೇಳು.
4. ಬಾಲಕರು ಎಲ್ಲ ಹಾಲನ್ನು ಕುಡಿದರು.
5. ಇವಾಗ ನಿಮ್ಮನ್ನು ಯಾರು ಕೇಳುತ್ತಾರೆ?
6. ನನ್ನನ್ನು ಯಾರು ಕೇಳಿದರು?
7. ಎಲೈ ಬೇಗನೇ ಹಾಲನ್ನು ಕುಡಿ.
8. ಇವನು ನಿನ್ನನ್ನು ಕರೆಯುವುದಕ್ಕೆ ಬರಲಿಲ್ಲ.
9. ನೀನು ನಮ್ಮ ಮನೆಗೆ ಊಟಕ್ಕಾಗಿ ಬರುತ್ತೀಯಾ?
10. ನಾನು ಬರುವುದಿಲ್ಲ ಆದರೇ ನನ್ನ ತಮ್ಮನನ್ನು ಕರೆ, ಅವನು ಬರುತ್ತಾನೆ.

### ಉತ್ತರ

1. मम अग्रजम् आह्वातुं के अगच्छन्?
2. केऽपि न गच्छन्ति चेत् यूयमेव गच्छत।
3. अनन्तरम् अहमपि तत्र अगमिष्यामि।
4. ते इदानीं भोजनार्थम् आगच्छन्ति वा न वा : पृच्छ।
5. यूयमेव पृच्छत।
6. यूयं तूष्णीं भवत; ते एव आगमिष्यन्ति।
7. युष्मान् के भोजनार्थम् आहूतवन्तः?
8. तव अग्रजः आहूतवान् खलु।
9. मम अग्रजः ग्रामे एव नास्ति खलु कथम् आहूतवान्?
10. सः अद्य अगच्छत् इति मम अनुजः अस्माकं गृहे उक्तवान्।



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

**ಶ್ರೀಮತಿ. ಎಂ. ಗೀತಾಕುಮಾರಿ**

**1) ತಿರುಮಲೆಯಲ್ಲಿ ಪ್ರತಿನಿತ್ಯವೂ ಶ್ರೀವೇಂಕಟೇಶ್ವರನ ನೈವೇದ್ಯಕ್ಕಾಗಿ ಹೊಸ ಮಣ್ಣಿನ ಹರಿವಾಣವನ್ನೇ ಏಕೆ ಬಳಸುತ್ತಾರೆ?**

**ಉತ್ತರ :** ಒಮ್ಮೆ ಭೀಮ ಎಂಬ ಕುಂಬಾರನು ಮಣ್ಣಿನಲ್ಲಿ ಮಾಡಿದ ತುಳಸಿಯ ದಳದೊಂದಿಗೆ ಸ್ವಾಮಿಯನ್ನು ಅರ್ಚಿಸುತ್ತಿದ್ದ ತೊಂಡಮಾನನೆಂಬ ಚಕ್ರವರ್ತಿಯು ಬಂಗಾರದ ತುಳಸಿಯ ದಳದಲ್ಲಿ ಸ್ವಾಮಿಯನ್ನು ಅರ್ಚಿಸುತ್ತಿದ್ದ ಒಮ್ಮೆ ಬಂಗಾರದ ದಳಗಳ ಕೆಳಗೆ ಮಣ್ಣಿನ ದಳಗಳನ್ನು ನೋಡಿದ ರಾಜ, ಸ್ವಾಮಿಯನ್ನು ನೋಡಿ, "ಸ್ವಾಮಿ! ನಾನು ನಿನ್ನನ್ನು ಬಂಗಾರದ ದಳಗಳಿಂದ ಪೂಜಿಸುತ್ತಿದ್ದರೆ ಈ ಮಣ್ಣಿನ ದಳಗಳೊಂದಿಗೆ ನಿನ್ನನ್ನು ಪೂಜಿಸುತ್ತಿರುವವರು ಯಾರು?'' ಎಂದು ಕೇಳಿದ. ಅದಕ್ಕೆ ಸ್ವಾಮಿಯು ನಗುತ್ತಾ, ತನ್ನ ಪರಮ ಭಕ್ತನಾದ ಭೀಮನೆಂಬ ಕುಂಬಾರನು ಈ ರೀತಿ ಅರ್ಚಿಸುತ್ತಿದ್ದಾನೆ.ಅವನು ಅರ್ಪಿಸುತ್ತಿರುವ ಮಣ್ಣಿಗಳ ದಳಗಳು ನನಗೆ ಅತ್ಯಂತ ಪ್ರೀತಿ ಪಾತ್ರವಾದುವು, ಪವಿತ್ರವೂ ಆಗಿವೆ, ಎಂದು ಉತ್ತರಿಸಿದ. ಇದರಿಂದ ತೊಂಡಮಾನನು, ಭೀಮನ ಭಕ್ತಿಯನ್ನು ಪರೀಕ್ಷಿಸಬೇಕೆಂದು ಯೋಚಿಸಿ,ಒಮ್ಮೆ ಅವನ ನಿವಾಸಕ್ಕೆ ಹೋದ. ಅಲ್ಲಿ ಭೀಮನು ಬೇರೆ ಯಾವ ಯೋಚನೆಯೂ ಇಲ್ಲದೇ ಸ್ವಾಮಿಯನ್ನು ಭಕ್ತಿ - ಶ್ರದ್ಧೆಯಿಂದ, "ಸ್ವಾಮೀ! ಸದಾ ನಿನ್ನ ಮೇಲೆ ಮನಸ್ಸನ್ನು ನಿಲ್ಲಿಸು ಗೋವಿಂದಾ'' ಎಂದು ಭಗವಂತನ ನಾಮಸ್ಮರಣೆಯನ್ನು ಮಾಡುತ್ತಾ ಮಡಿಕೆಗಳನ್ನು ತಯಾರಿಸುವುದಕ್ಕೆ ಮುಂಚೆ ಸ್ವಾಮಿಯ ಪಾದಗಳ ಮೇಲೆ ಮಣ್ಣಿನ ತುಳಸಿಯದಳಗಳನ್ನು ಇರಿಸಿ, ತನ್ನ ಶಕ್ತಿಗೆ ಭಕ್ತಿಗೆ ಸ್ವಾಮಿಯೇ ಕಾರಣವೆಂದು ನಮಸ್ಕರಿಸಿ ಕೆಲಸವನ್ನು ಪ್ರಾರಂಭಿಸಿದ. ಅಷ್ಟೇ ಅಲ್ಲದೇ ಪ್ರತಿ ನಿತ್ಯವೂ ತಾನು ಅನ್ನವನ್ನು ತಿನ್ನುವ ಮೊದಲು ಒಂದು ಹೊಸ ಮಣ್ಣಿನ ಹರಿವಾಣದಲ್ಲಿ ಸ್ವಾಮಿಗೆ ಆಹಾರವನ್ನು ನೈವೇದ್ಯ ಮಾಡಿ ನಂತರ ತಾನು ಭೋಜನ ಮಾಡುತ್ತಿದ್ದ ಇವನ್ನೆಲ್ಲಾ ನೋಡಿದ ತೊಂಡಮಾನನು ತಾನು ರಾಜನೆಂಬ ಅಹಂಕಾರವನ್ನು ಮರೆತು ಭೀಮನ ಭಕ್ತಿಗೆ ಶರಣಾದ ಭೀಮನ ಭಕ್ತಿಗೆ ಮೆಚ್ಚಿದ ಸ್ವಾಮಿಯು ಪ್ರತ್ಯಕ್ಷನಾಗಿ ಸಶರೀರನಾಗಿ ಅವನಿಗೆ ಮೋಕ್ಷವನ್ನು ಪ್ರಸಾದಿಸಿದ. ಆದ್ದರಿಂದ ಇಂದಿಗೂ ಆನಂದ ನಿಲಯದಲ್ಲಿ ಸ್ವಾಮಿಗೆ ಮೊಟ್ಟಮೊದಲ ನೈವೇದ್ಯವೆಂದು ಮಣ್ಣಿನ ಹೊಸ ಹರಿವಾಣದಲ್ಲಿ ಮೊಸರನ್ನವನ್ನು ನಿವೇದಿಸಲು ಪ್ರಾರಂಭಿಸಿದರು. ಅದನ್ನೇ ಸ್ವಾಮಿಯು ಪ್ರಧಾನವಾಗಿ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ಭಕ್ತರು ನಂಬುತ್ತಾರೆ.

**2.ದ್ವಾಪರಯುಗದಲ್ಲಿನ ಯಶೋದಾದೇವಿಯೇ ಕಲಿಯುಗದಲ್ಲಿ ವಕುಳಮಾತೆಯಾಗಿ ಶ್ರೀ ವೇಂಕಟೇಶ್ವರ ಕಲ್ಯಾಣವನ್ನು ನಿರ್ವಹಿಸುವುದಕ್ಕೆ ಕಾರಣವೇನು?**

**ಉತ್ತರ :** ದೇವಕೀವಸುದೇವರ ಪುತ್ರನಾದ ಶ್ರೀಕೃಷ್ಣನು ಯಶೋದಾನಂದರ ಮನೆಯಲ್ಲಿ ಬೆಳೆದು ದೊಡ್ಡವನಾದ. ಆದರೆ ಹನ್ನೆರಡನೆಯ ವಯಸ್ಸಿನಲ್ಲಿ ಕಂಸನು ಸಂಹಾರ ಮಾಡುವುದಕ್ಕಾಗಿ ಮಧುರಾನಗರಕ್ಕೆ ಹೋದ. ನಂತರ ಕೃಷ್ಣನು ಅಲ್ಲೇ ತನ್ನ ವಿದ್ಯಾಭ್ಯಾಸ, ವಿವಾಹಗಳು ಎಲ್ಲವನ್ನು ನಡೆಸಿಕೊಂಡ. ನಂತರ ಹೆಂಡತಿಯರೊಂದಿಗೆ ಪುನಃ ಬೃಂದಾವನಕ್ಕೆ ಹೋದ. ಅಲ್ಲಿ ಅಷ್ಟಪತ್ನಿಯರೊಂದಿಗೆ ಬಂದ ಶ್ರೀಕೃಷ್ಣನನ್ನು ನೋಡಿದ ಯಶೋದೆ,"ನಾನೂ ನಿನಗೆ ಹಾಲು ಉಣಿಸಿ ಬೆಳೆಸಿದ ತಾಯಿಯೇ ಅಲ್ಲವೇ! ನಿನ್ನ ಮುದ್ದು ತುಂಟುತನಗಳನ್ನು ನೋಡಿ ಆನಂದಿಸಿ ದ್ದೆನಲ್ಲಾ ಆದರೂ ಒಂದೇ ಒಂದು ವಿವಾಹಕ್ಕೂ ನನ್ನನ್ನು ಕರೆಯಲಿಲ್ಲವಲ್ಲಾ ಕೃಷ್ಣಾ' ಎಂದು ಕೃಷ್ಣನನ್ನು ಕೇಳಿದಳು. ಆಗ ಭಗವಂತನು, 'ಅಮ್ಮಾ! ನೀನೇ ನನ್ನ ವಿವಾಹವನ್ನು ನೋಡುವುದಲ್ಲ ಕಲಿಯುಗದಲ್ಲಿ ನೀನೇ ಮುಖ್ಯ ಪಾತ್ರವನ್ನು ವಹಿಸಿ ನನ್ನ ಮದುವೆಯನ್ನು ಮಾಡುವ ಭಾಗ್ಯವು ದೊರೆಯುತ್ತದೆ. ಕಲಿಯುಗದಲ್ಲಿ ನಾನು ಶ್ರೀನಿವಾಸನಾಗಿ ಅವತರಿಸಿದಾಗ ನೀನು ವಕುಳಮಾತೆಯಾಗಿ ಅವತರಿಸಿ ನನ್ನ ತಾಯಿಯಾಗಿ ನೀನೇ ನನ್ನ ಮದುವೆಯನ್ನು ನೆರವೇರಿಸುವೆ.'' ಎಂದು ವರವನ್ನು ನೀಡಿದ. ಆದ್ದರಿಂದ ದ್ವಾಪರದ ಯಶೋದಾದೇವಿಯೇ ಕಲಿಯುಗದ ವಕುಳಮಾತೆಯಾಗಿ ಅವತರಿಸಿ ಪದ್ಮಾವತಿ ಶ್ರೀನಿವಾಸರ ಕಲ್ಯಾಣಕ್ಕೆ ತಾನೇ ರೂವಾರಿಯಾದಳು.

**3) ವಾತಾಪಿ ಜೀರ್ಣಂ! ವಾತಾಪಿ ಜೀರ್ಣಂ!! ಎಂದು ಏಕೆ ಹೇಳುತ್ತಾರೆ?**

**ಉತ್ತರ:** ಪೂರ್ವದಲ್ಲಿ ವಾತಾಪಿ, ಇಲ್ವಲನು ಎಂಬ ಇಬ್ಬರು ರಾಕ್ಷಸರಿದ್ದರು. ಅವರು ಅರಣ್ಯದಲ್ಲಿ ವಾಸಿಸುತ್ತಿದ್ದರು. ಪ್ರತಿದಿನ ನರಭಕ್ಷಕರನ್ನು ತಿನ್ನುವುದು ಅವರ ಆಸೆ. ಆದರೆ ವಾತಾಪಿಗೆ ಕಾಮರೂಪವಿದ್ಯೆ ಮತ್ತು ಇಲ್ವಾಲನಿಗೆ ಮೃತಸಂಜೀವನಿ ವಿದ್ಯೆ ಗೊತ್ತು. ಆದ್ದರಿಂದ ಅವರು ಒಂದು ಯೋಜನೆಯನ್ನು ಯೋಚಿಸಿದರು. ಇಲ್ವಾಲನು ಪ್ರತಿನಿತ್ಯ ಕಾಡಿನಲ್ಲಿ ಹಾದು ಹೋಗುವವರ ಬಳಿ ಹೋಗಿ ನಮ್ಮ ತಂದೆಯವರ ವೈಕುಂಠ ಸಮಾರಾಧನೆಯೆಂದು ಅದಕ್ಕಾಗಿ ನೀವು ಬಂದು ಊಟ ಮಾಡಬೇಕೆಂದು ಹೇಳುತ್ತಿದ್ದನು. ಈ ಮಧ್ಯೆ ಕಾಮರೂಪ ವಿದ್ಯೆಯ ಮುಖಾಂತರ ವಾತಾಪಿ ಮೇಕೆಯಾಗುತ್ತಿದ್ದನು. ಇಲ್ವಲನು ತನ್ನ ಜೊತೆ ಬಂದವರಿಗೆ ಊಟದ ಜೊತೆಗೆ ಮೇಕೆಯನ್ನು ಅಡುಗೆ ಮಾಡುತ್ತಿದ್ದನು. ಅವರು ಊಟ ಮಾಡಿದ ನಂತರ ಮೃತಸಂಜೀವನಿವಿದ್ಯೆ ಮುಖಾಂತರ ವಾತಾಪಿಯನ್ನು ಪುನರುಜ್ಜೀವನ ಗೊಳಿಸಿ ವಾತಾಪಿ ಬಾ! ವಾತಾಪಿ ಬಾ! ಎಂದು ಕರೆಯುತ್ತಿದ್ದರು. ವಾತಾಪಿ ಹೊಟ್ಟೆಯನ್ನು ಸೀಳಿಕೊಂಡು ಹೊರಗೆ ಬರುತ್ತಿದ್ದನು. ನಂತರ ಮೃತಪಟ್ಟವರನ್ನು ತಿನ್ನುತ್ತಿದ್ದರು. ಇದು ಪ್ರತಿ ದಿನ ನಡೆಯುತ್ತಿತ್ತು. ಒಂದು ದಿನ ಅಗಸ್ತ್ಯರು ಆ ದಾರಿಯಲ್ಲಿ ಹೋಗುತ್ತಿರುವಾಗ ಊಟಕ್ಕೆ ಕರೆದ ಇಲ್ವಲನು. ವಾತಾಪಿಯು ಎಂದಿನಂತೆ ಅಡುಗೆ ಮಾಡಿದನು. ಅಗಸ್ತ್ಯರು ತನ್ನ ದಿವ್ಯ ದೃಷ್ಟಿಯಿಂದ ಎಲ್ಲಾ ವಿಷಯವನ್ನು ತಿಳಿದರು. ಊಟದ ನಂತರ ಅಗಸ್ತ್ಯರು ವಾತಾಪಿ ಜೀರ್ಣಂ! ವಾತಾಪಿ ಜೀರ್ಣಂ! ಎಂದು ಹೇಳಿದರು. ನಂತರ ಇಲ್ವಲನು ವಾತಾಪಿಯನ್ನು ಕರೆದನು. ಆಗ ಇನ್ನೆಲ್ಲಿ ವಾತಾಪಿ ನನ್ನ ಹೊಟ್ಟೆಯಲ್ಲಿ ಜೀರ್ಣವಾದನು ಎಂದು ಅಗಸ್ತ್ಯರು ಹೇಳಿದರು. ಆಗ್ರಹಿಸಿದ ಇಲ್ವಲನು ತನ್ನ ರಾಕ್ಷಸ ರೂಪವನ್ನು ತೋರಿಸಿದನು. ಆಗ ಅಗಸ್ತ್ಯನು ಮಾಡಿದ ಓಂಕಾರಕ್ಕೆ ಆತನು ಭಸ್ಮನಾದನು. ಅದಕ್ಕೆ ಚಿಕ್ಕ ಮಕ್ಕಳಿಗೆ ಯಾವುದೇ ಆಹಾರವನ್ನು ನೀಡಿದಾಗ ಅವರ ಹೊಟ್ಟೆಯ ಮೇಲೆ ವಾತಾಪಿ ಜೀರ್ಣಂ! ವಾತಾಪಿ ಜೀರ್ಣಂ ಎಂದು ಹಿರಿಯರು ಹೇಳುತ್ತಾರೆ. ಏಕೆಂದರೆ ರಾಕ್ಷಸ ನಂತವನೇ ಅಗಸ್ತ್ಯರ ಮಾತಿಗೆ ಜೀರ್ಣನಾದನಲ್ಲವೇ. ಅದಕ್ಕಾಗಿ ಮಕ್ಕಳು ತಿಂದ ಆಹಾರ ಬೇಗ ಜೀರ್ಣವಾಗಿ ಬಲವಂತನಾಗಬೇಕೆಂದು ಹಿರಿಯರ ಕೋರಿಕೆ, ಮತ್ತು ಈ ಮಾತಿನ ಪರಮಾರ್ಥ.

ನೀತಿಕಥೆ

# ಹೀಗಿರಲಿ ನಮ್ಮ ನಿಮ್ಮೆಲ್ಲರ ಗೆಳೆತನ




**ಎ.ಆರ್. ರಘುರಾಮ**
9916138436


ಒಬ್ಬ ವ್ಯಕ್ತಿಯ ಗುಣ ಸ್ವಭಾವಗಳನ್ನು ಅರ್ಥ ಮಾಡಿಕೊಳ್ಳಬೇಕು ಎಂದರೆ ಆತನಿಗಿರುವ ಸ್ನೇಹಿತರು ಯಾರು ಯಾರು ಎಂದು ಗಮನಿಸಿದರೆ ಸಾಕು. ಅಂದರೆ ನಾವು ಯಾರಲ್ಲಿ ಸ್ನೇಹ ಮಾಡುತ್ತೇವೆ, ಯಾರೊಂದಿಗೆ ಬೆರೆಯುತ್ತೇವೆ, ಎಂಥವರಲ್ಲಿ ಭಾವನೆಗಳನ್ನು ಹಂಚಿಕೊಂಡು ಹತ್ತಿರ ವಾಗಿ ರುತ್ತೇವೆ ಎಂಬುದು ನಮ್ಮತನದ ಕನ್ನಡಿಯಾಗಿರುತ್ತದೆ.ಹಾಗಾಗಿ ನಾವು ಯಾವತ್ತೂ ಉತ್ತಮರ ಸಂಗವನ್ನೇ ಮಾಡುವುದು ವಿಹಿತ.

ಅಜ್ಜಿ ತನ್ನ ಮೊಮ್ಮಗನಿಗೆ ಸಜ್ಜನರ ಸ್ನೇಹದ ಮಹತ್ವವನ್ನು ಹೇಳು ತ್ತಿದ್ದಳು. ತುಂಬಾ ಚುರುಕಿನ ಸ್ವಭಾವದವನಾದ ಆತ 'ದುರ್ಜನರ ಸಂಗ ವನ್ನು ಏಕೆ ಮಾಡಬಾರದು? ಎಂದು ಪ್ರಶ್ನೆ ಹಾಕಿದ. ಅದಕ್ಕಾಗಿ ಒಂದು ಪ್ರಸಂಗವನ್ನು ಆಕೆ ಹೇಳಿದರು. ಗೊಂಡಾರಣ್ಯದ ನಡುವೆ ದೊಡ್ಡ ಆಲದ ಮರ. ಅದರ ಕೆಳಗಿನ ಗೂಡಿನಲ್ಲಿ ಉಡಗಳ ದೊಡ್ಡ ಕುಟುಂಬವೇ ವಾಸ ವಾಗಿತ್ತು, ರಾಜನಿಗೆ ಬಹಳ ನಿಷ್ಟರಾಗಿದ್ದ ಉಡಗಳು ಕೋಟೆ, ಕೊತ್ತಲಗಳನ್ನು ಏರಲು ಸೈನಿಕರಿಗೆ ನೆರವಾಗುತ್ತಿದ್ದವು. ಇಂತಹಾ ಕುಟುಂಬದ ಉಡದ ಮರಿಯೊಂದು ಗೋಸುಂಬೆಯ ಗೆಳೆತನ ಮಾಡಿತು. ಇದನ್ನು ಗಮನಿಸಿದ ಉಡಗಳ ಮುಖಂಡ ಮರಿಯನ್ನು ಕರೆದು ಬುದ್ಧಿವಾದ ಹೇಳಿತು. ಗೋಸುಂಬೆ ನಮ್ಮಷ್ಟು ಶಕ್ತಿಯುತ ಪ್ರಾಣಿಯಲ್ಲ. ಕಷ್ಟ ಪಡುವುದಿಲ್ಲ. ಸಮಯ, ಸಂದರ್ಭಕ್ಕೆ ತಕ್ಕಂತೆ ತನ್ನ ಬಣ್ಣ ಬದಲಿಸುತ್ತದೆ. ಆದರ ಜತೆ ನಮ್ಮ ಸ್ನೇಹ ಒಳಿತಲ್ಲ ಎಂದು ತಿಳಿ ಹೇಳಿತು.ಉಡದ ಮರಿಗೆ ಇದ್ಯಾವುದೂ ತಲೆಗೆ ಹೋಗಲಿಲ್ಲ.ಅದು ಗೋಸುಂಬೆಯೊಂದಿಗೆ ತನ್ನ ಸ್ನೇಹ ಮುಂದುವರಿಸಿತು.

ನೂರಾರು ಉಡಗಳು ಒಂದೇ ಕಡೆ ಇರುವುದನ್ನು ಬೇಟೆಗಾರನೊಬ್ಬ ಗಮನಿಸಿದ. ಅವನ ಬಳಿ ತೆರಳಿದ ಗೋಸುಂಬೆ, ನನಗೆ ಉಡಗಳ ಬಗ್ಗೆ ಎಲ್ಲಾ ಗೊತ್ತು. ಅವು ವಾಸವಾಗಿರುವ ದೊಡ್ಡ ಗೂಡನ್ನು ನನಗೆ ಬಿಟ್ಟುಕೊಡುವುದೇ ಆದರೆ ನಾನು ನಿನಗೆ ಸಹಾಯ ಮಾಡುತ್ತೇನೆ ಎಂದು ಬೇಟೆಗಾರನಿಗೆ ತಿಳಿಸಿತು. ಎಲ್ಲ ಉಡಗಳು ಒಟ್ಟಿಗೆ ಬೇಟೆಗೆ ಸಿಕ್ಕರೆ ಗೂಡು ನಿನಗೇ ಎಂದಾತ ಭರವಸೆ ಕೊಟ್ಟ. ಸಂಜೆ ವೇಳೆಗೆ ಉಡಗಳೆಲ್ಲವೂ ಗೂಡು ಸೇರುತ್ತವೆ. ಆಗ ಗೂಡಿಗೆ ಬೆಂಕಿ ಹಚ್ಚು ಎಂದು ಸಲಹೆ ಕೊಟ್ಟಿತು. ಆತ ಹಾಗೇ ಮಾಡಿದ. ಉಸಿರುಗಟ್ಟಿದಂತಾಗಿ ಉಡಗಳೆಲ್ಲವೂ ಹೊರ ಬಂದ ಕೂಡಲೇ ಬಲೆ ಬೀಸಿ ಹಿಡಿದು ಕೊಂದ. ಒಂದು ಗೋಸುಂಬೆ ಸ್ನೇಹದಿಂದ ಉಡಗಳ ಕುಟುಂಬವೇ ನಾಶವಾಯಿತು. ಅಜ್ಜಿ ಹೇಳಿದ ಕತೆ ಮೊಮ್ಮಗನ ಕಣ್ಣು ತೆರೆಸಿತು.

ಕೆಟ್ಟ ಸ್ನೇಹಿತ ನಮ್ಮ ಅವನತಿಗೆ ಕಾರಣ ನಾಗುತ್ತಾನೆ. ಸಗಣಿಯೊಡನೆ ಸ್ನೇಹಕ್ಕಿಂತಾ ಗಂಧದೊಡನೆ ಗುದ್ದಾಟವೇ ಲೇಸು ಎಂಬ ಗಾದೆಯೇ ಇದೆ. ಉತ್ತಮ ಸ್ನೇಹಿತ ನಮ್ಮ ಬದುಕನ್ನು ಪಾವನಗೊಳಿಸುತ್ತಾನೆ. ಪಾಪದ ಕೆಲಸಗಳನ್ನು ತಪ್ಪಿಸುತ್ತಾನೆ. ಒಳ್ಳೆಯ ದಾರಿಯಲ್ಲಿ ನಡೆಸುತ್ತಾನೆ. ಗುಟ್ಟನ್ನು ಬಚ್ಚಿಡುತ್ತಾನೆ. ಗುಣಗಳನ್ನು ಪ್ರಕಟಿಸು ತ್ತಾನೆ. ಕಷ್ಟದಲ್ಲಿ ಕೈ ಹಿಡಿಯುತ್ತಾನೆ. ಜ್ಞಾನ ವಿಕಾ ಸಕ್ಕೆ ಪ್ರೇರಕನಾಗುತ್ತಾನೆ. ಇಂತಹಾ ಮಿತ್ರರನ್ನೇ ಸದಾ ಸಂಪಾದಿಸಬೇಕು. ಅವರೊಡನೆ ಅನು ಗಾಲ ಗೆಳೆತನ ಉಳಿಸಿಕೊಳ್ಳಬೇಕು. ಇದರಿಂದ ನಮ್ಮ ವಿದ್ಯೆ, ಶಕ್ತಿ, ಸಾಮರ್ಥ್ಯ ಗೌರವ ಇಮ್ಮಡಿ ಸುತ್ತದೆ, ಜೀವನ ಉಜ್ಜಲಗೊಳ್ಳುತ್ತದೆ.

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.**

**ಜೊತೆಗೆ " ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಧ್ಯಾನಿಸಬೇಕು.**

**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧನೆಯನ್ನು ಮಾಡುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

ಬಾ
ಲ
ವಿ
ನೋ
ದಿ
ನಿ

ಈಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....



ಈ ಗೊಂಬೆಯನ್ನು ನೋಡಿ ಬಣ್ಣವನ್ನು ತುಂಬಿರಿ.



ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಟ್ಟ ಡು ಮ ವಿ ಕೈ ಲ್ಲಿ ಡು ಗು ನ್ನು ಕೂ

ವ ಆ ಗು ಯ ನ ವ ಕಾ ವ ತೆ ಮ

ಆಡುವ ಮಗುವಿನ ಕೈಯಲ್ಲಿ ಕಾಡುವ ಮಗುವನ್ನು ಕೊಟ್ಟಂತೆ

ಉತ್ತರಗಳು:

## ದಾರಿ ತೋರಿಸಿ



ಯಾವ ದಾರಿಯಲ್ಲಿ ಹೋದರೆ ಸಂಖ್ಯೆ 15 ಬರುತ್ತದೆ ಆ ಸಂಖ್ಯೆ ಬರುವ ದಾರಿಯಲ್ಲಿ ಆ ಬಾಲಕಿ ಶ್ರೀ ಲಕ್ಷ್ಮೀ ದೇವಿಯನ್ನು ಸೇರುತ್ತಾಳೆ.

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01. ಆಡಿಕೃತ್ತಿಕೆ ಯಾವ ನಕ್ಷತ್ರದಂದು ನಡೆಯುತ್ತದೆ?......................................................................
02. ಪರಮೇಶ್ವರನು ಯಾರಿಗೆ ವರಮಹಾಲಕ್ಷ್ಮಿ ವ್ರತಾಚರಣೆ ಬಗ್ಗೆ ಹೇಳಿದರು? ..............................................
03. ನಾಗರ ಪಂಚಮಿ ಯಾವ ಮಾಸದಲ್ಲಿ ಬರುತ್ತದೆ? ........................................ ....................................
04. ಅಧಿಕ ಮಾಸವನ್ನು ಏನೆಂದು ಕರೆಯುತ್ತಾರೆ? .........................................................................
05. ಕೋರವಾರೇಶನನ್ನು ಯಾರು ಪ್ರತಿಷ್ಠಾಪಿಸಿದರು? ............................................................ ...................
06. ಯಾರ ಮಾತಿನಿಂದ ತುಳಸಿದಾಸರಿಗೆ ಜ್ಞಾನೋದಯವಾಯಿತು?........ ................................................ .......
07. ಆನೇಕಲ್ಲಿನಲ್ಲಿ ಬ್ರಹ್ಮರಥೋತ್ಸವ ಎಂದು ನಡೆಯುತ್ತದೆ? ........................................ ...............................
08. ಕರ್ನಾಟಕದ ಮೀರಾ ಎಂದು ಪ್ರಖ್ಯಾತರಾದವರ್ಯಾರು? ............................... ........................................
09.ವರಗಳ ಕೊಡುವ ತಾಯಿ ಯಾರು? ................................ ............................. ....................................
10. ಉಪಾಕರ್ಮ ದಂದು ಏನು ಬದಲಾಯಿಸುತ್ತಾರೆ?.......................... ..................................................
11. ಕೇರಳದ ಯಾವ ದೇವಾಲಯದಲ್ಲಿ ಓಣಂ ಹಬ್ಬದ ಉಲ್ಲೇಖವಿದೆ? ................................... ...........................
12. ಕುಂಭಕೋಣಂ ಅನ್ನು ಏನೆಂದು ಕರೆಯುತ್ತಾರೆ?.........................................................................
13.ವೈಕುಂಠವು ಯಾರ ನಿವಾಸ ?.........................................................................................
14. ಅಜ್ಜಿ ಮೊಮ್ಮಗನಿಗೆ ಯಾವ ಸ್ನೇಹದ ಮಹತ್ವವನ್ನು ಹೇಳುತ್ತಿದ್ದಳು? .................................. ...........................
15 ಪಾಂಡವರು ರಹಸ್ಯವಾಗಿ ಎಲ್ಲಿಗೆ ತಲುಪಿದರು? ...........................................................................



## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.07.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ಕ್ವಿಜ್**

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| **ಹೆಸರು :** | **ವಿಳಾಸ :** |
| **ಚಂದಾ ಸಂಖ್ಯೆ :** | |
| **ತಂದೆಯ ಹೆಸರು :** | |
| **ತಾಯಿಯ ಹೆಸರು:** | **ದೂರವಾಣಿ ಸಂಖ್ಯೆ:** |

## ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು



.................................

.................................

.................................

.................................

ಅಷ್ಟಲಕ್ಷ್ಮೀ, ಲಕ್ಷ್ಮೀದೇವಿ, ವ್ರತ, ಶ್ರಾವಣಮಾಸ, ಸಂಬಂಧಿಸಿದ ವಸ್ತುಗಳು ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.



ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



**ಬೀಸಣಿಗೆ, ದೀಪ, ಸ್ವಸ್ತಿಕ್, ಮಹಿಳೆ, ಮೋಡ, ಶಹನಯಹೀ, ಮತ್ತು ತಾವರೆ ಹೂ**

# ಬಕಾಸುರ ವಧೆ

ಚಿತ್ರಕಥೆ

ಕಥೆ: ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ.ದ್ವಾರಕಾನಾಥ್




ಕುಂತಿ ಆ ಮನೆಯವರನ್ನು ಒಪ್ಪಿಸಿದಳು. ಉಳಿದ ಏರ್ಪಾಟುಗಳನ್ನು ಆ ಮನೆಯವರು ಮಾಡಿದರು.
ಬಕಾಸುರನ ಗುಹೆಗೆ ಆಹಾರದೊಂದಿಗೆ ಭೀಮಸೇನನು ಹೋದನು.
ಹಸಿವಾಗುತ್ತಿದೆ ಬೇಗ ಬಾ!
ಅಯ್ಯೋ! ಬಕಾಸುರಾ! ನಾನು ನಿನ್ನ ಎಲ್ಲಾ ಆಹಾರವನ್ನು ಸೇವಿಸಿದೆ!
ನೀನು ಇರುವೆಯಲ್ಲಾ ! ನಾನು ನಿನ್ನನ್ನು ತಿನ್ನುತ್ತೇನೆ. .
ನನ್ನ ಗಂಟಲಿಗೆ ಅಡ್ಡ ಬರುತ್ತೀಯಾ? ಯುದ್ಧಕ್ಕೆ ಬಾರೋ
ಭೀಮ ಮತ್ತು ಬಕಾಸುರನ ಮಧ್ಯೆ ಘೋರ ಯುದ್ಧ ನಡೆಯಿತು.
ದಾನವಾ !
ಮಾನವಾ
ಹೂಂ...
ಹೂಂ..
ಕೊನೆಗೆ ಭೀಮನ ಹೊಡೆತಕ್ಕೆ ಬಕಾಸುರನು ಮರಣ ಹೊಂದಿದನು ಬಕಾಸುರನನ್ನು ಗಾಡಿಯಲ್ಲಿ ಹಾಕಿಕೊಂಡು ಅಗ್ರಹಾರಕ್ಕೆ ಭೀಮನು ಬಂದನು.
ಜನರೆಲ್ಲಾ ಭೀಮಸೇನನಿಗೆ ಜಯಕಾರ ಹೇಳಿದರು.
ಜಯಹೋ...ಜಯಹೋ...
ಸರ್ವೇ ಜನಾಃ ಸುಖಿನೋ ಭವಂತು

తిరుమలె తిరుపతి దేవస్థానగళు. తిరుపతి

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

## ತಿರುಮಲೆ ತಿರುಪತಿ ದೇವಸ್ಥಾನಗಳು



# ತಿರುಮಲೆ
# ಶ್ರೀ ವೇಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು
## (2023 ಸೆಪ್ಟೆಂಬರ್ 18 ರಿಂದ 26 ರ ವರೆಗೆ)

| | | |
|---|---|---|
| 18-09-2023<br>ಸೋಮವಾರ<br>ಹಗಲು : ಧ್ವಜಾರೋಹಣ<br>ರಾತ್ರಿ : ದೊಡ್ಡಶೇಷವಾಹನ | 19-09-2023<br>ಮಂಗಳವಾರ<br>ಹಗಲು : ಚಿಕ್ಕಶೇಷವಾಹನ<br>ರಾತ್ರಿ : ಹಂಸವಾಹನ | 20-09-2023<br>ಬುಧವಾರ<br>ಹಗಲು : ಸಿಂಹವಾಹನ<br>ರಾತ್ರಿ :<br>ಮುತ್ತಿನಚಪ್ಪರವಾಹನ |
| 21-09-2023<br>ಗುರುವಾರ<br>ಹಗಲು : ಕಲ್ಪವೃಕ್ಷವಾಹನ<br>ರಾತ್ರಿ :<br>ಸರ್ವಭೂಪಾಲವಾಹನ | 22-09-2023<br>ಶುಕ್ರವಾರ<br>ಹಗಲು : ಪಲ್ಲಕಿಯಲ್ಲಿ ಮೋಹಿನಿ<br>ಅವತಾರೋತ್ಸವ<br>ರಾತ್ರಿ : ಗರುಡವಾಹನ | 23-09-2023<br>ಶನಿವಾರ<br>ಹಗಲು : ಹನುಮದ್ವಾಹನ<br>ರಾತ್ರಿ : ಗಜವಾಹನ |
| 24-09-2023<br>ಭಾನುವಾರ<br>ಹಗಲು : ಸೂರ್ಯಪ್ರಭವಾಹನ<br>ರಾತ್ರಿ : ಚಂದ್ರಪ್ರಭವಾಹನ | 25-09-2023<br>ಸೋಮವಾರ<br>ಹಗಲು : ರಥೋತ್ಸವ<br>ರಾತ್ರಿ : ಅಶ್ವವಾಹನ | 26-09-2023<br>ಮಂಗಳವಾರ<br>ಹಗಲು : ಚಕ್ರಸ್ನಾನ<br>ರಾತ್ರಿ : ಧ್ವಜಾವರೋಹಣ |

## ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಮಲೆ
# ಶ್ರೀ ವೇಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು
## (2023 ಅಕ್ಟೋಬರ್ 15 ರಿಂದ 23 ರ ವರೆಗೆ)



| | | |
|---|---|---|
| 15-10-2023<br>ಭಾನುವಾರ<br>ಹಗಲು :<br>ಬಂಗಾರು ತಿರುಚ್ಚಿ ಉತ್ಸವ<br>ರಾತ್ರಿ : ದೊಡ್ಡಶೇಷವಾಹನ | 16-10-2023<br>ಸೋಮವಾರ<br>ಹಗಲು : ಚಿಕ್ಕಶೇಷವಾಹನ<br>ರಾತ್ರಿ : ಹಂಸವಾಹನ | 17-10-2023<br>ಮಂಗಳವಾರ<br>ಹಗಲು : ಸಿಂಹವಾಹನ<br>ರಾತ್ರಿ :<br>ಮುತ್ತಿನಚಪ್ಪರವಾಹನ |
| 18-10-2023<br>ಬುಧವಾರ<br>ಹಗಲು : ಕಲ್ಪವೃಕ್ಷವಾಹನ<br>ರಾತ್ರಿ : ಸರ್ವಭೂಪಾಲ ವಾಹನ | 19-10-2023<br>ಗುರುವಾರ<br>ಹಗಲು : ಪಲ್ಲಕಿಯಲ್ಲಿ ಮೋಹಿನಿ<br>ಅವತಾರೋತ್ಸವ<br>ರಾತ್ರಿ : ಗರುಡವಾಹನ | 20-10-2023<br>ಶುಕ್ರವಾರ<br>ಹಗಲು :<br>ಹನುಮದ್ವಾಹನ<br>ರಾತ್ರಿ : ಗಜವಾಹನ |
| 21-10-2023<br>ಶನಿವಾರ<br>ಹಗಲು : ಸೂರ್ಯಪ್ರಭವಾಹನ<br>ರಾತ್ರಿ : ಚಂದ್ರಪ್ರಭವಾಹನ | 22-10-2023<br>ಭಾನುವಾರ<br>ಹಗಲು : ಸ್ವರ್ಣರಥೋತ್ಸವ<br>ರಾತ್ರಿ : ಅಶ್ವವಾಹನ | 23-10-2023<br>ಸೋಮವಾರ<br>ಹಗಲು : ಚಕ್ರಸ್ನಾನ<br>ರಾತ್ರಿ : ತಿರುಚ್ಚಿ ಉತ್ಸವ |

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-07-2023 and Posting at Tirupati. RMS Regd. with the Registrar of Newspapers for India
underRNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment
No. PMGK/RNP/WPP-04(6)/2021-2023" Posting on 20th of Every Month.

